RNI:KARKAN/2021/85750 KPL/L/RNP/02/24-26

# ಕರುನಾಡ ಕಂದ


Volume 4 ಸಂಪುಟ 4 | Issue 20 ಸಂಚಿಕೆ 20 | Date 01-09-2025 | Page 16 ಪುಟ 16

ಬೆಲೆ: 20/-

FORTNIGHTLY ಪಾಕ್ಷಿಕ ಪತ್ರಿಕೆ

ಸಂಪಾದಕರು: ಬಸವರಾಜ ಬಳಿಗಾರ
ಮೋ.ನಂ: 9986366909

## ಕಂಪ್ಲಿ ಸಕ್ಕರೆ ಕಾರ್ಖಾನೆ ಆರಂಭ ಯಾವಾಗ..!?





## ಕೋಳುರ್ಗಿ ಪಿಡಿಓ ನಿರ್ಲಕ್ಷ್ಯಕ್ಕೆ ಬೇಸತ್ತ ದೇಗಿನಾಳ ಗ್ರಾಮಸ್ಥರ ಎಚ್ಚರಿಕೆ !?

## ಇಲಾಖೆಗಳ ಸಮನ್ವಯ ಕೊರತೆ, ಅಭಿವೃದ್ಧಿಯಿಲ್ಲದೆ ಬಾಡಿದ ಸ್ಥಿತಿಯಲ್ಲಿ ಜಲಪಾತ ಪ್ರದೇಶ : ನಿರಾಶರಾದ ಪ್ರವಾಸಿಗರು

## ಪ್ರಕೃತಿಯನ್ನು ಹಾಳು ಮಾಡಿದರೆ ದುರಂತ ತಪ್ಪಿದ್ದಲ್ಲ : ಪೂಜ್ಯ ಶಿವಾನಂದ ಗುರೂಜಿ





## ಗುರುವೇ ನಿಮಗೆಂದೆಂದಿಗೂ ನಾವುಗಳು ಚಿರ ಋಣಿ

## ನಯನ ಮನೋಹರ ಪವಿತ್ರ ಯಾತ್ರಾ ಸ್ಥಳ ಮುಡುಕುತೊರೆ

## ಜನಸೇವೆಯಲ್ಲಿ ಸಾರ್ಥಕತೆ – ಜನಪದ ಸಂಗೀತದಲ್ಲಿ ಜನಾರ್ಧನನ ಕಂಡ ಜನಸೇವಕಿ ಎಲ್.ಶ್ಯಾಮಲಾ



## ಸಮಾಜ ಸೇವೆಯೇ ಕುಮಾರಸ್ವಾಮಿಯ ಉಸಿರು

### ಮೆಟ್ರಿ ಗ್ರಾ. ಪಂ ಸದಸ್ಯನ ಕಾಯಕದ ಹೆಜ್ಜೆ : ಕಂಪ್ಲಿ ಶಾಸಕರಿಂದ ಗೌರವ



## ನಾವು ಶಿಕ್ಷಕರು, ನಮ್ಮ ಶಿಕ್ಷಣ ಹೀಗಿರಲಿ...



## ಜೀವ ಒತ್ತೆ ಇಟ್ಟು ಬೆಳಕು ನೀಡುವ ಪವರ್ ಮ್ಯಾನ್‌ಗಳೇ... ನಿಮಗೆ ನಮ್ಮ ನಮನ

ಕರುನಾಡ ಕಂದ
ಸಂಪುಟ 04 | ಸಂಚಿಕೆ 20
ದಿನಾಂಕ: 01-09-2025 ಪುಟಗಳು:16

### ಜೀವ ಒತ್ತೆ ಇಟ್ಟು ಬೆಳಕು ನೀಡುವ ಪವರ್ ಮ್ಯಾನ್‌ಗಳೇ...

# ನಿಮಗೆ ನಮ್ಮ ನಮನ




ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಅಗರಖೇಡ ಗ್ರಾಮದಿಂದ ಗುಬ್ಬೆವಾಡ ಗ್ರಾಮಕ್ಕೆ ಹೋಗುವ ದಾರಿಯ ಭೀಮಾ ನದಿಗೆ ಉಜನಿಯಿಂದ ನೀರು ಬಿಟ್ಟಿರುವುದರಿಂದ ಹಿನ್ನೀರಿನಿಂದ ಗುಬ್ಬೇವಾಡಕ್ಕೆ ಹಾಗೂ ಶಿರಗೂರ ಗ್ರಾಮಕ್ಕೆ ಹೋಗುವ ದಾರಿ ಸಂಪೂರ್ಣ ನೀರು ಆವರಿಸಿಕೊಂಡು ಬಂದ್ ಆಗಿದ್ದು, ಇತ್ತೀಚಿಗೆ ಅಗರಖೇಡ, ಗುಬ್ಬೆವಾಡ, ಶಿರಗೂರ ಗ್ರಾಮಗಳಿಗೆ ವಿದ್ಯುತ್ ಫಾಲ್ಟ್ ಆಗಿದ್ದು ಅದನ್ನು ಸರಿಪಡಿಸಲು ಹೆಸ್ಕಾಂ ಮೆಕ್ಯಾನಿಕ್ ಶರಣಪ್ಪ ಅವಟಿ ಇವರ ಮಾರ್ಗದರ್ಶನದಲ್ಲಿ ಪವರ್ ಮೆನ್ ಮಲ್ಲು ಹೊನ್ನೂರ ಇವರು ಎದೆಯ ಮಟ್ಟಕ್ಕೆ ನೀರು ಹರಿಯುತ್ತಿದ್ದರೂ ಅದರಲ್ಲಿ ಸಂಚರಿಸಿ ಲೈನ್ ಫಾಲ್ಟ್ ಅಟೆಂಡ್ ಮಾಡಿ ಎಲ್ಲಾ ಹಳ್ಳಿಗಳಿಗೆ ವಿದ್ಯುತ್ ಸರಬರಾಜು ಮಾಡಿಸಿದರು.

ಮನೆಯಲ್ಲಿ ವಿದ್ಯುತ್ ಹೋದ ತಕ್ಷಣ ಎಲ್ಲರೂ ಪವರ್ ಮ್ಯಾನ್ ನನ್ನು ಬಾಯಿಗೆ ಬಂದಂತೆ ಬೈಯುತ್ತೇವೆ ಆದರೆ ಅವರು ನಮಗಾಗಿ ಬಿಸಿಲು ಮಳೆ ಚಳಿ ಯಾವುದನ್ನೂ ಲೆಕ್ಕಿಸದೆ ತಮ್ಮ ಜೀವವನ್ನು ಅಡವಿಟ್ಟು ಕೆಲಸ ಮಾಡುತ್ತಾರೆ. ಐಷಾರಾಮಿ ಜೀವನ ನಡೆಸುತ್ತಿರುವ ನಮಗೆಲ್ಲಾ ವಿದ್ಯುತ್ತಿನ ಅವಶ್ಯಕತೆ ಎಷ್ಟಿದೆಯೋ ಅಷ್ಟೇ ಪವರ್ ಮೆನ್ ಸುರಕ್ಷತೆಯ ಜವಾಬ್ದಾರಿಯೂ ಅಷ್ಟೇ ಇದೆ, ವಿದ್ಯುತ್ ಕಡಿತವಾದಾಗ ಅವರನ್ನು ತೆಗಳುವ ಬದಲು ಏನು ಆಗದಿರಲಿ ಸುರಕ್ಷಿತವಾಗಿರಲಿ ಎಂದು ಬೇಡಿಕೊಳ್ಳಿ, ಅವರಿಗೆ ಒಳ್ಳೆಯದಾಗಲಿ ಎಂದು ಮನಸಾರೆ ಹರಸಿ.

**-ವರದಿ ಮನೋಜ್ ನಿಂಬಾಳ**

# ಅಥಣಿಯಲ್ಲಿ ತಾಲೂಕ ಆಡಳಿತ ವತಿಯಿಂದ ಅದ್ದೂರಿ ಸ್ವಾತಂತ್ರ್ಯ ದಿನಾಚರಣೆ






ಬೆಳಗಾವಿ ಜಿಲ್ಲೆ ಅಥಣಿ ತಾಲೂಕಾ ಆಡಳಿತ ವತಿಯಿಂದ ಅಥಣಿ ಪಟ್ಟಣದ ಭೋಜರಾಜ ಕ್ರೀಡಾಂಗಣದಲ್ಲಿ 79 ನೇ ಸ್ವಾತಂತ್ರ್ಯ ದಿನಾಚರಣೆಯು ಅದ್ದೂರಿಯಾಗಿ ನೆರವೇರಿತು.

ಧ್ವಜಾರೋಹಣ ಸಮಾರಂಭದಲ್ಲಿ ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಅಥಣಿಯ ಜನಪ್ರಿಯ ಶಾಸಕರಾದ ಸನ್ಮಾನ್ಯ ಶ್ರೀ ಲಕ್ಷ್ಮಣ ಸವದಿಯವರು ಪಾಲ್ಗೊಂಡು ಮತಕ್ಷೇತ್ರದ ಸಮಗ್ರ ಅಭಿವೃದ್ಧಿ ಕುರಿತು ಮಾತನಾಡಿ ಅಥಣಿ ಕ್ಷೇತ್ರದಲ್ಲಿ ಶಿಕ್ಷಣದ ರಂಗದಲ್ಲಿ ಕ್ರಾಂತಿಕಾರಕ ಹೆಜ್ಜೆಗಳನ್ನು ಇಡುತ್ತಿದ್ದೇವೆ, ಎಂಟು ಪ್ರೌಢ ಶಾಲೆಗಳನ್ನು ಹೊಸದಾಗಿ ಪ್ರಾರಂಭ ಮಾಡುತ್ತಿದ್ದೇವೆ, ಅಥಣಿ ನಗರದಲ್ಲಿ ಒಂದು ಕನ್ನಡ ಮತ್ತೊಂದು ಉರ್ದು ಪ್ರೌಢಶಾಲೆಗಳನ್ನು ಪ್ರಾರಂಭಿಸುತ್ತಿದ್ದೇವೆ, ನಗರದಲ್ಲಿಎಲ್ಲಾ ಕಡೆ ಸಸಿಗಳನ್ನು ನೆಟ್ಟು ಅಥಣಿಯನ್ನು ಹಸಿರು ನಗರವನ್ನಾಗಿ ಮಾಡುತ್ತಿದ್ದೇವೆ ಎಂದು ಹೇಳಿದರು.

ಇದಲ್ಲದೆ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು, ಈ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅನೇಕ ಶಾಲೆಗಳ ಮಕ್ಕಳು ಭಾಗವಹಿಸಿದ್ದರು.

ಈ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರಥಮ ಬಹು ಮಾನವಾಗಿ 1,00,000/-ರೂಪಾಯಿಗಳನ್ನು ನವೋದಯ ಶಾರದಾಮಾತಾ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆ ಅಥಣಿ ಮುಡಿಗೇ-ರಿಸಿಕೊಂಡಿತು. ದ್ವಿತೀಯ ಬಹುಮಾನವಾಗಿ 50,000/- ರೂಪಾಯಿ ತುಳಜಾ ಶಂಕರ್ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ ಅಥಣಿ ಪಡೆದುಕೊಂಡಿತು. ತೃತೀಯ ಬಹುಮಾನ 25,000/- ರೂಪಾಯಿಗಳನ್ನು ವಿದ್ಯಾವರ್ಧಕ ಪ್ರಾಥಮಿಕ ಶಾಲೆ ಅಥಣಿ ಪಡೆದುಕೊಂಡಿತು.

ಈ ಸಂದರ್ಭದಲ್ಲಿ ಅಥಣಿ ಪುರಸಭೆ ಅಧ್ಯಕ್ಷರಾದ ಶ್ರೀಮತಿ ಶಿವಲೀಲಾ ಬುಟಾಳಿ, ಪುರಸಭೆಯ ಉಪಾಧ್ಯಕ್ಷರಾದ ಶ್ರೀಮತಿ ಭುವನೇಶ್ವರಿ ಯಕ್ಕಂಚ್ಚಿ, ಅಥಣಿಯ ತಹಶೀಲ್ದಾರ ಹಾಗೂ ದಂಡಾಧಿಕಾರಿಗಳಾದ ಶ್ರೀ ಸಿದ್ದರಾಯ ಬೋಸಗಿ, ಪೊಲೀಸ್ ಅಧಿಕಾರಿಗಳಾದ ಶ್ರೀ ಪ್ರಶಾಂತ ಮುನ್ನೊಳ್ಳಿ , ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶಿವಾನಂದ ಕಲ್ಲಾಪುರ, ಪುರಸಭೆ ಮುಖ್ಯಾಧಿಕಾರಿಗಳಾದ ಶ್ರೀ ಅಶೋಕ ಗುಡಿಮನಿ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎಂ,ಆರ್,ಮುಂಜೆ , ಕಾಂಗ್ರೆಸ್ ಪಕ್ಷದ ಯುವ ಧುರೀಣರು ಮತ್ತು ಸಮಾಜ ಸೇವಕರಾದ ಶ್ರೀ ಚಿದಾನಂದ ಸವದಿ, ಪುರಸಭೆಯ ಸದಸ್ಯರಾದ ಕಲ್ಲೇಶ್ ಮಡ್ಡಿ , ಪುರಸಭೆ ಸರ್ವ ಸದಸ್ಯರು, ತಾಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು, ಮಾಜಿ ಸೈನಿಕರು ಶಾಲಾ ಶಿಕ್ಷಕರು ಮತ್ತು ಪೋಷಕರು ಶಾಲಾ ಮುದ್ದು ಮಕ್ಕಳು ಉಪಸ್ಥಿತರಿದ್ದರು.

**ವರದಿಗಾರ. ವಿಠ್ಠಲ ಖೋಕಾಟೆ**

# ಲಕ್ಷ್ಮಣ ಸವದಿ ಉದ್ಯಾನವನ ಹಾಗೂ ಸಾವಿತ್ರಿಬಾಯಿ ಫುಲೆ ವೃತ್ತ ಉದ್ಘಾಟನೆ





**ಬೆಳಗಾವಿ :** ಅಥಣಿ ತಾಲೂಕಿನ ಶಿವಯೋಗಿ ನಗರದಲ್ಲಿ ಮಾಜಿ ಉಪ ಮುಖ್ಯಮಂತ್ರಿ ಹಾಗೂ ಅಥಣಿಯ ಜನಪ್ರಿಯ ಶಾಸಕರಾದ ಶ್ರೀ ಲಕ್ಷ್ಮಣ ಸವದಿ ಅವರಿಂದ ಶ್ರೀ ಲಕ್ಷ್ಮಣ ಸವದಿ ಉದ್ಯಾನವನ ಹಾಗೂ ಅಕ್ಷರದ ಅವ್ವ ಸಾವಿತ್ರಿ ಫುಲೆ ವೃತ್ತವನ್ನು ಉದ್ಘಾಟನೆಯನ್ನು ನೆರವೇರಿಸಲಾಯಿತು.

ಇದೆ ವೇಳೆ ಇದೆ ಕಾರ್ಯಕ್ರಮದಲ್ಲಿ ಗಿರೀಶ ದಿವಾನಮಳ ಹಾಗೂ ಸುರೇಶ್ ಆಲಬಾಳ ಅವರಿಂದ ಲಕ್ಷ್ಮಣ ಸವದಿ ಅವರಿಗೆ ಸತ್ಕಾರ ಮಾಡಿ ಸನ್ಮಾನಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಪ. ಪೂ. ಶ್ರೀ ಮರುಳಸಿದ್ಧ ಮಹಾಸ್ವಾಮೀಜಿಗಳು ಶೆಟ್ಟರಮಠ ಅಥಣಿ, ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾದ ಶ್ರೀ ಸದಾಶಿವ ಬುಟಾಳಿ, ಮುಖಂಡರಾದ ಶ್ರೀ ಶಿವಾನಂದ ದಿವಾನಮಳ, ಕೆಇಬಿ ಮಡ್ಡಿಯ ಮುಖಂಡರು ಹಾಗೂ ವಕೀಲರಾದ ಸದಾಶಿವ್ ಕಾಂಬಳೆ, ಸಂಕೋನಟ್ಟಿ ಗ್ರಾ.ಪಂ. ಅಧ್ಯಕ್ಷರಾದ ಶ್ರೀ ಶಂಕರ ಗಡದೆ, ಅರಣ್ಯಾಧಿಕಾರಿಗಳಾದ ಶ್ರೀ ರಾಕೇಶ ಅರ್ಜುನವಾಡ, ಮುಖಂಡರುಗಳಾದ ರಾಜು ಹಳ್ಳದಮಾಳ, ಗಿರೀಶ ದಿವಾನಮಳ, ಶ್ರೀಶೈಲ್ ಹಳ್ಳದಮಳ , ಸುರೇಶ್ ಆಲಬಾಳ , ಸಂಕೋನಟ್ಟಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಶಿವಯೋಗಿ ನಗರದ ಹಾಗೂ ಕೆಇಬಿ ಮಡ್ಡಿಯ ಹಿರಿಯ ಮುಖಂಡರು ಹಾಗೂ ನಾಗರಿಕರು ಉಪಸ್ಥಿತರಿದ್ದರು.

**ವರದಿ. ವಿಠ್ಠಲ ಖೋಕಾಟೆ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 20
ದಿನಾಂಕ: 01-09-2025 ಪುಟಗಳು:16

# ಕಂಪ್ಲಿ ಸಕ್ಕರೆ ಕಾರ್ಖಾನೆ ಆರಂಭ ಯಾವಾಗ..!?



**ವಿಶೇಷ ವರದಿ : ಜಿಲಾನಸಾಬ್ ಬಡಿಗೇರ್**

**ಬಳ್ಳಾರಿ / ಕಂಪ್ಲಿ :** ಜಗತ್ ಪ್ರಸಿದ್ಧ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಕಾರಣೀಭೂತವಾದ ಐತಿಹಾಸಿಕ ಹಿನ್ನಲೆಯ ಕಂಪ್ಲಿ ಪಟ್ಟಣದಲ್ಲಿ ಸಕ್ಕರೆ ಕಾರ್ಖಾನೆ ಇದ್ದಾಗ ಸಾವಿರಾರು ಜನ–ರಿಗೆ ಜೀವನಾಡಿಯಾಗಿತ್ತು. ನಾನಾ ಷಡ್ಯಂತ್ರಗಳಿಂದಾಗಿ ಸಕ್ಕರೆ ಕಾರ್ಖಾನೆ ನಶಿಸಿ ಹೋಗಿದ್ದು ದುರಂತ ಇತಿಹಾಸವಾಗಿದೆ.

ಇದೀಗ ಕಂಪ್ಲಿ ತಾಲೂಕು ಕೇಂದ್ರವಾಗಿ ಹೊರಹೊಮ್ಮಿದ ನಂತರ ದಿನೇ ದಿನೇ ಬೆಳೆಯುವ ಪಟ್ಟಣವಾಗಿ ರೂಪುಗೊಳ್ಳುತ್ತಿದೆ. ವಿದ್ಯಾವಂತ ಮತ್ತು ಕೌಶಲ್ಯಾಧಾರಿತ ಯುವ ಜನತೆಯ ಸಂಖ್ಯೆ ಹೆಚ್ಚಿದೆ, ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಪೂರಕವಾದ ಸೂಕ್ತ ವಾತಾವರಣ ಮಾರುಕಟ್ಟೆ ಇದೆ ,ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಸಾಕಷ್ಟು ಭೂಮಿ ಇದೆ, ತುಂಗಭದ್ರಾ ನದಿ ಇದೆ, ಕಬ್ಬು ಬೆಳೆಯುವ ಸಹಸ್ರಾರು ಹೆಕ್ಟೇರಷ್ಟು ಕೃಷಿ ಭೂಮಿ ಇದೆ. ಹಾಗಾಗಿ ಸಕ್ಕರೆ ಕಾರ್ಖಾನೆಯು ಸಹಕಾರಿ ಅಥ–ವಾ ಸರ್ಕಾರಿ ವಲಯದಿಂದ ಸಕ್ಕರೆ ಕಾರ್ಖಾನೆ ಸ್ಥಾಪನೆ ಆಗಬೇಕು ಯಾವುದೇ ಕಾರಣಕ್ಕೂ ಖಾಸಗಿ ವಲಯದಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆಯಾಗಲು ರೈತರು ಒಪ್ಪುವುದಿಲ್ಲ ಈ ಭಾಗದಲ್ಲಿ ನೀರಿನ ಸವಲತ್ತು ಬಹಳ ಇದೆ ಭತ್ತ, ಬಾಳೆ ಹಾಗೂ ಮೆಣಸು ಬೆಳೆದು ಆರ್ಥಿಕ ನಷ್ಟಕ್ಕೀಡಾಗಿ ಭೂಮಿ ಬಂಜರಾಗುವ ಆಪತ್ತಿನಲ್ಲಿ ರೈತರಿದ್ದು ಕಬ್ಬು ಬೆಳೆಯಲು ರೈತರು ಉತ್ಸಾಹರಾಗಿದ್ದಾರೆ ಕಬ್ಬು ಬೆಳೆಯುವುದರಿಂದ ಈ ಭಾಗದ ಮಣ್ಣಿನ ಫಲವತ್ತತೆಯನ್ನು ಕಾಪಾಡಬಹುದು ಕಂಪ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆ ಯಾದಲ್ಲಿ ವ್ಯಾಪಾರ, ವಾಣಿಜ್ಯಕ್ಕೂ ಬಹಳ ಅನುಕೂಲವಾಗುತ್ತದೆ ಗಂಗಾವತಿ ಹಾಗೂ ದರೋಜಿ ವಲಯ ಕಂಪ್ಲಿ ಮಾರ್ಗವಾಗಿ ರೈಲು ನಿರ್ಮಾಣ–ಕ್ಕೆ ಈಗಾಗಲೇ ಸರ್ವೆ ಆಗಿದೆ ಸಕ್ಕರೆ ಕಾರ್ಖಾನೆಗೆ ರೈಲು ಮಾರ್ಗವು ಬಹಳಷ್ಟು ಅನುಕೂಲವಾಗುತ್ತದೆ, ವ್ಯಾಪಾರ ವ್ಯವಹಾರ ಹೆಚ್ಚುತ್ತದೆ.

**ಕಂಪ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯ ಇತಿಹಾಸ :**

ಬಳ್ಳಾರಿ ಸೆಂಟ್ರಲ್ ಸಹಕಾರಿ ಸ್ಟೋರ್ ಮತ್ತು ರೈತರ ಶೇರುಗಳೊಂದಿಗೆ 1955 ಡಿಸೆಂಬರ್ 17ರಂದು ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ನವರು ಸಕ್ಕರೆ ಕಾರ್ಖಾನೆ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಿದ್ದರು. 1956 ರಲ್ಲಿ ಜರ್ಮನಿಯ ಯಂತ್ರೋಪಕರಣಗಳನ್ನು ಅಳವಡಿಸಿ 1958 ರಲ್ಲಿ ಕಬ್ಬು ನುರಿಸಲು ಆರಂಭಿಸಲಾಯಿತು. 1968 – 1969ರಲ್ಲಿ ಹಾಲಿ ಸಕ್ಕರೆ ಕಾರ್ಖಾನೆ, ಬಳ್ಳಾರಿ ಸೆಂಟ್ರಲ್ ಸ್ಟೋರ್‌ನಿಂದ ಬಿಡುಗಡೆಗೊಂಡು ಸ್ವತಂತ್ರವಾಗಿ ಕಂಪ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯಾಗಿ ಬದಲಾವಣೆಗೊಂಡಿತು, ಆರಂಭದಲ್ಲಿ 800 ಟನ್ ಕಬ್ಬು ನುರಿಸುತ್ತಿದ್ದ ಕಾರ್ಖಾನೆ ನಂತರ 1200 ಟನ್ ಕಬ್ಬು ನುರಿಸುವ ಮೂಲಕ 5,00,000ರೂ. ಲಾಭಗಳಿಸಿತ್ತು. 1977ರಲ್ಲಿ ಸರ್ಕಾರದ ನಾಮ ನಿರ್ದೇಶನ ಸದಸ್ಯರು ಆಡಳಿತ ಮಂಡಳಿ ಅಧ್ಯಕ್ಷರಾದ ನಂತರ ಅಧಿಕಾರ ದುರ್ಬಳಕೆಯಾಗಿ ನಷ್ಟದ ಹಾದಿ ಹಿಡಿಯಿತು. 1982 ರಿಂದ 1985 ರವರೆಗೆ ಪಾರದರ್ಶಕ ಮತ್ತು ಕಟ್ಟುನಿಟ್ಟಾದ ಆಡಳಿತದಿಂದ ಮತ್ತೆ ಆರ್ಥಿಕವಾಗಿ ಸುಧಾರಣೆ ಕಂಡಿತು. ಆದರೆ ನಂತರದ ದಿನಗಳಲ್ಲಿ ಮತ್ತೆ ನಷ್ಟದತ್ತ ಮುಖಮಾಡಿ 1995 ಜುಲೈ 21ರಂದು ಮುಚ್ಚಲ್ಪಟ್ಟಿತು. 126 ಎಕರೆ ಕೃಷಿ ಭೂಮಿ, ಗೋದಾಮು, ಸಿಬ್ಬಂದಿ ವಸತಿಗೃಹ ಕಟ್ಟಡಗಳ ಸ್ಥಳ ಸೇರಿ ಒಟ್ಟು ಮೌಲ್ಯ 90 ಕೋಟಿ ರೂಪಾಯಿ ಎಂದು ಅಂ–ದಾಜಿಸಲಾಗಿದೆ.

**ಸಹಕಾರಿ ಕಾರ್ಖಾನೆ ಸುಂದರಿ ಶುಗರ್ಸ್ ಹೇಗೆ ಆಯಿತು !**

ಇಂಥ ಕಾರ್ಖಾನೆಯನ್ನು ಕೇವಲ 8.1 ಕೋಟಿ ರೂ. ಗೆ ಆಂಧ್ರಪ್ರದೇಶ ಮೂಲದ ಉದ್ಯಮಿ ಸುಬ್ಬರಾವ್ ಎನ್ನುವರಿಗೆ 1998ರಲ್ಲಿ ಅಂದಿನ ಸರ್ಕಾರದ ಜನಪ್ರತಿನಿಧಿಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳು ಕೆಲವೊಂದು ಷರತ್ತುಗಳನ್ನು ವಿಧಿಸಿ ಮಾರಾಟ ಮಾಡಿ ರೈತರಿಗೆ ಬಹುದೊಡ್ಡ ಮೋಸ ಮಾಡಿದರು. ಅವರು ಕಾರ್ಖಾನೆ ಹೆಸರು ಬದಲಿಸಿ ಮೇ ಸುಂದರಿ ಶುಗರ್ಸ ಲಿಮಿಟೆಡ್. ಎಂದು ನಾಮಕರಣ ಮಾಡಿದರು.

**ನಿಬಂಧನೆಗಳನ್ನು ಗಾಳಿಗೆ ತೂರಿದ ಸುಂದರಿ**

1999 ಜನವರಿಯಿಂದ ಮಾರ್ಚ್ ವರೆಗೆ 25000 ಚೀಲ ಸಕ್ಕರೆ ಉತ್ಪಾದಿಸಿ ಕಾರ್ಖಾನೆಯನ್ನು ಬಂದ್ ಮಾಡಿದರು. ನಂತರ ಸುಸ್ಥಿತಿಯಲ್ಲಿದ್ದ ಕಾರ್ಖಾನೆಯ ಎಲ್ಲಾ ಯಂತ್ರೋಪಕರಣಗಳನ್ನು ಮುಂಬೈ ಮೂಲದ ಭಾವನಾ ಎಂಟರ್‌ಪ್ರೈಸಸ್ ಅವರಿಗೆ ಮಾರಾಟ ಮಾಡಲಾಯಿತು. ಸರ್ಕಾರ ಮಾರಾಟ ಮಾಡಿದ ಸಂದರ್ಭದಲ್ಲಿ ಬರೆದ ಕರಾರು ಪತ್ರದಲ್ಲಿ ಖರೀದಿದಾರರು ಹಾಲಿ ಸ್ಥಳದಲ್ಲಿಯೇ ಕಾರ್ಖಾನೆ ನಡೆಸಿಕೊಂಡು ಹೋಗಬೇಕು ಕಾರ್ಖಾನೆ ಯಂತ್ರೋಪಕರಣಗಳನ್ನು ಬೇರೆ ಕಡೆ ಸಾಗಿಸುವಂತಿಲ್ಲ ಎನ್ನುವ ನಿಬಂಧನೆಯನ್ನು ವಿಧಿಸಿತ್ತು. ಆದರೆ ಈ ಎಲ್ಲಾ ನಿಬಂಧನೆಗಳನ್ನು ಗಾಳಿಗೆ ತೂರಿದ ಮೇ ಸುಂದರಿ ಶುಗರ್ ಲಿಮಿಟೆಡ್ ಯಂತ್ರೋಪಕರಣಗಳನ್ನು ಅನೇಕರ ಕೃಪಾಕಟಾಕ್ಷದಿಂದ ಬೇರೆ ಕಡೆ ಸಾಗಿಸಿದರು. ಇವರ ಮೇಲೆ ಈ ಭಾಗದ ರೈತರು ಅವರ ವಿರುದ್ಧ ಸೂಕ್ತ ಕ್ರಮಕ್ಕೆ ಆಗ್ರಹಿಸಿ ಮತ್ತು ಅದೇ ಸ್ಥಳದಲ್ಲಿ ಹೊಸ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವಂತೆ ಮನವಿ ಮಾಡುತ್ತಲೇ ಬಂದಿದ್ದಾರೆ.

**ಜೋರಾದ ಕಾರ್ಖಾನೆಯ ನಿರ್ಮಾಣದ ಕೂಗು**

ಕಂಪ್ಲಿ ಸಕ್ಕರೆ ಕಾರ್ಖಾನೆಯನ್ನು ಗುಜರಿ ಅಬ್ದುಲ್ ಅಜೀಜ್ ಮತ್ತು ಮಾಜಿ ಸಚಿವರಾದ ಬಿ. ಶ್ರೀರಾಮುಲು ಅವರ ಆಪ್ತರು ಸೇರಿ ಖರೀದಿಸಿದ್ದಾರೆ ಎನ್ನಲಾಗಿದೆ. ಇನ್ನೇನು ಮೇ. ಸುಂದರಿ ಶುಗರ್ಸ್ ಲಿಮಿಟೆಡ್ ಪ್ರಾರಂಭವಾಯಿತು ಎನ್ನುವ ಸುದ್ದಿ ಭರ್ಜರಿ ಪ್ರಚಾರವೂ ಪಡೆಯಿತು. ಆದರೆ ಅದು ಆಗಲಿಲ್ಲ. ರೈತರು ಹೊಸ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ನಿರ್ಮಾಣ ಮಾಡಲೇಬೇಕು ಎನ್ನುವ ಕೂಗು ಕೇಳಿ ಬರುತ್ತಲಿದೆ.

ಈಗಾಗಲೇ ಕಂಪ್ಲಿ ವಿಧಾನಸಭಾ ಕ್ಷೇತ್ರದ ಶಾಸಕ ಜೆ. ಎನ್. ಗಣೇಶ್ ವಿಧಾನಸಭೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತಾ ಬಂದಿದ್ದಾರೆ. ಈಗ ಅವರದೇ ಪಕ್ಷದ ಸರ್ಕಾರವಿದ್ದು ಅದು ಏನೇ ಕಾನೂನು ತೊಡಕುಗಳಿದ್ದರೂ ನಿವಾರಿಸಿ ಆದ–ಷ್ಟು ಬೇಗ ಹೊಸ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ನಿರ್ಮಾಣ ಮಾಡಬೇಕು ಎನ್ನುವುದು ಕಂಪ್ಲಿ ಪಟ್ಟಣ ಸೇ–ರಿದಂತೆ ಸುತ್ತಮುತ್ತಲಿನ ರೈತರ ಹಾಗೂ ಸಾರ್ವಜನಿಕರ ಬೇಡಿಕೆಯಾಗಿದೆ.

# ಧರ್ಮಸ್ಥಳ ಅಸ್ಥಿರಗೊಳಿಸುವ ಕುತಂತ್ರ ರಾಜ್ಯ ಕಾಂಗ್ರೆಸ್ ಸರ್ಕಾರದ್ದು : ರಾಜೂನಾಯಕ ಆರೋಪ



**ಬಳ್ಳಾರಿ / ಕಂಪ್ಲಿ :** ಹಿಂದೂ ಧಾರ್ಮಿಕ ವಿರೋಧಿ ಶಕ್ತಿಗಳು ಧರ್ಮಸ್ಥಳಕ್ಕೆ ಕಪ್ಪುಚುಕ್ಕೆ ತರುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದು, ಧರ್ಮಸ್ಥಳವನ್ನು ಅಸ್ಥಿರಗೊಳಿಸುವ ಕುತಂತ್ರವನ್ನು ರಾಜ್ಯದ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ ಎಂದು ಕರ್ನಾಟಕ ಪ್ರದೇಶ ಜನತಾದಳ (ಜಾತ್ಯಾತೀತ) ಪಕ್ಷದ ಯುವ ಘಟಕದ ರಾಜ್ಯ ಕಾರ್ಯಾಧ್ಯಕ್ಷ ಹಾಗೂ ಕಂಪ್ಲಿ ವಿಧಾನಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ರಾಜೂನಾಯಕ ಗುಡುಗಿದರು.

ಅವರು ಪಟ್ಟಣದ ಅತಿಥಿ ಗೃಹದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಘಟನೆಯ ಹಿಂದೆ ಕೆಲವು ಎಡಪಂಥೀಯ ಸಂಘಟನೆಗಳ ಕೈವಾಡ ಇದೆ, ಸಾಮಾಜಿಕ ಜಾಲತಾಣದಲ್ಲಿ ಧರ್ಮಸ್ಥಳದ ಬಗ್ಗೆ ಇಲ್ಲಸಲ್ಲದ ಪೋಸ್ಟ್ ಹಾಕುವವರನ್ನು ಕೂಡಲೇ ಬಂಧಿಸಬೇಕು ಹಾಗೂ ಹಿಂದೂ ವಿರೋಧಿ ನೀತಿಯನ್ನು ರಾಜ್ಯ ಸರ್ಕಾರ ಕೈಬಿಡಬೇಕು ಹಾಗೂ ಮೈಸೂ–ರಿನ ಚಾಮುಂಡೇಶ್ವರಿ ದೇವಸ್ಥಾನ ಕೇವಲ ಹಿಂದೂಗಳದ್ದಲ್ಲ ಎಂದು ಹೇಳಿದ ಡಿ.ಸಿ.ಎಂ ಡಿ.ಕೆ ಶಿವಕುಮಾರ್ ಅವರು ಈ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು ಸಮಸ್ತ ನಾಡಿನ ಹಿಂದೂಗಳಲ್ಲಿ ಕ್ಷಮೆಯಾಚಿಸಬೇಕೆಂದು ಒತ್ತಾಯಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಅಪಪ್ರಚಾರ, ಷಡ್ಯಂತ್ರ ಹಾಗೂ ಸುಳ್ಳು ಆರೋಪಗಳ ವಿರುದ್ಧ ಜಾತ್ಯತೀತ ಜನತಾದಳವು " ಧರ್ಮಸ್ಥಳ ಸತ್ಯ ಯಾತ್ರೆ " ಕೈಗೊಂಡಿದ್ದು ಇದೇ ರವಿವಾರ 31ರಂದು ಧರ್ಮಸ್ಥಳಕ್ಕೆ ಭೇಟಿ ನೀಡಲಿದ್ದು, ಕಂಪ್ಲಿ ಕ್ಷೇತ್ರದ ಸೇರಿದಂತೆ ಜಿಲ್ಲೆಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಮುಖಂಡರು, ಕಾರ್ಯಕರ್ತರು ಆಗಮಿಸಿ ಯಶಸ್ವಿಗೊಳಿಸಬೇಕು ಎಂದರು.

ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಮೇಘರಾಜ, ನಗರ ಘಟಕ ಅಧ್ಯಕ್ಷ ಇರ್ಫಾನ್, ಮುಖಂಡರಾದ ಜಗದೀಶ ಪೂಜಾರ, ಅಂಜಿನಪ್ಪ, ನಾಗರಾಜ, ಗಾದಿಲಿಂಗಪ್ಪ, ನಿಂಗಪ್ಪ, ವಿರುಪಾಕ್ಷಿ, ರಾಜ, ಮಂಜುನಾಥ, ವೀರಣ್ಣ, ರಮೇಶ ಸೇರಿದಂತೆ ಇತರರು ಇದ್ದರು.

**ವರದಿ : ಜಿಲಾನಸಾಬ್ ಬಡಿಗೇರ್**

ಕರುನಾಡ ಕಂದ
ಸಂಪುಟ 04 | ಸಂಚಿಕೆ 20
ದಿನಾಂಕ: 01-09-2025 ಪುಟಗಳು:16

# ಸಮಾಜ ಸೇವೆಯೇ ಕುಮಾರಸ್ವಾಮಿಯ ಉಸಿರು

## ಮೆಟ್ರಿ ಗ್ರಾ. ಪಂ ಸದಸ್ಯನ ಕಾಯಕದ ಹೆಜ್ಜೆ : ಕಂಪ್ಲಿ ಶಾಸಕರಿಂದ ಗೌರವ

**ಬಳ್ಳಾರಿ/ಕಂಪ್ಲಿ :** ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿಗಳ ಜೊತೆಗೆ ಪರೀಕ್ಷೆ ಪ್ಯಾಡ್ ಗಳನ್ನು ನೀಡುತ್ತಾ, ಕಂಪ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಹೆಚ್ಚು ಬಾರಿ ರಕ್ತದಾನ ಮಾಡಿರುವ ಮೆಟ್ರಿ ಗ್ರಾ. ಪಂ. ಸದಸ್ಯ ಎಚ್.ಕುಮಾರಸ್ವಾಮಿ ಅವರನ್ನು ಶಾಸಕ ಜೆ. ಎನ್. ಗಣೇಶ್ ಗೌರವಿಸಿ ಸನ್ಮಾನಿಸಿದ್ದಾರೆ.

ಕಂಪ್ಲಿ ತಾಲೂಕಿನ ಮೆಟ್ರಿ ಗ್ರಾಮ ಪಂಚಾಯಿತಿ ಸದಸ್ಯ ಎಚ್. ಕುಮಾರಸ್ವಾಮಿ 'ಅಳಿಲ ಭಕ್ತಿ, ಮರಳ ಸೇವೆ' ಎನ್ನುವ ಹಾಗೆ ತಮ್ಮ ಗ್ರಾ. ಪಂ. ಸದಸ್ಯತ್ವದಲ್ಲಿ ಬರುವ ಗೌರವ ಧನವನ್ನು ಸಮಾಜಮುಖಿ ಕಾರ್ಯಗಳಿಗೆ ವಿನಿಯೋಗಿಸುತ್ತಾ ಇತರರಿಗೆ ಮಾದರಿಯಾಗಿದ್ದಾರೆ. ನುಡಿದಂತೆ ನಡೆಯುವ ಸರಳ ವ್ಯಕ್ತಿಯಾಗಿ ಜನಸಾಮಾನ್ಯರ ಸಮಸ್ಯೆಗಳಿಗೆ ಧ್ವನಿಯಾಗಿದ್ದು, ಇವರ ಬಗ್ಗೆ ಸಾರ್ವಜನಿಕ ವಲಯದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. 'ಸಮಾಜ ಸೇವೆಯೇ ಉಸಿರು' ಎಂದುಕೊಂಡಿರುವ ಮೆಟ್ರಿ ಗ್ರಾ. ಪಂ. ಸದಸ್ಯ ಎಚ್. ಕುಮಾರಸ್ವಾಮಿ ಗ್ರಾಮ ಮಟ್ಟದಲ್ಲಿ ಒಳ್ಳೆಯ ಹೆಸರು ಮಾಡುವ ಮೂಲಕ ಜನರ ಪ್ರೀತಿ, ವಿಶ್ವಾಸ ಸಂಪಾದಿಸಿದ್ದಾರೆ.



ವರದಿ: ಯಮನಪ್ಪ ಮಾದರ ,ರಾಮದುರ್ಗ

### 70 ಸಲ ರಕ್ತದಾನ:

ತುರ್ತು ಸಮಯದಲ್ಲಿರುವ ರೋಗಿಗಳಿಗೆ 70 ಸಲ ರಕ್ತದಾನ ಮಾಡಿದ್ದಾರೆ. ಈ ಕಾರಣಕ್ಕಾಗಿ ಕಂಪ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ಪತ್ರಿಕಾ ದಿನದಂದು ಶಾಸಕ ಜೆ.ಎನ್.ಗಣೇಶ್ ಅವರಿಂದ ಗೌರವ ಸನ್ಮಾನ ನೀಡಿದೆ. ಹೀಗೆ ಶಿಕ್ಷಣ, ಆರೋಗ್ಯ ಸೇರಿದಂತೆ ಹಲವು ರಂಗಗಳಲ್ಲಿ ಎಲೆ ಮರೆಕಾಯಿಯಂತೆ ಗ್ರಾ. ಪಂ ಸದಸ್ಯ ಎಚ್.ಕುಮಾರಸ್ವಾಮಿ ಸಮಾಜಮುಖಿ ಕೆಲಸದಲ್ಲಿ ನಿರತರಾಗಿದ್ದಾರೆ.



### ಕೋವಿಡ್ ಕಾಲಘಟ್ಟದಲ್ಲಿ ನೆರವು

ವೃದ್ಧರಿಗೆ ಅಗತ್ಯ ಔಷಧ ಖರೀದಿಸಲು, ಆರ್ಥಿಕ ತೊಂದರೆಯುಳ್ಳವ-ರಿಗೆ ಹಾಗೂ ಕೋವಿಡ್ ಸಮಯದಲ್ಲಿ ಮೆಡಿಸಿನ್ ಕಿಟ್ ನೀಡಿ ಮಾನವೀಯತೆ ಮೆರೆದಿದ್ದಾರೆ. ಇನ್ನೂ ಮೆಟ್ರಿ, ಚಿನ್ನಾಪುರ, ಉಪ್ಪಾರಹಳ್ಳಿ ಗ್ರಾಮಗಳ 11 ಕೇಂದ್ರಗಳ 225 ಅಂಗನವಾಡಿ ಕೇಂದ್ರಗಳ ಮಕ್ಕಳಿಗೆ ಸ್ಲೇಟ್, ಸ್ಕೂಲ್ ಬ್ಯಾಗ್, ಬಳಪದ ಡಬ್ಬಿ ಕೊಡುವ ಯೋಜನೆಯನ್ನು ಸಹ ಕೈಗೊಂಡಿದ್ದಾರೆ.



### ಸಮಾಜ ಸೇವೆಯ ಹೆಜ್ಜೆ



ಮೊದಲ ಬಾರಿ ಗ್ರಾ. ಪಂ ಸದಸ್ಯರಾಗಿರುವ ಎಚ್. ಕುಮಾರಸ್ವಾಮಿ ಅವರು ಮಾಸಿಕ 2000 ರೂ. ಗೌರವ ಧನವನ್ನು ಸ್ವಂತಕ್ಕೆ ಬಳಸದೆ, ಸಮಾಜ ಸೇವೆಗೆ ಬಳಸುತ್ತಿದ್ದಾರೆ. ಮೆಟ್ರಿ ಗ್ರಾಮದ 5 ಮತ್ತು 6ನೇ ವಾರ್ಡ್‌ನಲ್ಲಿ ಮೃತರಾಗುವ, ಆರ್ಥಿಕವಾಗಿ ಹಿಂದುಳಿದ ಕುಟುಂಬಕ್ಕೆ ಅಂತ್ಯಸಂಸ್ಕಾರಕ್ಕಾಗಿ 2000 ರೂ. ನೀಡುತ್ತಾರೆ. ಜತೆಗೆ ತಬ್ಬಲಿ (ತಂದೆ ತಾಯಿ ಇಲ್ಲದ) ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ನೋಟ್ ಪುಸ್ತಕಗಳನ್ನು ವಿತರಿಸುವುದು. ಗ್ರಾಮದ ಹೊನ್ನಳ್ಳಿ ಸಿದ್ದಪ್ಪನವರ ಸ. ಹಿ. ಪ್ರಾ ಶಾಲೆ ಆವರಣದಲ್ಲಿ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳು ಸಂಜೆ ವೇಳೆ ಅಭ್ಯಾಸ ಮಾಡಲು ವಿದ್ಯುತ್ ದೀಪ ಅಳವಡಿಸಿ ಬೆಳಕಿನ ವ್ಯವಸ್ಥೆ ಕಲ್ಪಿಸುವುದು, ಮಕ್ಕಳ ವಾರ್ಷಿಕ ಪರೀಕ್ಷೆ ಬರೆಯಲು ಪ್ರತಿ ವರ್ಷ ಪರೀಕ್ಷೆ ಪ್ಯಾಡ್, ಲೇಖನ ಸಾಮಗ್ರಿ ವಿತರಣೆ, ವಾರದ ಪರೀಕ್ಷೆಗೆ ಪರೀಕ್ಷೆಪೇಪರ್ ಒದಗಿಸುತ್ತಾ ಬಂದಿದ್ದಾರೆ.



---










ಕರುನಾಡ ಕಂದ
ಸಂಪುಟ 04 | ಸಂಚಿಕೆ 20
ದಿನಾಂಕ: 01-09-2025 ಪುಟಗಳು:16

# ಸಂಸ್ಕೃತಿಯ ಅರಿವು ಹಾಗೂ ಸಾಮಾಜಿಕ, ಸಾಂಸ್ಕೃತಿಕ ಮನೋಭಾವವನ್ನು ಬೆಳೆಸಲು ಆಚರಣೆಗಳಿಂದ ಸಾಧ್ಯವಾಗುತ್ತದೆ : ಶ್ರೀ ರಾಜಶೇಖರಯ್ಯ ಹಿರೇಮಠ







**ಜೇವರ್ಗಿ ಸುದ್ದಿ:** ಶ್ರೀ ಮಹಾಲಕ್ಷ್ಮಿ ಕಂಪ್ಯೂಟರ್ಸ್, ಕಿಯೋನಿಕ್ಸ್ ಫ್ರಾಂಚೈಸಿ ಸೆಂಟರ್ ಸಂಸ್ಥೆಯಲ್ಲಿ ಗಣೇಶೋತ್ಸವದ ಮೂರನೇ ದಿನವನ್ನು ಅತ್ಯಂತ ಭಕ್ತಿಭಾವ ಮತ್ತು ಉತ್ಸಾಹದಿಂದ ಆಚರಿಸಲಾಯಿತು. ವಿದ್ಯಾರ್ಥಿಗಳು ಸಂಪ್ರದಾಯಬದ್ಧ ವೇಷಭೂಷಣ ಉಡುಗೆ ಧರಿಸಿ ಕಾರ್ಯಕ್ರಮದಲ್ಲಿ ಹಾಜರಾಗಿ, ಹಬ್ಬದ ಸಡಗರವನ್ನು ಹೆಚ್ಚಿಸಿದರು.

ಸಂಸ್ಥೆಯ ವಿದ್ಯಾರ್ಥಿಗಳಿಂದ ಸಂಗೀತ ಕಾರ್ಯಕ್ರಮಗಳು ನಡೆಯಿತು. ಪ್ರತಿಯೊಬ್ಬರೂ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಮೂಲಕ ಅತಿಥಿಗಳ ಮನ ಗೆದ್ದರು ಆಗಮಿಸಿದ್ದ ಎಲ್ಲರೂ ಮಕ್ಕಳ ಪ್ರತಿಭೆಯನ್ನು ಮೆಚ್ಚಿ ಅಭಿನಂದಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೇವರ್ಗಿ ಜೂನಿಯರ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾರಾದ ಶ್ರೀ ರವೀಂದ್ರ ಬಟಗೇರಿಯವರು ವಹಿಸಿದರು.

ಹಾಗೂ ಅದೇ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಹನುಮಂತರಾವ್ ರವರು ಹಾಗೂ ಪತ್ರಕರ್ತರಾದ ಶ್ರೀ ಸುರೇಶ್ ಹಿರೇಮಠ ಅವರು ಕೂಡಾ ಅತಿಥಿಯಾಗಿ ಹಾಜರಿದ್ದರು. ಸಂಸ್ಥೆಯ ಸಿಬ್ಬಂದಿ ಹಾಗೂ ಎಲ್ಲಾ ವಿದ್ಯಾರ್ಥಿಗಳು ಇದ್ದರು. ಹಬ್ಬದ ಸಂಭ್ರಮದಲ್ಲಿ ವಿದ್ಯಾರ್ಥಿಗಳ ಉತ್ಸಾಹ, ಸಾಂಸ್ಕೃತಿಕ ಚಟುವಟಿಕೆಗಳ ಸೊಬಗು ಹಾಗೂ ಪಾರಂಪರಿಕ ವೇಷಭೂಷಣದ ಅಲಂಕಾರ ಎಲ್ಲವೂ ಸೇರಿ ಗಣೇಶೋತ್ಸವದ ಮೂರನೇ ದಿನವನ್ನು ಸ್ಮರಣೀಯವನ್ನಾಗಿ ಮಾಡಿತು.

ಇನ್ನು ಕಾರ್ಯಕ್ರಮದ ಮತ್ತು ಗಣೇಶ ಉತ್ಸವದ ಕುರಿತು ಮಾತನಾಡಿದ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ರಾಜಶೇಖರಯ್ಯ ಹಿರೇಮಠ " ಇಂದಿನ ಕಂಪ್ಯೂಟರ್ ಯುಗದಲ್ಲಿ ಕಂಪ್ಯೂಟರ್ ಶಿಕ್ಷಣದ ಮಹತ್ವ ಹಾಗೂ ಗಣೇಶ ಉತ್ಸವ ನಮ್ಮ ಭಾರತದ ನೆಲದ ಮೂಲ ಸಂಸ್ಕೃತಿ ಆಗಿದೆ, ಹಿಂದೆ 17ನೆ ಶತಮಾನದ ಹಿಂದೂ ಹೃದಯ ಸಾಮ್ರಾಟ್ ಶ್ರೀ ಛತ್ರಪತಿ ಶಿವಾಜಿ ಮಹಾರಾಜರು ಗಣೇಶ ಉತ್ಸವ ನಡೆಸಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ಬಾಲಗಂಗಾಧರ ತಿಲಕರು ಜನರನ್ನು ಒಗ್ಗಟ್ಟು ಸೇರಿಸಲು ಮೊದಲ ಬಾರಿಗೆ ಪುಣೆಯಲ್ಲಿ ಗಣೇಶ ಉತ್ಸವ ಆಚರಣೆಗೆ ತಂದರು.

ಶ್ರೀ ಗಣೇಶನು ಮುಕ್ಕೋಟಿ ದೇವತೆಗಳಿಗೂ ಅಧಿಪತಿಯಾಗಿರುವನು ಇದರಿಂದ ನಾಯಕತ್ವದ ಗುಣ ಬೆಳೆಸಿಕೊಳ್ಳಲು, ಪ್ರತಿ ಹಳ್ಳಿಯಿಂದ ದೆಹಲಿಯವರೆಗೂ ಯುವ ನಾಯಕರ ಅವಶ್ಯಕತೆಯಿದೆ, ಹಾಗಾಗಿ ನಮ್ಮ ಭಾರತದ ಸಂವಿಧಾನದ ಪೀಠಿಕೆಯಲ್ಲೂ ಕೂಡಾ ರಾಷ್ಟ್ರದ ಏಕತೆ ಹಾಗೂ ಸಮಗ್ರತೆ ಮತ್ತು ಭ್ರಾತೃತ್ವದ ಮನೋಭಾವನೆ ಕಾಣಬಹುದಾಗಿದೆ, ಹಾಗಾಗಿ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ಮತ್ತು ಧಾರ್ಮಿಕ ಭಾವನೆ ಭಾರತ ನೆಲದ ಸಂಸ್ಕೃತಿಯ ಅರಿವು ಹಾಗೂ ಸಾಮಾಜಿಕ, ಸಾಂಸ್ಕೃತಿಕ ಮನೋಭಾವವನ್ನು ಬೆಳೆಸಲು ಇಂತಹ ಆಚರಣೆಗಳಿಂದ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

– ಕರುನಾಡ ಕಂದ

## ಮಾನಸಿಕ ಆರೋಗ್ಯವೂ ದೇಹದಾರೋಗ್ಯದಷ್ಟೇ ಮುಖ್ಯ: ಶ್ರೀ ಈಶ್ವರ ಮದರಕಲ

ಜೇವರ್ಗಿ ಪೊಲೀಸ್ ಠಾಣೆಯ ಪೊಲೀಸ್ ಕಾನ್ ಸ್ಟೇಬಲ್ ಹಾಗೂ ಯುವ ಬರಹಗಾರರಾದ ಶ್ರೀ ಈಶ್ವರ ಮದರಕಲ ಅವರೂ ಕೂಡಾ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಇಂದಿನ ಯುವ ಜನತೆಗೆ ಮತ್ತು ಮಕ್ಕಳಿಗೆ ಆರೋಗ್ಯ ಹಾಗೂ ಹಾನಿಕರ ಪದಾರ್ಥಗಳಾದ ತಂಬಾಕು, ಮದ್ಯ ಹಾಗೂ ಇತರ ಅಪಾಯಕಾರಿ ಪದಾರ್ಥಗಳು ಯುವಜನರ ಭವಿಷ್ಯವನ್ನು ಹಾಳುಮಾಡುತ್ತವೆ, ಇವುಗಳಿಂದ ದೂರವಿದ್ದು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿ, ಮಾನಸಿಕ ಆರೋಗ್ಯವೂ ದೇಹದಾರೋಗ್ಯದಷ್ಟೇ ಮುಖ್ಯ ಒತ್ತಡ, ಆತಂಕ, ಬೇಸರ ಇತ್ಯಾದಿ ಸಮಸ್ಯೆಗಳನ್ನು ನಿರ್ಲಕ್ಷಿಸಬಾರದು.

ತಾಯಿ-ತಂದೆ, ಶಿಕ್ಷಕರು ಅಥವಾ ಆಪ್ತ ಸಲಹೆಗಾರರೊಂದಿಗೆ ಮಾತನಾಡುವುದು ಪರಿಹಾರಕ್ಕೆ ಸಹಾಯಕ. ಸಹಾಯ ಕೇಳುವುದು ದುರ್ಬಲತೆ ಅಲ್ಲ, ಅದು ಶಕ್ತಿಯ ಗುರುತು. ದೌರ್ಜನ್ಯ ಹಾಗೂ ಮಹಿಳಾ ಸುರಕ್ಷತೆ, ಸಮಾಜದಲ್ಲಿನ ಎಲ್ಲಾ ದೌರ್ಜನ್ಯಗಳ ವಿರುದ್ಧ ನಾವು ನಿಲ್ಲಬೇಕು, ಮಹಿಳೆಯರ ಸುರಕ್ಷತೆ ಮತ್ತು ಶಕ್ತೀಕರಣ ನಮ್ಮೆಲ್ಲರ ಜವಾಬ್ದಾರಿ. ಗೌರವ, ಸಮಾನತೆ ಮತ್ತು ಅಹಿಂಸೆ ನಮ್ಮ ಜೀವನದ ಭಾಗವಾಗಬೇಕು. ಮಕ್ಕಳ ರಕ್ಷಣೆ ಮತ್ತು ಪೋಸ್ಕೋ ಕಾಯ್ದೆ ಕುರಿತು ಮಾಹಿತಿ ನೀಡಿ ಮಕ್ಕಳು ಸಮಾಜದ ಅತಿ ನಾಜೂಕಿನ ವರ್ಗ, ಮಕ್ಕಳನ್ನು ಲೈಂಗಿಕ ದೌರ್ಜನ್ಯದಿಂದ ರಕ್ಷಿಸಲು ಪೋಸ್ಕೋ ಕಾಯ್ದೆ ಬಲವಾದ ಕಾನೂನು. ಪ್ರತಿಯೊಬ್ಬರೂ ತಮ್ಮ ಹಕ್ಕು ಮತ್ತು ಕರ್ತವ್ಯಗಳನ್ನು ಅರಿತುಕೊಳ್ಳಬೇಕು ಪ್ರಸ್ತುತ ಪರಿಸ್ಥಿತಿ ಮತ್ತು ಪೊಲೀಸರ ಕರ್ತವ್ಯ ಕೇವಲ ಕಾನೂನು-ಸುವ್ಯವಸ್ಥೆಯನ್ನು ಕಾಪಾಡುವುದಲ್ಲ, ನಾಗರಿಕರ ರಕ್ಷಣೆಯ ಜೊತೆಗೆ ಸಮಾಜವನ್ನು ಜಾಗೃತಿಗೊಳಿಸುವುದೂ ಹೌದು. ನಾವು ಕಾನೂನು ಪಾಲನೆಗೆ ಮಾತ್ರವಲ್ಲ, ನಿಮ್ಮ ಜೊತೆಗಾರರಾಗಿ, ಮಾರ್ಗದರ್ಶಕರಾಗಿ ಕೆಲಸ ಮಾಡುತ್ತೇವೆ.

ಯುವಪೀಳಿಗೆಯೇ ನಮ್ಮ ದೇಶದ ಭವಿಷ್ಯ. ಜವಾಬ್ದಾರಿಯುತವಾಗಿ ನಡೆದು, ಆರೋಗ್ಯ, ಗೌರವ ಹಾಗೂ ಸುರಕ್ಷತೆಯನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯ. ಒಟ್ಟಾಗಿ ನಾವು ಬಲವಾದ ಭಾರತದ ನಿರ್ಮಾಣಕ್ಕೆ ಕೈಜೋಡಿಸೋಣ ಎಂದು ತಿಳಿಸಿದರು.



ಬಳ್ಳಾರಿ: ಕಂಪ್ಲಿ ಪಟ್ಟಣದ ಪ್ರಮುಖ ವ್ಯಾಪಾರಿಗಳು ಹಾಗೂ ಸಮಾಜಸೇವಕರಾದ ಶ್ರೀ ಬಳ್ಳಾರಿ ನಿರಂಜನ ಗುಪ್ತ ಹಾಗೂ ಶ್ರೀ ಧನಪಾಲ್ ಸುಬ್ರಮಣ್ಯ ಶ್ರೇಷ್ಠಿ ರವರೊಂದಿಗೆ " ಕರುನಾಡ ಕಂದ ಪತ್ರಿಕೆ ".



ಬಳ್ಳಾರಿ ಜಿಲ್ಲೆಯ ಕಂಪ್ಲಿ ನಗರದ ಸಾಂಗತ್ರಯ ಸಂಸ್ಕೃತ ಪಾಠಶಾಲೆಯಲ್ಲಿ ಶ್ರಾವಣ ಮಾಸದ ನಿಮಿತ್ಯ ಆಯೋಜಿಸಿದ ಕಲ್ಬುರ್ಗಿಯ ಶ್ರೀ ಶರಣ ಬಸವೇಶ್ವರ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಪೂಜ್ಯರು ಹಾಗೂ ವೀರಶೈವ ಸಮಾಜದ ಪ್ರಮುಖರೊಂದಿಗೆ " ಕರುನಾಡ ಕಂದ ಪತ್ರಿಕೆ ".



ಕರುನಾಡ ಕಂದ
ಸಂಪುಟ 04 | ಸಂಚಿಕೆ 20
ದಿನಾಂಕ: 01-09-2025 ಪುಟಗಳು:16

# ಬ್ಯಾನರ್, ಹೋರ್ಡಿಂಗ್ಸ್ ತಯಾರಕರು ಮತ್ತು ಪ್ರಿಂಟಿಂಗ್ ಪ್ರೆಸ್ ಮಾಲೀಕರ ಸಭೆ




**ಬೆಳಗಾವಿ/ ಬೈಲಹೊಂಗಲ:** ಪುರಸಭೆಯ ಸಭಾ ಭವನದಲ್ಲಿ ಪಟ್ಟಣದ ಜಾಹೀರಾತು ಹಾಗೂ ಪ್ರಚಾರಾರ್ಥ ಬ್ಯಾನರ್, ಹೋರ್ಡಿಂಗ್ಸ್ ತಯಾರಕರು ಮತ್ತು ಪ್ರಿಂಟಿಂಗ್ ಪ್ರೆಸ್ ಮಾಲೀಕರ ಸಭೆಯನ್ನು ದಿ:25-08-2025 ರಂದು ಏರ್ಪಡಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಪುರಸಭೆಯ ಅಧ್ಯಕ್ಷರಾದ ಶ್ರೀ ವಿಜಯ ಶ್ರೀಶೈಲ ಬೋಳನ್ನವರ ಇವರು ಪಟ್ಟಣದಲ್ಲಿ ಐತಿಹಾಸಿಕ ಸ್ಮಾರಕಗಳು, ಮುಖ್ಯ ಸರ್ಕಲ್ ಗಳು ಹಾಗೂ ಇನ್ನಿತರ ಪ್ರದೇಶಗಳಲ್ಲಿ ಪುರಸಭೆಯ ಅನುಮತಿ ಇಲ್ಲದೆ ಅನಧಿಕೃತವಾಗಿ ಬ್ಯಾನರ್, ಹೋರ್ಡಿಂಗ್ಸ್ ಅಳವಡಿಸುವುದು ಹಾಗೂ ಹ್ಯಾಂಡಬಿಲ್ (ಭಿತ್ತಿಪತ್ರ) ಗಳನ್ನು ಅಂಟಿಸುತ್ತಿರುವುದರಿಂದ ನಗರದ ಸೌಂದರ್ಯ ಹಾಳಾಗುತ್ತಿದ್ದು, ಬ್ಯಾನರ್, ಹೋರ್ಡಿಂಗ್ಸ್ ತಯಾರಕರು ಮತ್ತು ಪ್ರಿಂಟಿಂಗ್ ಪ್ರೆಸ್ ಮಾಲೀಕರು ತಮ್ಮಲ್ಲಿ ಬರುವ ಸಾರ್ವಜನಿಕರಿಗೆ ನಿಯಮಾನುಸಾರ ಪುರಸಭೆಯಿಂದ ಅನುಮತಿಸಿದ ಸ್ಥಳದಲ್ಲಿ ಮಾತ್ರ ಅಳವಡಿಸುವಂತೆ ತಿಳುವಳಿಕೆ ನೀಡಲು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಾಧಿಕಾರಿಗಳಾದ ಶ್ರೀ ವಿರೇಶ ಹಸಬಿ ಇವರು ಕರ್ನಾಟಕ ಪುರಸಭೆ ಕಾಯ್ದೆ 1964 ಪ್ರಕರಣ 94, 133 ಅನುಸೂಚಿ VII ರ ಪ್ರಕಾರ ಪುರಸಭೆಯಿಂದ ಅನುಮತಿ ಪಡೆದು ಭಿತ್ತಿಪತ್ರ, ಜಾಹೀರಾತು ಫಲಕ, ಹೋರ್ಡಿಂಗ್ಸ್ ಪ್ರದರ್ಶನ ಮಾಡಬೇಕಾಗಿರುತ್ತದೆ. ಆದರೆ ಪುರಸಭೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳಗಳು ಮತ್ತು ಖಾಸಗಿ ಕಟ್ಟಡಗಳ ಮೇಲೆ ಅನಧಿಕೃತವಾಗಿ ಬ್ಯಾನರ್, ಹೋರ್ಡಿಂಗ್ಸ್ ಅಳವಡಿಸುವುದು ಹಾಗೂ ಗೋಡೆಗಳ ಮೇಲೆ ಭಿತ್ತಿಪತ್ರಗಳನ್ನು ಅಂಟಿಸುತ್ತಿರುವುದು ಮತ್ತು ಖಾಸಗಿ ಮಾಲೀಕತ್ವದ ಗೋಡೆಗಳ ಮೇಲೆ ಗೋಡೆ ಬರಹದ ಮೂಲಕ ಜಾಹೀರಾತುಗಳನ್ನು ಪ್ರದರ್ಶನ ಮಾಡುತ್ತಿರುವುದು ಮತ್ತು ಕನ್ನಡ ಭಾಷಾ ಅನುಷ್ಠಾನ ಕುರಿತಂತೆ ಸರ್ಕಾರದ ಸುತ್ತೋಲೆ ಪ್ರಕಾರ ಫಲಕಗಳಲ್ಲಿ ಪ್ರಧಾನವಾಗಿ ಅಂದರೆ ಶೇ.60 ರಷ್ಟು ಭಾಗ ಕನ್ನಡದಲ್ಲಿ ಇರದೇ ಅನ್ಯ ಭಾಷೆಯಲ್ಲಿ ಹೋರ್ಡಿಂಗ್ಸ್, ಭಿತ್ತಿ ಪತ್ರ ಮುದ್ರಿಸಿ ಸರ್ಕಾರದ ಆದೇಶ ಉಲ್ಲಂಘಿಸುತ್ತಿರುವುದು ಹಾಗೂ ಬ್ಯಾನರ್, ಹೋರ್ಡಿಂಗ್ಸ್ ಮುದ್ರಣದಲ್ಲಿ ನಿಷೇಧಿತ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವುದು ಕೂಡಾ ಕಂಡು ಬಂದಿರುತ್ತದೆ. ಕಾರಣ ಬ್ಯಾನರ್, ಹೋರ್ಡಿಂಗ್ಸ್ ತಯಾರಕರು ಮತ್ತು ಪ್ರಿಂಟಿಂಗ್ ಪ್ರೆಸ್ ಮಾಲೀಕರು ಸರ್ಕಾರದ ಆದೇಶದ ಪ್ರಕಾರ ಫಲಕಗಳಲ್ಲಿ ಪ್ರಧಾನವಾಗಿ ಅಂದರೆ ಶೇ.60 ರಷ್ಟು ಭಾಗ ಕನ್ನಡದಲ್ಲಿ ಇರುವಂತೆ ಮುದ್ರಿಸತಕ್ಕದ್ದು ಹಾಗೂ ಮುದ್ರಣದಲ್ಲಿ ನಿಷೇಧಿತ ಪ್ಲಾಸ್ಟಿಕ್ ಬಳಕೆ ಮಾಡದೆ ಬಟ್ಟೆ ಸಾಮಗ್ರಿಗಳನ್ನು ಬಳಸುವಂತೆ ತಿಳಿಸಿದರು ಹಾಗೂ ಅನಧಿಕೃತ ಜಾಹೀರಾತು ಹಾಗೂ ಪ್ರಚಾರಾರ್ಥ ಪ್ರದರ್ಶನಗಳು ಕಂಡು ಬಂದಲ್ಲಿ ಅವುಗಳನ್ನು ತೆರವುಗೊಳಿಸಿ ದಂಡಗಳನ್ನು ವಿಧಿಸಲಾಗುವುದು ಅಂತಾ ತಿಳಿಸಿದರು.

ಈ ಸಂದರ್ಭದಲ್ಲಿ ಪುರಸಭೆಯ ಕಿರಿಯ ಆರೋಗ್ಯ ನಿರೀಕ್ಷಕರಾದ ಶ್ರೀ ಸುರೇಶಗೌಡ ಎನ್. ಪಾಟೀಲ, ಸೂಪರ್ ವೈಸರ್‌ಗಳಾದ ಶ್ರೀ ಅಶೋಕ ಹುಲ್ಲೆನ್ನವರ, ಶ್ರೀ ಸಿದ್ರಾಮ ತಟವಾಟಿ, ಬಸವರಾಜ ನೇಸರಗಿ ಹಾಗೂ ಫ್ಲೆಕ್ಸ್ ತಯಾರಕರು , ಪ್ರಿಂಟಿಂಗ್ ಪ್ರೆಸ್ ಮಾಲೀಕರು ಇದ್ದರು.

**ವರದಿ ಮಂಜು. ಎಮ್. ಚಿಕ್ಕಣ್ಣವರ**


# ಧರ್ಮಸ್ಥಳಕ್ಕೆ ಅನ್ಯಾಯ ಮಾಡಿದ ಸರ್ಕಾರ : ಡಾ||ವಿಶ್ವನಾಥ ಆಯ್. ಪಾಟೀಲ



ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ಧರ್ಮಸ್ಥಳ ಕ್ಷೇತ್ರದ ವಿರುದ್ಧ ವ್ಯವಸ್ಥಿತ ಷಡ್ಯಂತ್ರ ಖಂಡಿಸಿ ಬಿಜೆಪಿ ಮಂಡಲದ ವತಿಯಿಂದ ಪಟ್ಟಣದಲ್ಲಿ ದೊಡ್ಡ ಪ್ರಮಾಣದ ಪ್ರತಿಭಟನೆ ನಡೆಸಲಾಯಿತು. ಬೈಲಹೊಂಗಲ ಮತಕ್ಷೇತ್ರದ ಮಾಜಿ ಶಾಸಕರಾದ ಡಾ||ವಿಶ್ವನಾಥ ಆಯ್. ಪಾಟೀಲ ಮಾತನಾಡಿ ಧರ್ಮಸ್ಥಳಕ್ಕೆ ಸರ್ಕಾರ ದ್ರೋಹ ಬಗೆದಿದ್ದು ಬುರುಡೆ ಹಿಡಿದು ಬಂದ ಅನಾಮಿಕನ ಪರ ನಿಂತು ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಷಡ್ಯಂತರ ರೂಪಿಸಿದೆ, ಸರಕಾರಕ್ಕೆ ಜನರು ಛೀಮಾರಿ ಹಾಕುತ್ತಿದ್ದಾರೆ ಕೋಟ್ಯಾಂತರ ಜನರ ಧಾರ್ಮಿಕ ಭಕ್ತಿ ಭಾವನೆಗೆ ಧಕ್ಕೆ ಉಂಟಾಗಿದೆ ಸೆಪ್ಟೆಂಬರ್ ಒಂದರಂದು ರಾಜ್ಯದ ಜನತೆ ಧರ್ಮಸ್ಥಳ ಚಲೋ ಹಮ್ಮಿಕೊಂಡಿದ್ದು ಎಲ್ಲರೂ ಭಾಗಿಯಾಗೋಣ ಎಂದು ತಿಳಿಸುತ್ತಾ ಇದೇ ಸಮಯದಲ್ಲಿ ತಾಲೂಕ ಉಪ ವಿಭಾಗಾಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು. ಬಿಜೆಪಿ ಮುಖಂಡ ಹಾಗೂ ಪುರಸಭೆಯ ಸದಸ್ಯರಾದ ಶ್ರೀ ವಿಜಯ ಮೆಟಗುಡ್ಡ ಮಾತನಾಡಿ ಐತಿಹಾಸಿಕ ಹಿನ್ನೆಲೆಯ ಪವಿತ್ರ ಕ್ಷೇತ್ರದ ವಿರುದ್ಧ ರಾಜಕೀಯ ನಡೆದಿದೆ ಸರ್ಕಾರಕ್ಕೆ ನೈತಿಕತೆ ಇದ್ದರೆ ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು. ಮುಖಂಡರಾದ ಎಫ್ ಎಸ್ ಸಿದ್ದನಗೌಡರ, ಸಂತೋಷ್ ಹಡಪದ, ಸುಭಾಸ ತುರಮರಿ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಗುರು ಮೆಟಗುಡ್ಡ, ಸಚಿನ ಕಡ್ಡಿ, ಗುರುಪಾದ ಕಳ್ಳಿ, ಮಡಿವಾಳಪ್ಪ ಹೋಟಿ, ವಿಶಾಲ ಬೋಗುರ, ಆನಂದ ಮೂಗಿ, ಅಶೋಕ ಗುಂಡ್ಲೂರು, ಮಹೇಶ ಹರಕುನಿ, ಬಸವರಾಜ್ ನೇಸರಗಿ, ಪ್ರಶಾಂತ್ ಅಮ್ಮಿನಭಾವಿ, ಮಡಿವಾಳಪ್ಪ ಚಿಕೊಪ್ಪ, ರಾಜು ದಳವಾಯಿ, ಚಂದನ್ ಕೌಜಲಗಿ, ಅರುಣ್ ಬೋಳೆತ್ತಿನ, ಸಚಿನ್ ಬೂದಿಹಾಳ, ರಾಜು ನರಸಣ್ಣವರ, ಬಸಲಿಂಗಯ್ಯ ಚರಂತಿಮಠ, ಶ್ರೀಶೈಲ ಕಟ್ಟಿಮನಿ, ರತ್ನಾ ಗೋಧಿ, ಚಂದ್ರಿಕಾ ಕಲಂಕರ ಸೇರಿದಂತೆ ಇನ್ನುಳಿದ ಮುಖಂಡರು ಸಹ ಉಪಸ್ಥಿತರಿದ್ದರು.

**ವರದಿ ಮಂಜು .ಎಮ್. ಚಿಕ್ಕಣ್ಣವರ**









ಕರುನಾಡ ಕಂದ
ಸಂಪುಟ 04 । ಸಂಚಿಕೆ 20
ದಿನಾಂಕ: 01-09-2025 ಪುಟಗಳು:16

# ಕೋಳೂರ್ಗಿ ಪಿಡಿಓ ನಿರ್ಲಕ್ಷ್ಯಕ್ಕೆ ಬೇಸತ್ತ ದೇಗಿನಾಳ ಗ್ರಾಮಸ್ಥರ ಎಚ್ಚರಿಕೆ !?

**ವಿಜಯಪುರ /ಇಂಡಿ :** ಇತ್ತೀಚೆಗೆ ಬಿಡದೆ ಸುರಿದ ಮಳೆಗೆ ಬಸವೇಶ್ವರ ದೇವಸ್ಥಾನದ ಮುಂದೆ ಹಳ್ಳ ಬಂದು ರಸ್ತೆ ಕೊಚ್ಚಿ ಹೋದ ಘಟನೆ ಇಂಡಿ ತಾಲೂಕಿನ ದೇಗಿನಾಳ ಗ್ರಾಮದಲ್ಲಿ ನಡೆದಿದೆ ಮತ್ತು ಕ್ಯಾತನಕೆರಿ, ಅಥರ್ಗಾ, ನಿಂಬಾಳ ಸೇರಿದಂತೆ ನಾಲ್ಕು ಗ್ರಾಮದ ರೈತರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಇದಾಗಿದ್ದು ಪ್ರತಿ ವರ್ಷ ಮಳೆಗೆ ರಸ್ತೆ ಕಿತ್ತುಕೊಂಡು ಹೋಗುತ್ತದೆ, ಶಾಲಾ ಮಕ್ಕಳು ಮತ್ತು ವಯೋವೃದ್ಧರಿಗೆ ತುಂಬಾ ಸಮಸ್ಯೆ ಆಗುತ್ತಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ರಭಸವಾಗಿ ಹರಿಯುವ ಹಳ್ಳಕ್ಕೆ ದೊಡ್ಡ ಪೈಪ್ ಹಾಕಿ ಮಾಡಿಕೊಡಿ ಎಂದು ನಾಲ್ಕೈದು ವರ್ಷಗಳಿಂದಲೂ ಗ್ರಾಮ ಪಂಚಾಯತಿಯವರಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಹಾಗಾಗಿ ಬೇಸತ್ತ ಸ್ಥಳೀಯರು ಸ್ವಂತ ಖರ್ಚಿನಲ್ಲಿ ರಸ್ತೆ ನಿರ್ಮಿಸಿಕೊಂಡಿದ್ದರು. ಆದರೆ ಒಂದು ವಾರದಿಂದ ಸುರಿದ ಭಾರೀ ಮಳೆಗೆ ರಸ್ತೆ ಕಿತ್ತುಕೊಂಡು ಹೋಗಿದೆ, ಇನ್ನಾದರೂ ಸ್ಥಳೀಯ ಜನ ಪ್ರತಿನಿಧಿಗಳು ಮತ್ತು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಈ ಸುದ್ದಿ ನೋಡಿಯಾದರೂ ರೈತರಿಗೆ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ ಕಾದು ನೋಡಬೇಕು ಎನ್ನುತ್ತಾರೆ ಗ್ರಾಮಸ್ಥರಾದ ಅಜಿತ್, ವಸಂತ, ಜಾಧವ, ಸಿಂಗರಾಜ ಪಂಡಿತ್ ನಿಲಂಗಿ, ಕಾರ್ತಿಕ ನಿಲಂಗಿ, ರೇವಪ್ಪ ವಾಲಿಕಾರ, ಅಜಿತ್ ನಿಲಂಗಿ, ಬಾಳಪ್ಪ ಅಶೋಕ ನಿಲಂಗಿ ಹಾಗೂ ಇನ್ನಿತರರು. ಆದಷ್ಟು ಬೇಗ ಈ ಸಮಸ್ಯೆ ಕಡೆ ಗಮನ ಹರಿಸದೆ ಇದ್ದಲ್ಲಿ ಗ್ರಾಮಸ್ಥರು ಪಂಚಾಯತಿಗೆ ಮುತ್ತಿಗೆ ಹಾಕುವುದಾಗಿ ಎಚ್ಚರಿಸಿದ್ದಾರೆ.

**ವರದಿಗಾರರು :ಆನಂದ ಹರಿಜನ**



# ಶ್ರಾವಣ ಮಾಸದ ನಿಮಿತ್ತ ಮಹಾಪ್ರಸಾದ ವ್ಯವಸ್ಥೆ



ಬೀದರ್ ಜಿಲ್ಲೆ ಔರಾದ ತಾಲೂಕಿನ ಕೌಠಾ ( ಬಿ. ) ಗ್ರಾಮದಲ್ಲಿ ಮಡಿವಾಳ ಮಾಚಿದೇವರ ಸಂಘದ ವತಿಯಿಂದ ಶ್ರಾವಣ ಮಾಸದ ನಿಮಿತ್ತ ಮಹಾಪ್ರಸಾದವನ್ನು ಕಲ್ಲಪ್ಪ ತಂದೆ ಘಳಪ್ಪ ಮಡಿವಾಳರ ನೆರವೇರಿಸಿದರು.

ಮಾಚಿದೇವರ ಪೂಜೆ ಮತ್ತು ಧ್ವಜ ಕಾರ್ಯಕ್ರಮವನ್ನು ನಡೆಸಿಕೊಟ್ಟ ಡಾಕ್ಟರ್ ಅಮೃತ್ ಮುತ್ಯಾ ವೈಷ್ಣದೇವಿ ಆಶ್ರಮ ಸಂಸ್ಥಾನ ಅವರಿಗೆ ಹಾಗೂ ಸಂಘದ ಕೆಲವು ಪದಾಧಿಕಾರಿಗಳಿಗೆ ಸನ್ಮಾನ ಮಾಡಲಾಯಿತು. ಗ್ರಾಮದ ಗಣ್ಯ ವ್ಯಕ್ತಿಗಳು ಹಾಗೂ ಮುಖ್ಯ ಅತಿಥಿಗಳು, ರವಿ, ಚೆಲುವ, ಪರವ ಶೆಟ್ಟಿ, ನಾಗರೆ, ಬೀದರ್ ಗ್ರಾಮದ ಗಣ್ಯ ವ್ಯಕ್ತಿಗಳ ಸಮ್ಮುಖದಲ್ಲಿ ಈ ಕಾರ್ಯಕ್ರಮ ನೆರವೇರಿತು. ಕಾರ್ಯಕ್ರಮ ಸಂಚಾಲಕ ರವಿ ದೇವರೇ, ನಾಗೇಶ್ ಮಡಿವಾಳ, ಮಲ್ಲಿಕಾರ್ಜುನ ಸೇರಿದಂತೆ ಎಲ್ಲರೂ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

**ವರದಿ ಸಂಗಮೇಶ್ ಚಿದ್ರೆ**

# ಹಜರತ್ ಸೈಯದ್ ಸದಾತಾ ದರ್ಗಾ ಬಾದಾಮಿ ಹಜರತ್ ಸೈಯದ್ ಬಕ್ಷಾ, ಶ್ರೀ ಶಿವಪ್ಪಯ್ಯ ಅಜ್ಜನವರ ಉರಸು ಕಾರ್ಯಕ್ರಮ

ಬಾಗಲಕೋಟೆ ಜಿಲ್ಲೆಯ ಬಾದಾಮಿ ಪಟ್ಟಣದಲ್ಲಿ ಹಜರತ್ ಸೈಯ್ಯದ್ ಸದಾತಾ ದರ್ಗಾ ಬಾದಾಮಿ, ಹಜರತ್ ಸೈಯ್ಯದ ಬಕ್ಷಾ, ಶ್ರೀ ಶಿವಪ್ಪಯ್ಯ ಅಜ್ಜನವರ ಉರಸು ಕಾರ್ಯಕ್ರಮದಲ್ಲಿ, ಶ್ರೀ ಶಿವಪೂಜಾ ಮಹಾಸ್ವಾಮಿಗಳು ಬಾದಾಮಿ, ಶ್ರೀ ಶಾಂತಲಿಂಗ ಮಹಾಸ್ವಾಮಿಗಳು ವಿರಕ್ತಮಠ ಬೈರನಹಟ್ಟಿ, ಶ್ರೀ ಪೂಜ್ಯ ಶರಣಬಸವ ದೇವರು ಶಿವಯೋಗ ಮಂದಿರ, ಶ್ರೀ ಹಜರತ್ ಸಯ್ಯದ್ ಮಹಮ್ಮದ್ ಹುಸೇನಿ ವಿಜಯಪುರ, ಶ್ರೀ ಹಜರತ್ ಸೈಯದ್ ನಿಜಾಮುದ್ದೀನ್ ಷಾ ಪೀರಾ ಗಜೇಂದ್ರಗಡ, ಶ್ರೀ ಹಜರತ್ ಸೈಯದ್ ಹುಸೇನ್ ಸಾಹೇಬ ಸೂಫಿ ಶರಣರು ಸಿಂಧನೂರು, ಶ್ರೀಬಾಷಾ ಸಾಬ್ ಮುಲ್ಲಾ ಲಾಲ್ ಸಾಬ್, ಚವಡಿ ಮಸೀದಿ ಬಾದಾಮಿ, ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಮಹೇಶ್ ಹೊಸಗೌಡ್ರ, ಶ್ರೀ ಪಾಂಡಪ್ಪ ಕಟ್ಟಿಮನಿ ಪುರಸಭೆ ಅಧ್ಯಕ್ಷರು ಬಾದಾಮಿ, ಶ್ರೀ ರಾಜ ಮಹಮ್ಮದ್ ಬಾಗವಾನ್ ಪುರಸಭೆ ಸದಸ್ಯರು ಬಾದಾಮಿ ಹಾಗೂ ಬಾದಾಮಿ ನಗರದ ಸಮಸ್ತ ಗುರು ಹಿರಿಯರು, ಯುವಕ ಮಿತ್ರರು ಸೇರಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

**ವರದಿ ಅಬ್ದುಲಸಾಬ ನಾಯ್ಕರ**



# 79ನೇ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮ

ಬಾಗಲಕೋಟೆ: ಬಾದಾಮಿ ತಾಲ್ಲೂಕು ನರಸಾಪುರ ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆ ನರಸಾಪುರ ಗ್ರಾಮದಲ್ಲಿ 79 ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಧ್ವಜಾರೋಹಣ ಕಾರ್ಯಕ್ರಮವನ್ನು ಎಸ್ ಡಿ ಎಮ್ ಸಿ ಅಧ್ಯಕ್ಷರು ಶರಣಪ್ಪಗೌಡ ಟಿ. ಪಾಟೀಲ ನೆರವೇರಿಸಿದರು.

ಶಾಲೆಯ ಮುಖ್ಯ ಪ್ರಭಾರಿ ಗುರುಮಾತೆಯರು, ಗುರುಗಳು, ಗುರುಮಾತೆಯರು, ಎಸ್ ಡಿ ಎಮ್ ಸಿ ಸರ್ವ ಸದಸ್ಯರು, ಗ್ರಾಮಪಂಚಾಯತ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಊರಿನ ಗುರು ಹಿರಿಯರು, ಸಂಘ ಸಂಸ್ಥೆಗಳ ಸರ್ವಸದಸ್ಯರು, ಅಂಗನವಾಡಿ ,ಆಶಾ ಕಾರ್ಯಕರ್ತೆಯರು, ಊರಿನ ಯುವಕ ಮಿತ್ರರು ಎಲ್ಲರೂ ಸೇರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

**ವರದಿ. ಅಬ್ದುಲಸಾಬ ನಾಯ್ಕರ**



ಕರುನಾಡ ಕಂದ
ಸಂಪುಟ 04 । ಸಂಚಿಕೆ 20
ದಿನಾಂಕ: 01–09–2025 ಪುಟಗಳು:16

# ದಸರಾ ಉದ್ಘಾಟನೆಗೆ ಸಾಹಿತಿ ಭಾನು ಮುಷ್ತಾಕ್, ಸರ್ಕಾರದ ಹಿಂದೂ ವಿರೋಧಿ ನೀತಿಯಾಗಿದೆ : ಮಾಜಿ ಶಾಸಕ ಸಂಜಯ ಪಾಟೀಲ ಆಕ್ರೋಶ



**ಬೆಳಗಾವಿ:** ಹಿಂದೂ ಧಾರ್ಮಿಕ ಆಚರಣೆಯಲ್ಲಿ ನಂಬಿಕೆ ಇಲ್ಲದ, ಮೂರ್ತಿ ಪೂಜೆಯನ್ನು ಒಪ್ಪದ, ತಮ್ಮ ಮಸೀದಿಗೆ ತಮ್ಮನ್ನು ಕರೆಯಿಸಿಕೊಳ್ಳದ ಸಾಹಿತಿ ಭಾನು ಮುಷ್ತಾಕ್ ಅವರನ್ನು ವಿಶ್ವವಿಖ್ಯಾತ ದಸರಾ ಉದ್ಘಾಟನೆಗೆ ಚಾಮುಂಡೇಶ್ವರಿ ಕರೆಯಿಸಿಕೊಳ್ಳಲು ಸಾಧ್ಯವೆ? ಇವರನ್ನು ಕರೆಯಲು ಮುಂದಾಗಿರುವ ಸರ್ಕಾರದ ಕ್ರಮ ಹಿಂದೂ ವಿರೋಧಿ ನೀತಿಯಾಗಿದೆ ಎಂದು ಮಾಜಿ ಶಾಸಕ ಸಂಜಯ ಪಾಟೀಲ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಕನ್ನಡ ನಾಡಿನ ನಾಡಹಬ್ಬ ದಸರಾ ಉದ್ಘಾಟನೆ ಎಂದರೆ ತಾಯಿ ಚಾಮುಂಡೇಶ್ವರಿ ಮೂರ್ತಿ ಪೂಜೆ ನೆರವೇರಿಸಿ ತಾಯಿಗೆ ಪುಷ್ಪವೃಷ್ಟಿ ಮಾಡುವ ಪದ್ಧತಿ ಇದೆ. ಇಂತಹ ಹಿಂದೂ ಧಾರ್ಮಿಕ ಕಾರ್ಯವನ್ನು ಅನ್ಯಧರ್ಮೀಯರಿಂದ ಒಪ್ಪಲು ಸಾಧ್ಯವಿಲ್ಲದೆ ಇದ್ದಾಗ ಹಿಂದೂಗಳ ಭಾವನೆ ಕೆಣಕಲು ಹೊರಟಿರುವ ಸರ್ಕಾರದ ಕ್ರಮ ಖಂಡನೀಯ ಎಂದು ತಿಳಿಸಿದರು.

2023ರ ಜನಸಾಹಿತ್ಯ ಸಭೆಯಲ್ಲಿ ಭಾನು ಮುಷ್ತಾಕ್ ಅವರು ಕನ್ನಡವನ್ನು ಭುವನೇಶ್ವರಿ ತಾಯಿಗೆ ಹೋಲಿಸಿ ಅರಿಷಿನ ಕುಂಕುಮ ಬಣ್ಣದ ಕನ್ನಡ ಧ್ವಜ ಮಾಡಿದ್ದೀರಿ; ಈ ಮಧ್ಯದಲ್ಲಿ ನಾನು ಅಲ್ಪಸಂಖ್ಯಾತ ಸಾಹಿತಿಯಾಗಿ ಎಲ್ಲಿ ನಿಲ್ಲಲಿ ಎಂದು ಕೇಳಿದ್ದರು. ಕನ್ನಡ ನಾಡಿನ ಭುವನೇಶ್ವರಿ ತಾಯಿಯ ಹಳದಿ ಕೆಂಪು ಧ್ವಜ ಒಪ್ಪದ ಇವರು, ಹಿಂದೂ ಧರ್ಮದೇವತೆ ಚಾಮುಂಡೇಶ್ವ–ರಿಯನ್ನು ಒಪ್ಪಲು ಸಾಧ್ಯವೆ? ಇವರನ್ನು ಹಿಂದೂ ಧಾರ್ಮಿಕ ಉತ್ಸವ ದಸರಾ ಉದ್ಘಾಟನೆಗೆ ಯಾವ ವಿಚಾರಕ್ಕಾಗಿ ಸರ್ಕಾರ ಕರೆದಿದೆ ? 9 ದಿನಗಳ ಕಾಲ ತಾಯಿ ದುರ್ಗೆಯನ್ನು ಪೂಜಿಸಿ ಚಾಮುಂಡೇಶ್ವರಿ ದುಷ್ಟಶಕ್ತಿ ಮಹಿಷಾಸುರನನ್ನು ಸಂಹರಿಸಿದ ಈ ಹಬ್ಬ ಸಾಂಸ್ಕೃತಿಕ ಹಬ್ಬವಲ್ಲ; ಇದು ಹಿಂದೂ ಧಾರ್ಮಿಕ ಉತ್ಸವ, ಹಿಂದೂಗಳ ಭಾವನೆಗೆ ಧಕ್ಕೆ ತರುವುದಕ್ಕೆ ಹೊರಟಿರುವುದು ಯಾವ ಪುರುಷಾರ್ಥಕ್ಕಾಗಿ ?

ಕನ್ನಡ ತಾಯಿ ಭುವನೇಶ್ವರಿ,ಕನ್ನಡ ನಾಡಿನ ಧ್ವಜ ಒಪ್ಪದ ಭಾನು ಮುಷ್ತಾಕ್ ರವರು, ಚಾಮುಂಡಿ ಬೆಟ್ಟ ಹತ್ತಕೂಡದು, ತಕ್ಷಣ ಸರ್ಕಾರ ಅವರಿಗೆ ನೀಡಿರುವ ಆಹ್ವಾನ ಹಿಂಪಡೆದು ಹಿಂದೂ ಧಾರ್ಮಿಕ ನಂಬಿಕೆಯಲ್ಲಿ ಅಚಲ ವಿಶ್ವಾಸ ಹೊಂದಿದ ಆಚಾರ ವಿಚಾರ ಬಲ್ಲವರನ್ನು ಆಹ್ವಾನಿಸಬೇಕು ಎಂದು ಒತ್ತಾಯಿಸಿ ಶಬರಿಮಲೆಗೆ ಧಾರ್ಮಿಕ ನಂಬಿಕೆ ಇಲ್ಲದ ಸ್ಟಾಲಿನ್ ನನ್ನು ಕರೆಯುತ್ತಾರೆ, ಧರ್ಮಸ್ಥಳದ ಬಗ್ಗೆ ಅನಾಮಿಕ ವ್ಯಕ್ತಿ ಬುರುಡೆ ತಂದರೆ ಧರ್ಮಸ್ಥಳವನ್ನೆ ಅಗೆಯಲು ಪ್ರಾರಂಭಿಸುತ್ತಾರೆ. ಯಾರೂ ಕೇಳದ ಟಿಪ್ಪು ಜಯಂತಿ ಮಾಡುತ್ತಾರೆ, ಡಿಕೆಶಿಯವರು ಚಾಮುಂಡಿ ಬೆಟ್ಟ ಹಿಂದೂಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ ಎನ್ನುವ ಇವರಿಗೆ ರಾಜ್ಯದ ವಕ್ಫ್ ಆಸ್ತಿಯನ್ನು ಇಡೀ ರಾಜ್ಯದ ಎಲ್ಲಾ ಜನಾಂಗದವರಿಗೆ ಸಂಬಂಧಿಸಿದ್ದು ಅಂತ ಹೇಳುವ ತಾಕತ್ತು ಇದೆಯಾ? ಇವರು ಏನು ಮಾಡಲು ಹೊರಟಿದ್ದಾರೆ? ಭಾನು ಮುಷ್ತಾಕ್ ಒಬ್ಬರು ಸಾಹಿತಿ. ಅದರ ಬಗ್ಗೆ ಗೌರವ ಇದೆ; ಆದರೆ ಧಾರ್ಮಿಕತೆಯಲ್ಲಿ ನಂಬಿಕೆ ಇಲ್ಲದ ಅವರನ್ನು ಕರೆದರೆ, ಅವರು ಧಾರ್ಮಿಕ ಉತ್ಸವಕ್ಕೆ ದೀಪವನ್ನು ಬೆಳಗುತ್ತಾರಾ? ಚಾಮುಂಡೇಶ್ವರಿಯನ್ನು ನಂಬುತ್ತಾರಾ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಲಿ ಎಂದು ಆಗ್ರಹಿಸಿದರು.

ಇದನ್ನು ಸ್ಪಷ್ಟಪಡಿಸಿದ ನಂತರ ಅವರನ್ನು ಉದ್ಘಾಟನೆಗೆ ಕರೆಯಲಿ; ಇಲ್ಲದಿದ್ದರೆ ಅಹ್ವಾನ ಹಿಂಪಡೆಯಬೇಕು. ಇದನ್ನು ಒಪ್ಪಲು ಸಾಧ್ಯವೆ ಇಲ್ಲ. ದಸರಾದಲ್ಲಿ ಸಾಂಸ್ಕೃತಿಕ ಉತ್ಸವ ಒಂದು ಭಾಗ ಅದರಲ್ಲಿ ಭಾಗವಹಿಸಿದ್ದಾರೆ ಎಂದರೆ ಮೂರ್ತಿ ಪೂಜೆ ಮಾಡದವರನ್ನು ಕರೆಯುವುದು ಸರಿಯಲ್ಲ ಎಂದು ಟೀಕಿಸಿದರು.

ಚಾಮುಂಡೇಶ್ವರಿ ಬೆಟ್ಟಕ್ಕೆ ಹೋಗಿದ್ದಾರೆ ಎಂದರೆ ಅವರು ಮೂರ್ತಿಪೂಜೆ ಒಪ್ಪಲ್ಲ. ಕುವೆಂಪು ಅವರು ಕರ್ನಾಟಕವು ಭಾರತ ಮಾತೆಯ ತನುಜಾತೆ ಎಂದಿದ್ದಾರೆ. ಭಾನು ಅವರು ಕನ್ನಡ ತಾಯಿಗೆ ಅಪಮಾನ ಮಾಡಿದ ರೀತಿಯಲ್ಲಿ ಚಾಮುಂಡೇಶ್ವರಿ ತಾಯಿಯನ್ನು ಒಪ್ಪದೆ ಆ ತಾಯಿಗೂ ಅಪಮಾನ ಮಾಡುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಸರ್ಕಾರ ಏನು ಮಾಡಲು ಹೊರಟಿದೆ? ಎಂದು ತರಾಟೆಗೆ ತೆಗೆದುಕೊಂಡರು. ಕೊಡಗಿನ ದೀಪಾ ಬಸ್ತಿ ಅವರಿಗೂ ಸೇರಿ ಸಾಹಿತ್ಯ ಪ್ರಶಸ್ತಿ ಬಂದಿದೆ ಅವರನ್ನು ಮರೆತಿರುವುದು ಯಾಕೆ? ಧಾರ್ಮಿಕ ವಿಚಾರಗಳಲ್ಲಿಯೂ ರಾಜಕೀಯ ಮಾಡುವುದೆ ಕಾಂಗ್ರೆಸ್ ದವರ ಅಲ್ಪಸಂಖ್ಯಾತರ ಒಲೈಕೆಯ ಕುತಂತ್ರವಾಗಿದೆ ಎಂದರು.

**ವರದಿ ಮಂಜು .ಎಮ್. ಚಿಕ್ಕಣ್ಣವರ**

# ಅತಿವೃಷ್ಟಿಯಿಂದ ಹಾನಿಗೊಳಗಾದ ರೈತರು ಯಾವುದೇ ಆತಂಕ ಪಡಬೇಕಾಗಿಲ್ಲ : ಸಚಿವ ಈಶ್ವರ್ ಖಂಡ್ರೆ

ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳ ಪರಿಶೀಲನೆ ನಡೆಸಿದ ಅರಣ್ಯ, ಪರಿಸರ, ಜೀವಿಶಾಸ್ತ್ರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಹಾಗೂ ಜಿಲ್ಲಾಧಿಕಾರಿಗಳು ವಿಕೋಪದಿಂದ ಮನೆಯ ಪ್ರಾಣಿ, ಬೆಳೆ, ಸೇತುವೆ ಮತ್ತು ಕೆರೆಕಟ್ಟೆ ಹಾನಿಯಾದ ಸ್ಥಳವನ್ನು ವೀಕ್ಷಿಸಿದ ನಂತರ ಅವರು ಮಾತನಾಡಿ ಔರಾದ್ ತಾಲೂಕಿನಲ್ಲಿ 300ಎಂ. ಎಂ ಮಳೆಯಾಗಿದ್ದರಿಂದ ಅನೇಕ ರಸ್ತೆಗಳು ಮನೆ ಸೇತುವೆ ಮುಂತಾದವುಗಳು ಹಾನಿಗೆ ಒಳಗಾಗಿವೆ ತಕ್ಷಣವೇ ಇವುಗಳ ಬಗ್ಗೆ ಗಮನ ಹರಿಸಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿ, ಅತಿಯಾದ ಮಳೆಯಿಂದಾಗಿ ರೈತರ ಹೆಸರು ,ಉದ್ದು,



ಸೋಯಾಬಿನ್, ತೊಗರಿ, ಬೆಳೆಗಳಿಗೆ ಹೆಚ್ಚು ಹಾನಿಯಾಗಿದೆ ಆದರೆ ರೈತರು ಯಾವುದೇ ಆತಂಕ ಪಡಬೇಕಾಗಿಲ್ಲ ಎಂದು ಭರವಸೆ ನೀಡಿದರು.

**ವರದಿ ಸಂಗಮೇಶ ಚಿದ್ರೆ**

# ವೀರರಾಣಿ ಬೆಳವಡಿ ಮಲ್ಲಮ್ಮನ ಗ್ರಾಮದಲ್ಲಿ ಪಥಸಂಚಲನ

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ದೊಡವಾಡ ಪೊಲೀಸ್ ಠಾಣೆಯ ಪಿ ಎಸ್ ಐ ಶ್ರೀ ಮತಿ ಸುಮಾ ಗೋರಬಾಳ , ಸಿ ಪಿ ಐ ಶ್ರೀ ಶಿವಾನಂದ ಗುಡಗನಟ್ಟಿ ಹಾಗೂ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ಹಬ್ಬದ ನಿಮಿತ್ಯವಾಗಿ ವೀರರಾಣಿ ಬೆಳವಡಿ ಮಲ್ಲಮ್ಮನ ಗ್ರಾಮದಲ್ಲಿ ಪಥಸಂಚಲನ ನಡೆಸಲಾಯಿತು.

**ವರದಿ ಮಂಜು ಎಂ. ಚಿಕ್ಕಣ್ಣವರ**





ಕರುನಾಡ ಕಂದ
ಸಂಪುಟ 04 | ಸಂಚಿಕೆ 20
ದಿನಾಂಕ: 01-09-2025 ಪುಟಗಳು:16

# ಗುರುವೇ ನಿಮಗೆಂದೆಂದಿಗೂ ನಾವುಗಳು ಚಿರ ಋಣಿ

**ವಿಶೇಷ ಲೇಖನ : ಜಿಲಾನಸಾಬ್ ಬಡಿಗೇರ್**





ವಿದ್ಯಾರ್ಥಿಯ ಮನಸ್ಸನ್ನು ಅರ್ಥ ಮಾಡಿಕೊಂಡು ಅವರಿಗೆ ತಕ್ಕಂತೆ ಜ್ಞಾನವನ್ನು ಕಟ್ಟಿಕೊಡುವಂತಹ ಶಕ್ತಿ ಶ್ರೇಷ್ಠ ಗುರುವಿಗೆ ಮಾತ್ರ ಇರುತ್ತದೆ. ಅಂತಹ ಶ್ರೇಷ್ಠ ಗುರುಗಳ ಸಾಲಿನಲ್ಲಿ ನಿಲ್ಲುವವರಲ್ಲಿ ಮೊದಲಿಗರು ನಮ್ಮೂರಿನ ಶ್ರೀ ಡಿ. ಮಲ್ಲಿಕಾರ್ಜುನ ಗುರುಗಳು.

ಸಮಾಜವನ್ನು ಕಟ್ಟುವ ಮತ್ತು ಸಮಾಜವನ್ನು ತಿದ್ದುವ ಸಾಮರ್ಥ್ಯ ಶಿಕ್ಷಕ ವೃತ್ತಿಗೆ ಮಾತ್ರ ಇರುತ್ತದೆ, ಡಿ. ಮಲ್ಲಿಕಾರ್ಜುನ ಗುರುಗಳು ಹೀಗೆ 35 ವರ್ಷಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ಸರಳತೆ ,ಶ್ರದ್ಧೆ, ಶಿಸ್ತು ಮತ್ತು ಸಮಯ ನಿರ್ವಹಣೆಗೆ ಹೆಸರಾಗಿ, ವಿದ್ಯಾರ್ಥಿಗಳ ಮೆಚ್ಚಿದ ಶಿಕ್ಷಕರಾಗಿ, ಗ್ರಾಮೀಣ ಪ್ರದೇಶದ ಕಡುಬಡತನದ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದ್ದವರು.

ಬಾಲ್ಯದಲ್ಲಿ ಕಡುಬಡತನದ ಹಾಗೂ ಕುಗ್ರಾಮದಿಂದ ಕೃಷಿ ಕುಟುಂಬದಿಂದ ಶಿಕ್ಷಣ , ಸಂಸ್ಕಾರ ಪಡೆದವರು . ಧಾರ್ಮಿಕ ಪ್ರಸಿದ್ಧಿ ಪಡೆದ ನಾಯಕನಹಟ್ಟಿ ಶ್ರೀ ತಿಪ್ಪೇಸ್ವಾಮಿ ದೇವರ ಹೇಳಿದಂತೆ " ಮಾಡಿದಷ್ಟು ನೀಡು ಭಿಕ್ಷೆ " ಎಂಬಂತೆ ಬಾಲ್ಯದಿಂದ ಓದು- ಬರಹ ಮನೆಯವರಿಗೆ ಸಹಾಯ ,ಸಣ್ಣಪುಟ್ಟ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿ ಬಸವಣ್ಣನವರ ಕಾಯಕದ ತತ್ವ ನಂಬಿದವರು, ಆಡಿ ಬೆಳೆದು ದೊಡ್ಡವರಾದರೂ ಬಾಲ್ಯದಿಂದಲೇ ಅಚ್ಚುಮೆಚ್ಚಿನ ವೃತ್ತಿಯಾದ ಶಿಕ್ಷಕ ವೃತ್ತಿಯನ್ನೇ ಆಯ್ಕೆ ಮಾಡಿಕೊಂಡರು.

ಶಿಕ್ಷಕರಾಗಿ ಸೇವೆ ಸಲ್ಲಿಸಿದ ಅವರ ಸೇವೆ ಶಿಕ್ಷಣ ಕ್ಷೇತ್ರದಲ್ಲಿ ಅನನ್ಯ ಮತ್ತು ಅಭಿನಂದನಾರ್ಹವಾದದ್ದು. ಇವರು ಮೂಲತಃ ಇಂದಿನ ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ಚೋರನೂರ ಗ್ರಾಮದವರು. ಇವರು ಓದಿನ ಜೊತೆಗೆ ಮನೆ, ಬದುಕು, ಜೀವನ ಕಟ್ಟಿಕೊಂಡಿದ್ದರು. ತಂದೆ ಡಿ. ಅಡವಿ ಹನುಮಪ್ಪ ತಾಯಿ ಸಕ್ರಮ್ಮ ಅವರ ಕರ ಸಂಜಾತರಾಗಿ 9ನೇ ಸೆಪ್ಟೆಂಬರ್ 1968 ರಂದು ಹುಟ್ಟಿದ ಇವರು ಇಂದು ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಮೆಚ್ಚಿದ " ಮಾದರಿ ಶಿಕ್ಷಕರು "ಎನಿಸಿಕೊಂಡಿದ್ದಾರೆ.

**ಜನರ ಪ್ರೀತಿ ಗೆದ್ದ ಮಕ್ಕಳ ನೆಚ್ಚಿನ ಶಿಕ್ಷಕ :**

ಬಾಲ್ಯದಿಂದಲೇ ಪುಸ್ತಕ ಓದುವ ಗೀಳು ಹೊಂದಿದ್ದ ಇವರು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಹುಟ್ಟೂರಾದ ಚೋರನೂರು ಸರ್ಕಾರಿ ಶಾಲೆಯಲ್ಲಿ ಮುಗಿಸಿ, ಪಿಯುಸಿ ಹಾಗೂ ಪದವಿಯನ್ನು ಕೂಡ್ಲಿಗಿಯಲ್ಲಿ ಓದಿದರು.

ನಂತರ ಶಿಕ್ಷಕರಾಗುವ ಹಂಬಲದೊಂದಿಗೆ ಅಂದಿನ ಟೀಚರ್ಸ್ ಟ್ರೈನಿಂಗ್ ಕೋರ್ಸ್ ಪೂರ್ಣಗೊಂಡ ನಂತರ 13ನೇ ಸೆಪ್ಟೆಂಬರ್ 1988 ರಂದು ಗೌರವ ಶಿಕ್ಷಕರಾಗಿ ಸೇವೆ ಪ್ರಾರಂಭಿಸಿ 25 ಫೆಬ್ರವರಿ 1993 ರಂದು ಹೊಸ ನೆಲ್ಲುಡಿ ಗ್ರಾಮದಲ್ಲಿ ಸ. ಪ್ರಾ. ಶಾಲೆಯಲ್ಲಿ ಖಾಯಂ ಶಿಕ್ಷಕರಾಗಿ ವೃತ್ತಿಗೆ ಸೇರಿದರು. ಮುಖ್ಯವಾಗಿ ಎಮ್ಮಿಗನೂರು, ಸರ್ಕಾರಿ ಪ್ರೌಢಶಾಲೆಗೆ ನಿಯೋಜಿತ ಶಿಕ್ಷಕರಾಗಿ ಐದು ವರ್ಷಗಳ ಕಾಲ ಉತ್ತಮ ಬೋಧನೆಯನ್ನು ಮಾಡಿದರು.

ಬಳ್ಳಾಪುರ, ಚಿಕ್ಕಜಾಯಗನೂರು, ನೆಲ್ಲೂಡಿ- ಕೊಟ್ಟಾಲ್, ಶಾಂತಿನಗರ, ಸೋಮಲಾಪುರ, ಕುರುಗೋಡು ವಿವಿಧ ಹಳ್ಳಿಗಳಿಗೆ ಶಿಕ್ಷಣ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ವೈಯಕ್ತಿಕವಾಗಿ ಹಲವು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮಾರ್ಗದರ್ಶನ ನೀಡಿದ್ದಾರೆ. ಪ್ರಸ್ತುತ ಅನೇಕ ಕ್ಷೇತ್ರಗಳಲ್ಲಿ ಉನ್ನತ ಹುದ್ದೆಗಳನ್ನು ಪಡೆದು ತಮ್ಮ ಜೀವನವನ್ನು ರೂಪಿಸಿಕೊಂಡಿದ್ದಾರೆ. ಸೋಮಸಮುದ್ರ, ಬಳ್ಳಾರಿ ನಗರದ ಗಾಂಧಿನಗರ ಸೇರಿದಂತೆ ವಿವಿಧ ಹಳ್ಳಿ, ಊರು- ಗ್ರಾಮದ ಶಾಲೆಗಳಲ್ಲಿ ಉತ್ತಮ ಸೇವೆ ಸಲ್ಲಿಸಿದ್ದಾರೆ.

" ನಾನು ಪ್ರಾಥಮಿಕ ಶಿಕ್ಷಣ (1 ರಿಂದ 8) ಓದುತ್ತಿದ್ದ ದಿನಗಳಲ್ಲಿ ನಾನು ಶಾಲೆಗೆ ಹೋಗಲು ಹಿಂಜರಿಯುತ್ತಿದ್ದೆ. ಆದರೆ ಡಿ.ಮಲ್ಲಿಕಾರ್ಜುನ ಸಾರ್ ರವರು ನಮ್ಮ ಮನೆ ಬಂದು ನಮ್ಮ ಅಣ್ಣನಿಗೆ ನಿಮ್ಮ ತಮ್ಮ ಓದಿನಲ್ಲಿ ಚುರುಕಿದ್ದಾನೆ, ಓದಿಸಿ ಎಂದು ದುಂಬಾಲು ಬಿದ್ದು ನನ್ನನ್ನು ಶಾಲೆಗೆ ಕರೆದುಕೊಂಡು ಹೋಗುತ್ತಿದ್ದರು, ಆ ಶಾಲೆಯಲ್ಲಿ ಸದಾ ಹಸನ್ಮುಖಿಯಾಗಿ ಪಾಠ ಮಾಡುತ್ತಿದ್ದ ನಮ್ಮ ಮೇಷ್ಟ್ರು. ಆಟದೊಂದಿಗೆ ಪಾಠ ಮಾಡುವ ಮೂಲಕ ಮಕ್ಕಳ ನೆಚ್ಚಿನ ಹೀರೋ ಆಗಿದ್ದರು. ಇವರೊಂದಿಗೆ ಜಿ.ಮಲ್ಲಿಕಾರ್ಜುನ ಗೌಡ , ಕೆ.ಎಂ.ಚಂದ್ರಶೇಖರಯ್ಯ, ಜಿ.ಗೋಪಾಲ ಕೃಷ್ಣ ಆಚಾರಿ, ಬಿ.ಚಂದ್ರಶೇಖರ್, ಮಹೆಬೂಬು ಸಾರ್ ಇವರು ಅವತ್ತಿನ ದಿನಗಳಲ್ಲಿ ನನ್ನ ಹಾಗೂ ಉಳಿದ ವಿದ್ಯಾರ್ಥಿಗಳಿಗೆ ಭವಿಷ್ಯದ ಕುರಿತು ವಹಿಸುತ್ತಿದ್ದ ಕಾಳಜಿ ನಮ್ಮ ಮನೆಯ ಅಪ್ಪ ಅಮ್ಮನೂ ವಹಿಸಲಿಲ್ಲ. "

" ಡಿ. ಮಲ್ಲಿಕಾರ್ಜುನ ಸಾರ್ ನನಗೆ ಆಗಾಗ ಲೇ, ನೀನು ಮುಂದೆ ಸಾಮಾನ್ಯ ವ್ಯಕ್ತಿ ಆಗುವುದಿಲ್ಲ. ದೊಡ್ಡ ವ್ಯಕ್ತಿ ಆಗ್ತೀಯಾ ಅಂತ ಹೇಳುತ್ತಿದ್ದರು. ಶಾಲೆಯ ಬೀಗದ ಕೈ ಯಿಂದ ಹಿಡಿದು ಶಾಲೆಯ ಸ್ವಚ್ಛತೆಯ ಉಸ್ತುವಾರಿ ನಾಯಕನನ್ನಾಗಿಯೂ ನೇಮಿಸುತ್ತಿದ್ದರು. ನಾವು ತಪ್ಪು ಮಾಡಿದಾಗ ಚೆನ್ನಾಗಿ ಹೊಡೆಯುತ್ತಿದ್ದರು. ಮನೆಗೆ ಹೋಗುವಾಗ ಕರೆದು ಪ್ರೀತಿಯಿಂದ ಮಾತಾಡಿಸುವ ಒಳ್ಳೆಯ ಮೇಷ್ಟ್ರು ನಮ್ ಗುರುಗಳು. ಅವರ ಭಾಷಣ ಶೈಲಿ, ನಾಯಕತ್ವ , ಸ್ನೇಹ ಶೀಲಗುಣ ನನ್ನ ಮನಸ್ಸಿನ ಮೇಲೆ ಪರಿಣಾಮ ಬೀರಿತ್ತು. ನಮ್ಮ ಕುಟುಂಬದ ಸದಸ್ಯರಂತೆ ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗಿಯಾಗುತ್ತಿದ್ದರು. ನಮ್ಮ ಮೇಷ್ಟ್ರ ಉದಾರ ಗುಣಕ್ಕೆ ನಾನೆಂದಿಗೂ ಆಭಾರಿ. ಶಾಲೆಯಲ್ಲಿ ಶಿಕ್ಷಕರು ಟೀ, ಟಿಫನ್ ತರಿಸಿದರೆ ನನಗೆ ಒಂದು ಭಾಗ ಎತ್ತಿಟ್ಟು ತಿನ್ನುತ್ತಿದ್ದ ವಿಶಾಲ ಹೃದಯವಂತ ನಮ್ಮ ಮೇಷ್ಟ್ರುಗಳು ಎನ್ನುತ್ತಾರೆ ಇವರ ಅಪಾರ ಶಿಷ್ಯ ಬಳಗ.

**ಪ್ರಶಸ್ತಿಗಳು** : ಜನ ಮೆಚ್ಚಿದ ಶಿಕ್ಷಕ, ಜಿಲ್ಲಾ ಅತ್ಯುತ್ತಮ ಶಿಕ್ಷಕ ಹಾಗೂ ಹೊಸ ನೆಲ್ಲುಡಿ ಶಾಲೆಗೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಸೇರಿದಂತೆ ಇನ್ನೂ ಹಲವಾರು ಸಂಘ -ಸಂಸ್ಥೆಗಳಿಂದ , ಸಮುದಾಯಗಳಿಂದ ಹಲವು ಪ್ರಶಸ್ತಿ ಇವರಿಗೆ ಲಭಿಸಿದೆ.

**ಹತ್ತು ಹಲವು ಕ್ಷೇತ್ರಗಳಲ್ಲಿ ಭಾಗಿ :**

ಶಿಕ್ಷಕರ ಸಂಘದ ಪ್ರತಿನಿಧಿಯಾಗಿ, ಉಪಾಧ್ಯಕ್ಷರಾಗಿ, ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ, ಸರ್ಕಾರಿ ನೌಕರ ಸಂಘದ ಸದಸ್ಯರಾಗಿ, ಗೃಹ ನಿರ್ಮಾಣ ಸಂಘದ ನಿರ್ದೇಶಕರಾಗಿ ಕೂಡಾ ಸೇವೆ ನಿರ್ವಹಿಸಿದ್ದಾರೆ.

ಗುರುವೇ... ನಿಮ್ಮ ಆಶೀರ್ವಾದವೇ ನನಗೆ ಹಾಗೂ ನನ್ನಂತಹ ಸಹಸ್ರಾರು ಶಿಷ್ಯರಿಗೆ ಶ್ರೀ ರಕ್ಷೆ. ನಿಮ್ಮ ಪ್ರೀತಿ ವಿಶ್ವಾಸಕ್ಕೆ ನಾ ಎಂದೆಂದಿಗೂ ಚಿರ ಋಣಿ ಎನ್ನುವ ಅಪಾರ ವಿದ್ಯಾರ್ಥಿ ಬಳಗವಿದೆ.

# ಹಿಂದೂ ಮಹಾ ಗಣಪತಿ ಗೊಜನೂರ

ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕ ಗೊಜನೂರ ಗ್ರಾಮದಲ್ಲಿ ಹಿಂದೂ ಮಹಾಗಣಪತಿಯನ್ನು ತುಂಬಾ ವಿಶೇಷವಾಗಿ ಪ್ರತಿಷ್ಠಾಪಿಸಲಾಯಿತು.

7 ಅಡಿ ಎತ್ತರವಿರುವ ಮಹಾಗಣಪತಿಯು ವಿಶೇಷ ಆಕರ್ಷಣೆಯಿಂದ ಕೂಡಿದ್ದು ಯುವಕ ಮಿತ್ರರು , ಗ್ರಾಮದ ಹಿರಿಯರು , ಮಕ್ಕಳೆಲ್ಲರೂ ಸೇರಿ ಭವ್ಯ ಮೆರವಣಿಗೆಯ ಮೂಲಕ ಮಹಾಗಣಪತಿಯನ್ನು ಬರಮಾಡಿಕೊಂಡರು.

ಗಣೇಶನಿಗೆ ವಿಶೇಷ ಅಲಂಕಾರ ಮಾಡಿ ಪೂಜ್ಯತಾ ಭಾವದಿಂದ ಪೂಜೆ ಸಲ್ಲಿಸಲಾಗುತ್ತಿದ್ದು, 13 ದಿನಗಳ ಕಾಲ ಗಣಪತಿಯನ್ನು ಪೂಜಿಸಿ ಸೆಪ್ಟೆಂಬರ್ 7 ರಂದು ಮಹಾಪ್ರಸಾದ ಏರ್ಪಡಿಸಿ, ಮರುದಿನ ( ಸೆಪ್ಟೆಂಬರ್ 8) ರಂದು ಬಹು ವಿಜೃಂಭಣೆಯಿಂದ ಕಾಳಿಕಾ ಸೌಂಡ್ಸ್ ಧಾರವಾಡ ಹಾಗೂ ಸಂಗೀತ ,ಡೊಳ್ಳು ಕುಣಿತಗಳ ಮೂಲಕ ವಿಸರ್ಜಿಸಲಾಗುವುದು ಎಂದು



ಯುವಕ ಮಿತ್ರ ಮಂಡಳಿಯವರು ತಿಳಿಸಿದ್ದಾರೆ. ಈ ವಿಸರ್ಜನಾ ಕಾರ್ಯಕ್ರಮದಲ್ಲಿ ಗ್ರಾಮದ ಮುಖ್ಯಸ್ಥರು, ಸದ್ಭಕ್ತರು, ಸುತ್ತ ಮುತ್ತಲಿನ ಗ್ರಾಮಸ್ಥರು,ಸ್ಥಳೀಯ ಕಲಾವಿದರು ಪಾಲ್ಗೊಳ್ಳುವರು.

**ವರದಿ ಸತೀಶ್ ಗೋಡಿ**



ಬೆಳಗಾವಿ ಜಿಲ್ಲೆ ರಾಮದುರ್ಗ ತಾಲೂಕಿನ ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಮತ್ತು ಕಾಮಗಾರಿ. ಬೆಳಗಾವಿ ಜಿಲ್ಲಾ ಅಸಂಘಟತ ಮದ್ದೂರ ಸಂಘ (ರಿ.) ಶ್ರೀ ಮಂಜು ಕಲ್ಲನವರ ಅವರೊಂದಿಗೆ " ಕರುನಾಡ ಕಂದ ".



**ಶ್ರೀ ಶಿವಾನಂದ .ಬ. ಕಲ್ಲಾಪೂರ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತಿ ಅಥಣಿ, ಜಿ. ಬೆಳಗಾವಿ.**




**ಬೀದರ್ ಜಿಲ್ಲೆಯ ಬಸವಕಲ್ಯಾಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ " ಕರುನಾಡ ಕಂದ " ಪತ್ರಿಕೆ.**

ಕರುನಾಡ ಕಂದ
ಸಂಪುಟ 04 । ಸಂಚಿಕೆ 20
ದಿನಾಂಕ: 01–09–2025 ಪುಟಗಳು:16

# ಜನಸೇವೆಯಲ್ಲಿ ಸಾರ್ಥಕತೆ – ಜನಪದ ಸಂಗೀತದಲ್ಲಿ ಜನಾರ್ಧನನ ಕಂಡ ಜನಸೇವಕಿ ಎಲ್.ಶ್ಯಾಮಲಾ







ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಸುಕ್ಷೇತ್ರ ಮುಗಳಖೋಡ ಗ್ರಾಮದ ಲೋಕನಾಯಕಿ ಸಾಂಸ್ಕೃತಿಕ ಸಂಸ್ಥೆಯು ಹಲವು ವರ್ಷಗಳಿಂದ ತೆರೆಮರೆಯಲ್ಲಿ ವಿನೂತನವಾಗಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡು ಬಂದಿದೆ. ಸಂಸ್ಥೆಯ ಕ್ರಿಯಾಶೀಲ ಸಂಸ್ಥಾಪಕ ಅಧ್ಯಕ್ಷರಾದ ಶ್ರೀಮತಿ ಎಲ್. ಶ್ಯಾಮಲಾ ಅವರು ಸಮಾನ ಮನಸ್ಕರನ್ನು ಸೇರಿಸಿಕೊಂಡು ನಿರಂತರವಾಗಿ ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ನಮ್ಮ ನೆಲಮೂಲ ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಸೇವಾ ಕಾರ್ಯದಲ್ಲಿ ತೊಡಗಿದ್ದಾರೆ. ಜನಪದ ಸಂಗೀತದ ಆರಾಧಕರಾದ ಇವರು ತತ್ವಪದಗಳನ್ನು, ಪುರಂದರದಾಸರ, ಬಸವ ತತ್ವದ ಪದ್ಯಗಳನ್ನು ಬಾಗಲಕೋಟೆ, ವಿಜಯಪುರ, ಬೆಳಗಾವಿ, ಧಾರವಾಡ, ಹುಬ್ಬಳ್ಳಿ ಮುಂತಾದ ಕಡೆ ಹಾಡಿ ಜನ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಇವರ ಸೇವೆಗೆ ತಾಲೂಕಾ ಆಡಳಿತ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿದೆ. ಅಲ್ಲದೆ ಹಿಂದಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಗೋವಿಂದ ಎಂ. ಕಾರಜೋಳ ಅವರಿಂದ ಪ್ರಶಂಶೆಗೆ ಪಾತ್ರರಾಗಿ "ಗುರು ಸೇವಾ ರತ್ನ" ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಕಲಾಜ್ಯೋತಿ, ಜನಪದ ಭೂಷಣ ಸೇರಿದಂತೆ ಅನೇಕ ಗೌರವ ಪ್ರಶಸ್ತಿಗಳನ್ನು ಹೊಂದಿದ್ದಾರೆ. ಇಂದಿನ ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ,ಶಾಸಕ ಸಿದ್ದು ಸವದಿ, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ, ಸೇರಿದಂತೆ ಅನೇಕ ಗಣ್ಯರು ಇವರನ್ನು ಗೌರವಿಸಿದ್ದಾರೆ. ಸಂಗೀತ ಕ್ಷೇತ್ರದ ಒಂದು ಭಾಗವಾಗಿ ಕೆಲಸವನ್ನು ಮಾಡುತ್ತಾ, ಶಾಲಾ ಮಕ್ಕಳ ಅನುಕೂಲಕ್ಕಾಗಿ ಬಸ್ಸುಗಳನ್ನು ಒದಗಿಸುವುದು, ಉಚಿತ ಆರೋಗ್ಯ ಶಿಬಿರಗಳನ್ನು ನಡೆಸುವುದು. ಸಾಧಕರನ್ನು ಗೌರವಿಸುವುದು, ಕಿರಿಯ ಕಲಾವಿದರಿಗೆ ವೇದಿಕೆಗಳನ್ನು ನೀಡುವುದು, ಬಡವರೊಂದಿಗೆ ಬಡವರಾಗಿ ನಾನು ನಿಮ್ಮ ಜೊತೆ ಇದ್ದೇನೆ ಎಂಬ ಭರವಸೆಯನ್ನು ನೀಡಿ ಅವರ ಕಷ್ಟದಲ್ಲಿ ಕೈಜೋಡಿಸುವ ಹೃದಯವಂತರಾಗಿರುವ ಇವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರತಿನಿಧಿಯಾಗಿ ಪೂಜ್ಯರಾದ ವೀರೇಂದ್ರ ಹೆಗ್ಗಡೆಯವರ ಕನಸು ಕಲ್ಪನೆ ಸಾಕಾರಗೊಳ್ಳಲು ಸ್ಥಾಪಿಸಿರುವ ಸಂಸ್ಥೆಯಲ್ಲಿ ತನ್ನದೊಂದು ಕಿರುಸೇವೆ ಎಂದು ತಮ್ಮಿಂದ ಸ್ವಲ್ಪವಾದರೂ ಸಮಾಜಕ್ಕೆ ಪ್ರಯೋಜನ ಆಗಲಿ ಎಂಬ ನಿಟ್ಟಿನಲ್ಲಿ ಫಲಾಪೇಕ್ಷೆ ಇಲ್ಲದೆ ಸೇವೆಯಲ್ಲಿ ಕಾರ್ಯನಿರತರಾಗಿದ್ದಾರೆ. ಸಂಘದ ಸದಸ್ಯರನ್ನು ಸೇರಿಸಿಕೊಂಡು ಗ್ರಾಮದಲ್ಲಿ, ದೇವಸ್ಥಾನಗಳಲ್ಲಿ ಸ್ವಚ್ಛತೆ ಕಾರ್ಯಕ್ರಮವನ್ನು ಹಾಕಿಕೊಳ್ಳುವುದು, ಸಸಿಗಳನ್ನು ನೆಡುವುದು, ಅನಾಥರಿಗೆ ಮಾಶಾಸನವನ್ನು ಕೊಡಿಸುವುದು, ಶಾಲಾಮಕ್ಕಳಿಗೆ ವಿದ್ಯಾರ್ಥಿವೇತನ, ಅಂಗವಿಕಲರಿಗೆ ವೀಲ್ ಚೇರ್ ನೀಡುವುದು, ಅನಾರೋಗ್ಯದಲ್ಲಿರುವವರಿಗೆ ವಾಟರ್ ಬೆಡ್, ಕೇಂದ್ರಸ್ಥಾನಗಳ ಜೀರ್ಣೋದ್ಧಾರಕ್ಕೆ ಸಹಾಯ, ಸ್ವ ಉದ್ಯೋಗ ಮಾಡಲು ಅನುದಾನ, ಬಡವರಿಗೆ ಹಾಗೂ ಮಹಿಳೆಯರಿಗೆ ಆರ್ಥಿಕ ಸದೃಢತೆಗಾಗಿ ಶಕ್ತಿ ತುಂಬುವ ಧರ್ಮಸ್ಥಳದ ಯೋಜನೆಗಳನ್ನು ಪಡೆದುಕೊಳ್ಳಲು ತಿಳಿಸುವುದು, ಪ್ರತಿ ದಿನದ ಇವರ ಕಾಯ9ವಾಗಿದೆ. ಜಾತಿ, ಮತ, ಪಂಥ ಪಕ್ಷಗಳ ಗೋಜಿಲ್ಲದೆ ಸರ್ವರನ್ನೂ ನಮ್ಮವರೆಂದು ಭಾವಿಸಿ ಬಡವರ ಸೇವೆಯಲ್ಲಿ ಭಗವಂತನನ್ನು ಕಾಣುವುದರಲ್ಲಿ ಜನ್ಮದ ಸಾರ್ಥಕತೆ ಇದೆ ಎನ್ನುತ್ತಾರೆ ಎಲ್. ಶ್ಯಾಮಲಾ ಅವರು. ಕಲಾ ಆರಾಧಕರಾದ ಇವರ ಸೇವೆಯನ್ನು ಗುರುತಿಸುವುದರೊಂದಿಗೆ ಸಾಮಾಜಿಕ ಪರಿವರ್ತನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಸಹೃದಯಿ ಎಲ್. ಶ್ಯಾಮಲಾ ಅವರನ್ನು ಮುಂದಿನ ದಿನಗಳಲ್ಲಿ ಸರ್ಕಾರ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳು ಮತ್ತು ಸಮಾಜ ವಿಶಿಷ್ಟ ರೀತಿಯಲ್ಲಿ ಗೌರವಿಸುವಂತಾಗಲಿ ಎಂದು ಹಾರೈಕೆಗಳು...

**ಲೇಖನ – ಪ. ಪೂ. ಚಂದ್ರಶೇಖರ ಶ್ರೀಗಳು.**
**ಅಡವಿಸಿದ್ದೇಶ್ವರ ಮಠ. ಯಡಹಳ್ಳಿ –ಇಂಗಳಗಿ.**
**ತಾ. ಮುಧೋಳ ,ಬಾಗಲಕೋಟೆ ಜಿಲ್ಲೆ.**

**ಮುಗಳಖೋಡದ ಶ್ರೀ ಸಿದ್ಧಾರೂಢ ಭಾರತಿ ಆಶ್ರಮದಲ್ಲಿ ನಿರಂತರವಾಗಿ ವರ್ಷವಿಡೀ ನಡೆಯುವ**
**1} ನಿತ್ಯ ತತ್ವ–ಚಿಂತನ ಭಕ್ತಿ ಬೆಳಗು ಕಾರ್ಯಕ್ರಮ. ಶ್ರೀ ಸಿದ್ಧಾರೂಢರ ಪಾರಾಯಣ, ಪೂಜಾ ಕಾರ್ಯಕ್ರಮ.**
**2} ಪ್ರತಿ ತಿಂಗಳು ನಡೆಯುವ ಮನೆಯಂಗಳದಲ್ಲಿ ಶರಣರ ಮನದ ಮಾತು ತತ್ವದರ್ಶನ ಮಾಸಿಕ ಕಾರ್ಯಕ್ರಮ.**
**3} ಕನಕ ಪುರಂದರ ಬಸವಾದಿ ಶರಣರ ಚಿಂತನ ತ್ರೈಮಾಸಿಕ ಕಾರ್ಯಕ್ರಮದಲ್ಲಿ ಇವರ ಸೇವೆ ಗಣನೀಯವಾಗಿದೆ.**
**– ಕಲ್ಲಪ್ಪ ಸಬರದ, ಅಧ್ಯಕ್ಷರು ಹಿರಿಯ ನಾಗರಿಕರ ವೇದಿಕೆ ಮುಧೋಳ.**
**–ಎಸ್. ಆರ್. ದಿವಾನ, ಹಿರಿಯ ಸಾಹಿತಿಗಳು ಮುಧೋಳ.**

# ಸುರಿದ ಮಳೆಗೆ ಸಂಕಷ್ಟಕ್ಕೆ ಸಿಲುಕಿದ ರೈತರು



ಬೀದರ್ ಜಿಲ್ಲೆಯಲ್ಲಿ ಇತ್ತೀಚೆಗೆ ಸುರಿದ ಧಾರಾಕಾರ ಮಳೆಯಿಂದಾಗಿ ಪ್ರವಾಹದ ಪರಿಸ್ಥಿತಿ ಉಂಟಾಗಿದೆ ಬೀದರಿನ ಜನರ ಜೀವನಾಡಿ ಆದ ಕಾರಂಜ ಜಲಾಶಯ ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಸಾಧಾರಣವಾಗಿ ಭರ್ತಿಯಾಗುತ್ತಿತ್ತು ಈ ವರ್ಷ ಒಂದು ತಿಂಗಳ ಮುಂಚೆ ಭರ್ತಿಯಾಗಿದೆ ಆದ ಕಾರಣ ಕಾರಂಜ ಜಲಾಶಯದಿಂದ ದಿ. 29.8.2025 ರಂದು ಹೆಚ್ಚುವರಿ ನೀರನ್ನು ಹೊರಹರಿವು ಬಿಡಲಾಗಿದೆ ಬೀದರ್ ಜಿಲ್ಲೆ ಭಾಲ್ಕಿ ತಾಲೂಕು ನಿಟ್ಟೂರ (ಬಿ.) ಗ್ರಾಮದ ಮಂಜರಾ ನದಿಯ ತೀರದ ಪ್ರದೇಶದ ಹೊಲಗದ್ದೆಗಳಿಗೆ ಅತಿ ಹೆಚ್ಚಿನ ಪ್ರಮಾಣದಲ್ಲಿ ನೀರು ನುಗ್ಗಿದ ಪರಿಣಾಮ ಸುತ್ತ ಮುತ್ತಲಿನ ಹೊಲಗಳಿಗೆ ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗಿದೆ ರೈತರು ಬೆಳೆದಂತ ಸೋಯಾ, ಉದ್ದು, ಹೆಸರು, ತೊಗರಿ ಬೆಳೆಗಳು ಸಂಪೂರ್ಣ ನೀರಿನಲ್ಲಿ ಮುಳುಗಡೆಯಾಗಿದ್ದು ಬೀದರ ಜಿಲ್ಲೆ ರೈತರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ ಹಾಗಾಗಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಪ್ರವಾಹ ಪೀಡಿತ ರೈತರಿಗೆ ಬೆಳೆ ನಷ್ಟದ ಪರಿಹಾರವನ್ನು ಕೊಡಬೇಕಾಗಿ ಸರಕಾರಕ್ಕೆ ಮನವಿ ಮಾಡಿಕೊಳ್ಳಲಾಗಿದೆ.

**ವರದಿಗಾರರು ಗಜಾನಂದ ಪಾಟೀಲ, ಭಾಲ್ಕಿ**

# ಗಣೇಶ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಿಸಿ : ಶ್ರೀ ವಿಜಯ ಬೋಳನ್ನವರ



ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಪಟ್ಟಣದಲ್ಲಿ ಗೌರಿ ಗಣೇಶ ಹಬ್ಬದ ನಿಮಿತ್ಯ ಪುರಸಭೆಯಿಂದ ಐದು ಕಡೆ ಗಣೇಶ ವಿಸರ್ಜನೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಪುರಸಭೆ ಅಧ್ಯಕ್ಷರಾದ ಶ್ರೀ ವಿಜಯ ಬೋಳನ್ನವರ ತಿಳಿಸಿದರು.

ಪಟ್ಟಣದ ಪುರಸಭೆಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ ಗಣೇಶನ ಮೂರ್ತಿಗಳನ್ನು ಕೆರೆ ಬಾವಿ ನದಿಗಳಲ್ಲಿ ವಿಸರ್ಜನೆ ಮಾಡದೆ ಪುರಸಭೆಯಿಂದ ನಿಗದಿಪಡಿಸಿದ ಕೃತಕ ಹೊಂಡಗಳಲ್ಲಿ ವಿಸರ್ಜನೆ ಮಾಡಿ ಗಣೇಶ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಿಸಬೇಕು ಹಾಗೇ ದೊಡ್ಡ ಕೆರೆಯಲ್ಲಿ ಎರಡು ಕಡೆ, ದಾನಮ್ಮ ದೇವಿ ದೇವಸ್ಥಾನ, ಉದ್ಯಾನದ ಹತ್ತಿರ, ಎಂ ಜಿ ಹೈಸ್ಕೂಲ್ ಮೈದಾನ, ಎಂ ಜಿ ಹೌಸಿಂಗ ಕಾಲೋನಿಯ ಉದ್ಯಾನದಲ್ಲಿ ಗಣೇಶ ವಿಸರ್ಜನೆಗೆ ಅವಕಾಶ ಕಲ್ಪಿಸಲಾಗಿದೆ ಇದರ ಸದುಪಯೋಗ ಎಲ್ಲರೂ ಪಡೆದುಕೊಂಡು ಸ್ವಚ್ಛತೆಯನ್ನು ಕಾಯಬೇಕೆಂದು ಸಾರ್ವಜನಿಕರಿಗೆ ತಿಳಿಯಪಡಿಸಿದರು.

**ವರದಿ ಮಂಜು .ಎಮ್. ಚಿಕ್ಕಣ್ಣವರ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 20
ದಿನಾಂಕ: 01–09–2025 ಪುಟಗಳು:16

# ನಯನ ಮನೋಹರ ಪವಿತ್ರ ಯಾತ್ರಾ ಸ್ಥಳ ಮುಡುಕುತೊರೆ

ಮುಡುಕುತೊರೆಯು ಮೈಸೂರು ಜಿಲ್ಲೆಯಲ್ಲಿರುವ ಒಂದು ಪವಿತ್ರ ಯಾತ್ರಾ ಸ್ಥಳವಾಗಿದೆ. ಇದು ತಲಕಾಡಿನಿಂದ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ. ಇಲ್ಲಿ ಒಂದು ಬೆಟ್ಟದ ಮೇಲೆ ಮಲ್ಲಿಕಾರ್ಜುನಸ್ವಾಮಿ ದೇವಾಲಯವಿದೆ. ಗಂಗ ಅರಸರ ಕಾಲದ ಮೂಲ ದೇವಾಲಯವಿದ್ದು, ನಂತರ ವಿಜಯನಗರದ ವಾಸ್ತು ಶೈಲಿಯಲ್ಲಿ ಜೀರ್ಣೋದ್ಧಾರವಾಗಿದೆ. ದೇವಸ್ಥಾನದ ಪಶ್ಚಿಮದಲ್ಲಿರುವ ದ್ವಾರ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಂದ ನಿರ್ಮಾಣವಾಗಿದೆ. ಇಲ್ಲಿ ಬೆಟ್ಟದ ಮೇಲಿನಿಂದ ಕಾಣುವ ಕಾವೇರಿ ಕೊಳ್ಳದ ನೋಟ ನಯನ ಮನೋಹರವಾಗಿದ್ದು ದೇವಾಲಯವನ್ನು ತಲುಪಲು ರಸ್ತೆಯ ಸೌಲಭ್ಯವಿದೆ ಹಾಗೂ ಬೆಟ್ಟವನ್ನು ಹತ್ತಲು ಮೆಟ್ಟಿಲುಗಳ ವ್ಯವಸ್ಥೆಯಿದೆ. ಮೈಸೂರು ಜಿಲ್ಲೆ ತಿರುಮಕೂಡ್ಲು ನರಸೀಪುರ ತಾಲ್ಲೂಕು ಮುಡುಕುತೊರೆಯಲ್ಲಿ ಕಾವೇರಿ ತೀರದ ಬೆಟ್ಟದ ಮೇಲಿದೆ ಶ್ರೀ ಮಲ್ಲಿಕಾರ್ಜುನ ಮತ್ತು ಶ್ರೀ ಭ್ರಮರಾಂಬಿಕ ದೇವಾಲಯ.



ಮಹಾಭಾರತ ಕಾಲದಲ್ಲಿ ಅರ್ಜುನ ಅಜ್ಞಾತವಾಸದಲ್ಲಿದ್ದ ಸಂದರ್ಭದಲ್ಲಿ ಈ ಮಾರ್ಗವಾಗಿ ಸಂಚ–ರಿಸುವಾಗ ಮಲ್ಲಿಕಾ ಎಂಬ ಪುಷ್ಪದಿಂದ ಶಿವಲಿಂಗಕ್ಕೆ ಅರ್ಚನೆ ಮಾಡಿದ್ದ, ಅದಕ್ಕಾಗಿಯೇ ಈ ದೇವರಿಗೆ ಮಲ್ಲಿಕಾರ್ಜುನ ಎಂಬ ಹೆಸರು ಬಂತು ಎನ್ನುತ್ತದೆ ಸ್ಥಳ ಮಹಾತ್ಮೆ. ತಲಕಾಡು ಪಂಚಲಿಂಗ ದರ್ಶನದ ಪಂಚಲಿಂಗಗಳಲ್ಲಿ ಇದೂ ಒಂದು. ಈ ಬೆಟ್ಟದ ತಪ್ಪಲಿನಲ್ಲಿ ಬೆಟ್ಟಹಳ್ಳಿ ಮಾರಮ್ಮನ ದೇವಸ್ಥಾನ ಕೂಡ ಇದೆ. ಬೆಟ್ಟದ ಮೇಲೆ ನಿಂತು ನೋಡಿದರೆ ಕಾವೇರಿ ನದಿಯು ಹರಿಯುವ ರಮಣೀಯ ದೃಶ್ಯವನ್ನು ಕಾಣಬಹುದು. ಸುತ್ತಮುತ್ತ ಗದ್ದೆಗಳು, ತೋಪುಗಳು ಪುಟ್ಟ ಪುಟ್ಟ ದ್ವೀಪದಂತೆ ಗೋಚರಿಸುತ್ತವೆ. ಇಲ್ಲಿ ವರ್ಷಕ್ಕೊಮ್ಮೆ ರಥೋತ್ಸವ ಜರುಗುತ್ತದೆ ಈ ಸಂದರ್ಭದಲ್ಲಿ ಲಕ್ಷಾಂತರ ಜನ ಸೇರುತ್ತಾರೆ. ಇನ್ನೊಂದು ವಿಶೇಷವೆಂದರೆ ಮಲ್ಲಿಕಾರ್ಜುನ ರಥೋತ್ಸವಕ್ಕೆ ಒಂದು ವಾರ ಮುಂಚೆ ದನಗಳ ಜಾತ್ರೆ ನಡೆಯುತ್ತದೆ. ಈ ಸಮಯದಲ್ಲಿ ಸುತ್ತಮುತ್ತಲಿನ ರೈತರು ಬಂದು ತಮಗೆ ಬೇಕಾದ ಯೋಗ್ಯ ರಾಸುಗಳನ್ನು ಕೊಂಡುಕೊಳ್ಳುತ್ತಾರೆ. ಕೊಂಡ ರಾಸುಗಳಿಗೆ ಅಲಂಕಾರ ಮಾಡಿ ಅವುಗಳನ್ನು ಮೆರವಣಿಗೆಯಲ್ಲಿ ಒಯ್ಯುತ್ತಾರೆ.

**ಮಾರಮ್ಮ ತಾಯಿ ದೇವಾಲಯಗಳು**

ಕರ್ನಾಟಕದಾದ್ಯಂತ, ವಿಶೇಷವಾಗಿ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಮಾರಮ್ಮ ದೇವಿಯು ಸಾಮಾನ್ಯವಾಗಿ ರೋಗಗಳು ಮತ್ತು ಮಳೆಗಾಗುವ ಕಾಯಿಲೆಗಳಾದ ಸಿಡುಬು, ಕಾಲರಾ, ಚಿಕನ್‌ಗುನ್ಯಾ ಇತ್ಯಾದಿಗಳಿಂದ ಗ್ರಾಮಗಳನ್ನು ರಕ್ಷಿಸುವ ದೇವಿ ಎಂದು ನಂಬಲಾಗಿದೆ. ಈ ದೇವಿಯನ್ನು ದುರ್ಗಾ, ಆದಿಶಕ್ತಿ, ಕಾಳಿಕಾ, ಮತ್ತು ಚಾಮುಂಡಿ ಎಂದು ಕೂಡಾ ಕರೆಯಲಾಗುತ್ತದೆ, ಮತ್ತು ಆಕೆಯ ಆಶೀರ್ವಾದ ಪಡೆಯಲು ಭಕ್ತರು ಪೂಜೆ ಸಲ್ಲಿಸುತ್ತಾರೆ.

**ಮಾರಮ್ಮ ದೇವಿಯ ಪಾತ್ರ:**

ಮಾರಮ್ಮ ದೇವಿಯನ್ನು ಗ್ರಾಮಗಳ ರಕ್ಷಕಿ, ವಿಶೇಷವಾಗಿ ಸಿಡುಬು, ಕಾಲರಾ ಮುಂತಾದ ಕಾಯಿಲೆಗಳಿಂದ ರಕ್ಷಿಸುವ ಶಕ್ತಿ ಎಂದು ಪೂಜಿಸಲಾಗುತ್ತದೆ. ದೇವಿಯನ್ನು ಆದಿಶಕ್ತಿ, ಉಕ್ಕಡದ ಮಾರಮ್ಮ, ಕಾಳಿಕಾ, ಚಂಡಿ ಚಾಮುಂಡಿ, ಮತ್ತು ದುರ್ಗಾ ಎಂದು ಕೂಡಾ ಕರೆಯುತ್ತಾರೆ. ಭಕ್ತರು ಮಾರಮ್ಮನ ಆಶೀರ್ವಾದ ಪಡೆಯಲು ಮತ್ತು ರೋಗಗಳಿಂದ ರಕ್ಷಣೆ ಪಡೆಯಲು ಈ ದೇವಾಲಯಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸುತ್ತಾರೆ.

**ಉದಾಹರಣೆಗಳು :**

1. ಉತ್ತನಹಳ್ಳಿ ಮಾರಮ್ಮ ದೇವಸ್ಥಾನ:
ಮೈಸೂರಿನಲ್ಲಿರುವ ಈ ದೇವಾಲಯವನ್ನು ಚಾಮುಂಡೇಶ್ವರಿ ದೇವಿಯು ಮಾರಮ್ಮನ ಸಹೋದರಿ ದೇವಸ್ಥಾನದ ಬಳಿ ನಿರ್ಮಿಸಿದಳು. ಇಲ್ಲಿ 100 ಮೆಟ್ಟಿಲುಗಳನ್ನು ಹತ್ತುವ ಮೂಲಕ ದೇವಸ್ಥಾನ ತಲುಪಬಹುದು.

2. ಉಕ್ಕಡದ ಮಾರಮ್ಮನ ದೇವಸ್ಥಾನ:
ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನಲ್ಲಿದೆ. ಆದಿಶಕ್ತಿ, ಮಾರಮ್ಮ ಎಂದೆಲ್ಲಾ ಕರೆಯುವ ಈ ದೇವಿಯು ಗ್ರಾಮದ ಜನರ ಕರುಣಾಸಾಗರಿ.

3. ಸರ್ಕಲ್ ಮಾರಮ್ಮ ದೇವಸ್ಥಾನ:
ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಈ ದೇವಾಲಯವು 1800ರ ದಶಕದಲ್ಲಿ ಪ್ಲೇಗ್‌ಗೆ ತುತ್ತಾದಾಗ ಜನರನ್ನು ರಕ್ಷಿಸಲು ನಿರ್ಮಿಸಲಾಯಿತು.

**ವರದಿ ಪ್ರದೀಪ್ .ಜೆ.**

---

# ಶ್ರೀ ವಿಶ್ವರಾಧ್ಯರ ಪುರಾಣ ಮಹಾಮಂಗಲ ಮತ್ತು ಧರ್ಮ ಸಭೆ

## ಸುಕ್ಷೇತ್ರ ಶ್ರೀ ರೇವಣಸಿದ್ದೇಶ್ವರ ದೇವಸ್ಥಾನ ರೇವಗಿ (ರಟಕಲ) ಶ್ರೀ ವಿಶ್ವರಾಧ್ಯರ ಪುರಾಣ ಮಹಾಮಂಗಲ ಮತ್ತು ಧರ್ಮ ಸಭೆ ಕಾರ್ಯಕ್ರಮ.



ಕಲ್ಬುರ್ಗಿ ಜಿಲ್ಲೆಯ ಕಾಳಗಿ ತಾಲೂಕಿನ ಶ್ರೀಕ್ಷೇತ್ರ ರೇವಣಸಿದ್ದೇಶ್ವರ ದೇವಸ್ಥಾನ ರೇವಗ್ಗಿ ರಟಕಲ್ ಗುಡ್ಡದಲ್ಲಿ ಶ್ರೀ ರೇವಣಸಿದ್ದೇಶ್ವರ ಜಾತ್ರಾ ಮಹೋತ್ಸವ ಹಾಗೂ ಶ್ರಾವಣ ಮಾಸದ ಪ್ರಯುಕ್ತ ದಿನಾಂಕ 24.07.2025 ರಿಂದ 29.8.2025 ರವರೆಗೆ 37 ದಿನಗಳ ಪ್ರತಿನಿತ್ಯ ರಾತ್ರಿ 8:30 ಕ್ಕೆ ಸದ್ಗುರು ಅಬ್ಬೆ ತುಮಕೂರಿನ ಶ್ರೀ ವಿಶ್ವರಾಧ್ಯರ ಮಹಾಪುರಾಣವು ಜರುಗಿತು. ಶ್ರೀ ವಿಶ್ವರಾಧ್ಯರ ಜೀವನ ಚರಿತ್ರೆಯನ್ನು ಕೇಳಿದ ರೇವಗಿ, ರಟಕಲ್, ಮಾವಿನಸುರ, ಗೋಣಿಗಿ, ಬೇಡಸರ, ಮುಕರಂಬಿ, ಕಂದಗೋಳ, ಅರಣಕಲ್ ಸೇರಿದಂತೆ ಇನ್ನೂ ಅನೇಕ ಗ್ರಾಮಗಳ ಮತ್ತು ಕರ್ನಾಟಕದ ಮೂಲೆ ಮೂಲೆಯಿಂದ ಶ್ರೀ ರೇವಣಸಿದ್ದೇಶ್ವರನ ಭಕ್ತರು ಹಾಗೂ ಪುರಾಣ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವರು. ದಿ. 29.08.2025 ರಂದು ಸಾಯಂಕಾಲ 7:00ಗೆ ಶ್ರೀ ವಿಶ್ವರಾಧ್ಯರ ಪುರಾಣ ಮಹಾಮಂಗಲ ಕಾರ್ಯಕ್ರಮ ಮತ್ತು ಧರ್ಮಸಭೆ ಜರುಗಿತು. ಬೆಳಿಗ್ಗೆ 9:00 ಗಂಟೆಗೆ ಶ್ರೀ ರೇವಣಸಿದ್ದೇಶ್ವರ ದೇವಸ್ಥಾನದಲ್ಲಿ ಲೋಕ ಕಲ್ಯಾಣಕ್ಕಾಗಿ ಸಂಗೀತ ಮಹಾ ರುದ್ರಾಭಿಷೇಕ ಕಾರ್ಯಕ್ರಮ ಜರಗಿತು. ಈ ಕಾರ್ಯಕ್ರಮದಲ್ಲಿ ಸುತ್ತಮುತ್ತಲಿನ ಗ್ರಾಮಸ್ಥರು ಆಗಮಿಸಿದ್ದರು.



ಅದೇ ರೀತಿಯಾಗಿ ಈ ಪುರಾಣ ಕಾರ್ಯಕ್ರಮದ ಮಹಾ ಮಂಗಲ ಹಾಗೂ ಧರ್ಮಸಭೆ ಭಾಗವಹಿಸಿ ಪೂಜ್ಯಶ್ರೀ ಮ. ನಿ. ಪ್ರ. ಶಿವಾನಂದ ಮಹಾಸ್ವಾಮಿಗಳು ವಿರಕ್ತ ಮಠ ಮುಕರಂಬಿ ಹಾಗೂ ಹುಲಸೂರು, ಶ್ರೀ ಷ. ಬ್ರ. ವಿಜಯ ಮಹಾಂತೇಶ್ವರ ಶಿವಾಚಾರ್ಯ ಹಿರೇಮಠ ಚಿಮ್ಮಾ ಇದಲ್ಲಾಯಿ, ಷ. ಬ್ರ ಶ್ರೀ. ಡಾ. ಚನ್ನ ರುದ್ರಮುನಿ ಶಿವಾಚಾರ್ಯರು ಸೂಗುರು ಶ್ರೀಗಳು ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ಸರಕಾರ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಪ್ರತಿವರ್ಷ ಪುರಾಣ ಕಾರ್ಯಕ್ರಮದ ಸೇವೆ ಸಲ್ಲಿಸಿದ ಶ್ರೀ ವೀರಣ್ಣ ಎಸ್ ಗಂಗಾಣಿ ಮತ್ತು ಶ್ರೀ ಬಸವರಾಜ ಎಸ್. ಮಳಪ ರವರು ರೇವಣಸಿದ್ದೇಶ್ವರ ದೇವಸ್ಥಾನಕ್ಕೆ ಪ್ರತಿವರ್ಷವು ಪುಷ್ಪಾಲಂಕಾರ ಮಾಡುತ್ತಿರುವ ಸೇವೆಯನ್ನು ಗುರುತಿಸಿ ಅವರಿಗೂ ಸಹ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಪುರಾಣಿಕರಿಗೂ ಕೂಡ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಈ ಸಭೆಯಲ್ಲಿ ದಿವ್ಯ ಸಾನಿದ್ಯ ವಹಿಸಿದ ಪೂಜ್ಯಶ್ರೀ ಮ. ನಿ. ಬ್ರ ಪ್ರ. ಶಿವಾನಂದ ಮಹಾಸ್ವಾಮಿಗಳು ವಿರಕ್ತ ಮಠ ಮುಕರಂಬಿ ಹಾಗೂ ಹುಲಸೂರ, ಶ್ರೀ. ಷ.ಬ್ರ ವಿಜಯ ಮಾಂತೇಶ್ವರ ಶಿವಾಚಾರ್ಯರು ಹಿರೇಮಠ ಚಿಮ್ಮಾ ಇದಲ್ಲಾಯಿ, ಷ. ಬ್ರ. ಶ್ರೀ. ಶಾಂತ ಸೋಮಲಿಂಗ ಸೋಮನಾಥ ಶಿವಾಚಾರ್ಯರು ಮಂಗಲಿಗಿ ಹಾಗೂ ಟೆಂಗಳಿ, ಶ್ರೀ. ಷ. ಬ್ರ. ಡಾ. ಚನ್ನ ರುದ್ರಮುನಿ ಶಿವಾಚಾರ್ಯರು ಸೂಗೂರು, ಶ್ರೀ. ಷ. ಬ್ರ. ರೇವಣಸಿದ್ಧ ಶಿವಾಚಾರ್ಯರು ರೇವಣ ಸಿದ್ದೇಶ್ವರ ಹಿರೇಮಠ ರಟಕಲ್, ಶ್ರೀ ಶರಣ ಶಂಕರ ಲಿಂಗ ದಿಗಂಬರ್ ಮಹಾರಾಜ ತೀರ್ಥಕ್ಷೇತ್ರ ಕಲಮೂಡ, ಪೂಜ್ಯ ಷ, ಬ್ರ, ಶಿವಕುಮಾರ ಶಿವಾಚಾರ್ಯರು ನಿರ್ನಾಳ ಮತ್ತು ಸಂತ, ಪೂಜ್ಯ ಶ್ರೀ ನೀಲಕಂಠ ದೇವರು ರಟಕಲ್, ಪೂಜ್ಯ ಶ್ರೀ ರೇವಣಸಿದ್ಧ ಶರಣರು ಗೌರಿಗುಡ್ಡ ರಟಕಲ್, ಶ್ರೀ ರೇವಣಸಿದ್ದೇಶ್ವರ ದೇವಸ್ಥಾನದ ಸದಾಶಿವ ವಗ್ಗೆ ಕಾರ್ಯದರ್ಶಿಗಳು ಮತ್ತು ಜಗದ್ಗುರು ಶ್ರೀ ರೇವಣಸಿದ್ದೇಶ್ವರ ದೇವಸ್ಥಾನದ ಏಳು ಊರಿನ ಚಾಜಧಾರಿಗಳಾದ ರುದ್ರಶೆಟ್ಟಿ ಗುರುಮಿಠಕಲ್ ರಟಕಲ್, ರೇವಣಸಿದ್ದಪ್ಪ ದೇವರಮನಿ ರೇವಗಿ, ಗಂಗಾಧರ್ ಬಸವನಗುಡಿ ರೇವಗಿ, ಶಾಂತಪ್ಪ ಗೌಡ ಪಾಟೀಲ್ ರೇವಗಿ, ಸುಬ್ಬಣ್ಣ ಗೌಡ ಪಾಟೀಲ್ ರಟಕಲ್, ದಯಾಸಾಗರ ಪಾಟೀಲ್ ಬೇಡಸೂರ್, ರೇವಣಸಿದ್ಧ ಪಾಟೀಲ್ ಗೋಣಿಗಿ, ರಾಜಶೇಖರ್ ಪಾಟೀಲ್ ಮಕರಂಬಿ, ರೇವಣಸಿದ್ದ ಹಡಪದ ರೇವಗಿ ಮತ್ತು ವೀರಣ್ಣ ಗಂಗಾಣಿ ರೈತಸೇನೆ ತಾಲೂಕ ಅಧ್ಯಕ್ಷರು ಕಾಳಗಿ, ಬಸವರಾಜ್ ಎಸ್. ಮಳ್ಳಪ್ಪ, ಸುರೇಶ್ ಕಲಶೆಟ್ಟಿ, ನಿಂಗಪ್ಪ ಮಾಸ್ತರ್ ರಾಘ ಗುಂಡನೋರ, ಮಲ್ಲು ಹೂಗಾರ ಕರ್ನಾಟಕ ಸರ್ಕಾರ ಧಾರ್ಮಿಕ ದತಿ ಇಲಾಖೆಯ ಸಿಬ್ಬಂದಿಗಳು ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಈ ಪುರಾಣ ಕಾರ್ಯಕ್ರಮದ ಮಹಾಮಂಗಲ ಮತ್ತು ಧರ್ಮ ಸಭೆಯಲ್ಲಿ ಭಾಗವಹಿಸಿದರು.

**ವರದಿ ಚಂದ್ರಶೇಖರ್ ಆರ್. ಪಾಟೀಲ್**

ಕರುನಾಡ ಕಂದ
ಸಂಪುಟ 04 । ಸಂಚಿಕೆ 20
ದಿನಾಂಕ: 01-09-2025 ಪುಟಗಳು:16

# ನಾವು ಶಿಕ್ಷಕರು, ನಮ್ಮ ಶಿಕ್ಷಣ ಹೀಗಿರಲಿ ...

## ಸಮಸ್ತ ಗುರು ಬಳಗಕ್ಕೆ ಶಿಕ್ಷಕರ ದಿನಾಚರಣೆಯ ಗೌರವದ ಶುಭಾಶಯಗಳು.

ನಾವು ಈ ಲೇಖನ ಬರೆಯುವುದಕ್ಕೆ ಕಾರಣ ನಮ್ಮ ಜೀವ, ಅದು ನಮ್ಮ ತಾಯಿಯ ಭಿಕ್ಷೆ. ನಾವು ಇಲ್ಲಿಯವರೆಗೆ ಬದುಕಿದ್ದೇವೆ ಎಂದರೆ ಅದಕ್ಕೆ ಕಾರಣ ನಮ್ಮ ಜೀವನ, ಅದು ನಮ್ಮ ತಂದೆಯ ಭಿಕ್ಷೆ. ಈ ಜನ್ಮ ಜೀವನದಲ್ಲಿ ನಾವೆಲ್ಲಾ ಅಕ್ಷರಸ್ಥರು ಆಗಿದ್ದೇವೆ ಎಂದರೆ ಅದಕ್ಕೆ ಕಾರಣ ಶಿಕ್ಷಣ, ಅದು ನಮ್ಮ ಗುರುಗಳ ಭಿಕ್ಷೆ. ಪ್ರತಿ ವ್ಯಕ್ತಿಯ ಹೃದಯದಲ್ಲಿ ಅಕ್ಷರದ ಬೀಜ ಬಿತ್ತಿ, ಆ ವ್ಯಕ್ತಿಯ ಬದುಕಿಗೆ ದಾರಿದೀಪವಾಗಿರುವ ಸಮಸ್ತ ಗುರು ಬಳಗಕ್ಕೆ ಈ ಲೇಖನವನ್ನ ಸಮರ್ಪಿಸುತ್ತಿದ್ದೇವೆ.

ತುಮಕೂರಿನ ಸಿದ್ದಗಂಗಾ ಶ್ರೀಗಳು ಕಾಯಕಯೋಗಿಗಳಾದಂತೆ, ಗದುಗಿನ ಶ್ರೀ ಪುಟ್ಟರಾಜ ಗವಾಯಿಗಳು ಗಾನಯೋಗಿಗಳಾದಂತೆ, ವಿಜಯಪುರದ ಶ್ರೀ ಸಿದ್ದೇಶ್ವರ ಮಹಾ ಸ್ವಾಮೀಜಿಗಳು ಜ್ಞಾನಯೋಗಿಗಳಾದಂತೆ, ಪ್ರತಿ ಶಾಲೆಯ ಸರ್ವ ಮಕ್ಕಳ ಮೆದುಳಿಗೆ ಅಕ್ಷರಗಳ ಜ್ಞಾನ ನೀಡುವ ಗುರುಗಳು ಅಕ್ಷರ ಯೋಗಿಗಳು ಎಂದರೆ ತಪ್ಪಾಗಲಾರದು. ರಾಜನು ಗೆಲ್ಲಲಾರದ ಕಳ್ಳನು ಕದಿಯಲಾಗದ ಅಣ್ಣ ತಮ್ಮಂದಿರಲ್ಲಿ ಭಾಗವಾಗದ ಎಷ್ಟು ಗಳಿಸಿದರೂ ಗಳಿಸಬೇಕೆನ್ನುವ ಎಷ್ಟು ಹಂಚಿದರೂ ಹಂಚಬೇಕೆನ್ನುವ ಬಚ್ಚಿಟ್ಟರೆ ಕೊಳೆಯುವ ಬಿಚ್ಚಿಟ್ಟರೆ ಬೆಳೆಯುವ ಸಂಪತ್ತು ಅದುವೇ ವಿದ್ಯಾ ಸಂಪತ್ತು. ಅಂತಹ ಸಂಪತ್ತನ್ನು ನಿಷ್ಕಲ್ಮಶವಾದ ಹೃದಯದಿಂದ ನಿಸ್ವಾರ್ಥದ ಮನೋಭಾವನೆಯಿಂದ ತಮ್ಮ ತಮ್ಮ ಶಾಲೆಯ ಪ್ರತಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಎಲ್ಲಾ ಗುರು ಗುರು ಮಾತೆಯರಿಗೆ ನಮ್ಮ ಪ್ರೀತಿ ತುಂಬಿದ ಹೃದಯದಿಂದ ಗೌರವದ ನಮನಗಳು.

ಇತಿಹಾಸವನ್ನು ಒಮ್ಮೆ ಭಕ್ತಿಯಿಂದ ಕಂಡಾಗ ಶ್ರೀರಾಮಚಂದ್ರನು ಮರ್ಯಾದಾ ಪುರುಷೋತ್ತಮನಾಗಿದ್ದು ಅವರ ಗುರುಗಳಾದ ವಶಿಷ್ಟ ಮುನಿಯಿಂದ. ಅರ್ಜುನ ಮತ್ತು ಏಕಲವ್ಯ ಉತ್ತಮ ಬಿಲ್ವಿದ್ಯಾ ಪ್ರವೀಣರಾಗಿದ್ದು ದ್ರೋಣಾಚಾರ್ಯರಂತಹ ಗುರುಗಳಿಂದ. ಹಕ್ಕ ಬುಕ್ಕರು ಶತ್ರುಗಳ ದಾಳಿಯಿಂದ ಕೈ ತಪ್ಪಿದ ವಿಜಯನಗರ ಸಾಮ್ರಾಜ್ಯವನ್ನು ಹಿಂಪಡೆದದ್ದು ವಿದ್ಯಾರಣ್ಯರಂತಹ ಗುರುಗಳಿಂದ. ಶಿವಾಜಿ ಮಹಾರಾಜರು ಸೋತು ಬಸವಳಿದು ಕಂಗೆಟ್ಟು ಕುಳಿತು ಮತ್ತೆ ತಮ್ಮ ಸಾಮ್ರಾಜ್ಯವನ್ನು ಪಡೆಯಲು ಮಾರ್ಗದರ್ಶನ ಮಾಡಿದ್ದು ಗುರುಗಳಾದ ಶ್ರೀರಾಮದರ್ಶರು. ಶ್ರೀ ಭೀಮರಾವ್ ಬರೆದ ಸಂವಿಧಾನ ಇಂದು ದೇಶದ ಹಣೆಬರಹವನ್ನು ನಿರ್ಧರಿಸುವ ಒಂದು ಸಂಹಿತೆಯಾಗಿದೆ ಅಂದರೆ ಅದು ಅವರ ಗುರುಗಳಾದ ಅಂಬೇಡ್ಕರ್ ಅವರಿಂದ ಅಲೆಗ್ಸಾಂಡರ್ ಪ್ರಪಂಚವನ್ನೇ ಗೆಲ್ಲಲು ಹೊರಟಿದ್ದು ಹಿಂದೆ ಅರಿಸ್ಟಾಟಲ್ ಗುರು ಇದ್ದರು ಎಂಬ ಧೈರ್ಯದಿಂದ. ಅರಿಸ್ಟಾಟಲ್ ರವರ ಗುರು ಪ್ಲೇಟೋ, ಪ್ಲೇಟೋರವರ ಗುರು ಸಾಕ್ರೆಟಸ್ ಹೀಗೆ ಅನೇಕರ ಭವ್ಯ ಭವಿಷ್ಯತ್ತಿಗೆ ಮೇಣದ ಹಾಗೆ ತಮ್ಮನ್ನೇ ತಾವು ಸುಟ್ಟು ಪ್ರತಿ ವಿದ್ಯಾರ್ಥಿಯ ಬದುಕಿನಲ್ಲಿ ಜ್ಞಾನದ ಬೆಳಕನ್ನು ನೀಡುವ ಗುರು ಪರಂಪರೆಯನ್ನು ನೆನಪಿಸಿಕೊಂಡರೆ ಗುರು ಎಂದರೆ ಒಂದು ವ್ಯಕ್ತಿಯಲ್ಲ ಒಂದು ಶಕ್ತಿ ಎಂಬ ಮಾತು ಸತ್ಯವಾದದ್ದು.

ನೆನಪಿರಲಿ ಶಿಕ್ಷಕ ರಾಷ್ಟ್ರದ ನಿರ್ಮಾತೃ, ದೇಶದ ಬೆನ್ನೆಲುಬು ರೈತನಾದರೆ ವಿದ್ಯಾರ್ಥಿಯ ಬೆನ್ನೆಲುಬು ಶಿಕ್ಷಕ. ತಾಯಿಯೇ ಮೊದಲ ಗುರು ಗುರುವೇ ಎರಡನೆಯ ತಾಯಿ. ನಮ್ಮ ನಮ್ಮ ಶಾಲೆಯ ಮಕ್ಕಳಿಗೆ ತಾಯಿ ಪ್ರೀತಿ ನಿಡೋಣ. ಶ್ರೀ ಸಿದ್ದೇಶ್ವರ ಮಹಾ ಸ್ವಾಮೀಜಿಗಳು ಹೇಳಿದಂತೆ ಶಿಕ್ಷಕ ತಾಯಿಯಂತಿರಬೇಕೇ ವಿನಹ ನಾಯಿಯಂತಿರಬಾರದು ಎಂಬ ಮಾತು ಪ್ರತಿಕ್ಷಣ ಮನದಲ್ಲಿರಲಿ. ನಾಳೆ ನಮ್ಮ ಸ್ವಂತ ಮಕ್ಕಳು ನಮಗೆ ಅನ್ನ ಹಾಕುತ್ತಾರೋ ಇಲ್ಲವೋ ಗೊತ್ತಿಲ್ಲ ಆದರೆ ನಮ್ಮ ಶಾಲಾ ಮಕ್ಕಳು ನಮಗೆ ಈವಾಗ್ಲೇ ಅನ್ನ ಕೊಡುತ್ತಿದ್ದಾರೆ. ನಮ್ಮಿಂದ ಅವರಲ್ಲ ಅವರಿಂದ ನಾವು. ಮಕ್ಕಳಿದ್ದರೆ ಶಾಲೆ ಶಾಲೆ ಇದ್ದರೆ ನಮಗೆ ಸಂಬಳ. ಬಿಲ್ ಮತ್ತು ಬೆಲ್ ಶಿಕ್ಷಕರಾಗದೆ ಪ್ರತಿ ವಿದ್ಯಾರ್ಥಿಯ ದಿಲ್ ಗೆಲ್ಲುವ ಶಿಕ್ಷಕರು ನಾವಾಗೋಣ. ನಾಳೆ ನಮಗೆ ವಯಸ್ಸಾಗಿ ನಿವೃತ್ತಿಯಾದ ಮೇಲೆ ಯಾವುದೋ ಒಂದು ಕೆಲಸಕ್ಕಾಗಿ ಪೊಲೀಸ್ ಸ್ಟೇಷನ್ ಗೆ ಹೋದಾಗ ಅಲ್ಲಿ ಪಿಎಸ್ಐ ನಮ್ಮ ವಿದ್ಯಾರ್ಥಿಯೇ ಆಗಿರಬೇಕು. ಜಿಲ್ಲಾ ಆಡಳಿತ ಕಚೇರಿಗೆ ಹೋದಾಗ ಅಲ್ಲಿಯ ಜಿಲ್ಲಾಧಿಕಾರಿ ನಮ್ಮ ವಿದ್ಯಾರ್ಥಿಯೇ ಆಗಿರಬೇಕು. ಯಾವತ್ತೋ ಒಂದು ದಿನ ವಿಧಾನಸೌಧಕ್ಕೆ ಕಾಲಿಟ್ಟಾಗ ಅಲ್ಲಿ ಎಂಎಲ್ಎ ಹಾಗೂ ಮುಖ್ಯಮಂತ್ರಿ ಕೂಡಾ ನಮ್ಮ ವಿದ್ಯಾರ್ಥಿಯೇ ಆಗಿದ್ದರೆ ಎಷ್ಟು ಗೌರವ ಇದು ವಿಚಾರಿಸಬೇಕಾದ ವಿಷಯ. ಯಾವತ್ತಾದರೂ ಒಂದು ದಿನ ನಾವು ಶಾಲೆಗೆ ರಜೆ ಹಾಕಿ ಮಾರನೇ ದಿನ ಶಾಲೆಗೆ ಹೋದಾಗ ಎಲ್ಲಾ ವಿದ್ಯಾರ್ಥಿಗಳು ನಮ್ಮನ್ನು ಟೀಚರ್, ನಿನ್ನ ಯಾಕೆ ಸಾಲಿ ಬಿಟ್ಟಿದ್ರಿ ಅಂತ ಕೇಳ್ತಾರಲ್ಲ ಅದು ನಮಗೆ ಒಂದು ದೊಡ್ಡ ರಾಷ್ಟ್ರ ಗೌರವ ಕೊಟ್ಟ ಹಾಗೆ. ಪ್ರಾರ್ಥನೆಯಾದ ನಂತರ ಯಾವುದೋ ಒಂದು ತರಗತಿಗೆ ಹೋದ ನಂತರ ಗುಡ್ ಮಾರ್ನಿಂಗ್ ಟೀಚರ್ ಎಂದು ನಗುಮುಖದಿಂದ ಎದ್ದು ನಮ್ಮನ್ನು ಸ್ವಾಗತಿಸುತ್ತಾರಲ್ಲವಾ ಅದು ನಮಗೆ ಕರ್ನಾಟಕ ರತ್ನ ಕೊಟ್ಟ ಹಾಗೆ. ಕೆಲವು ವರ್ಷಗಳ ನಂತರ ನಮ್ಮ ಹಳೆಯ ವಿದ್ಯಾರ್ಥಿಯು ಎಲ್ಲೋ ಒಂದು ಕಡೆ ಸಿಕ್ಕಾಗ ನಾವು ಅವರನ್ನು ಗುರುತಿಸದಿದ್ದರೂ ಅವರು ನಮ್ಮನ್ನು ಗುರುತು ಹಿಡಿದು ಬಂದು ಸರ್ ಆರಾಮ್ ಇದ್ದೀರಾ ಅಂತ ಕೇಳ್ತಾರಲ್ಲ ಅದು ನಮಗೆ ಭಾರತರತ್ನ ಕೊಟ್ಟ ಹಾಗೆ.

ಗುರುವಿನ ಮಹತ್ವವನ್ನು ಸಂತ ಕಬೀರದಾಸರು ತುಂಬಾ ಸೊಗಸಾಗಿ ಹೇಳಿದ್ದಾರೆ. ಅದೇನೆಂದರೆ ಈ ಭೂಮಿಯ ಮೇಲಿನ ಎಲ್ಲಾ ಮರಗಳನ್ನು ಕಡಿದು ಲೇಖನಿಗಳನ್ನಾಗಿ ಮಾಡಿ, ಎಲ್ಲಾ ಸಮುದ್ರಗಳ ನೀರನ್ನು ಮಸಿಯನ್ನಾಗಿ ಪರಿವರ್ತಿಸಿ, ಆಕಾಶವನ್ನೇ ಕಾಗದವನ್ನಾಗಿ ಮಾಡಿ ಎಲ್ಲಾ ಭಾಷೆಗಳನ್ನು ಉಪಯೋಗಿಸಿ ಬರೆದರು ಕೂಡ ಗುರುವಿನ ಗುಣಗಾನ ಇನ್ನು ಉಳಿಯುತ್ತದೆ ಎಂಬ ಮಾತು ಬಹಳ ಸತ್ಯವಾದದ್ದು. ವಿದ್ಯಾರ್ಥಿಗಳ ಮೊದಲ ಪುಟ ಜನನ ತಾಯಿ ಬರೆದರೆ, ಕೊನೆಯ ಪುಟ ಮರಣ ದೇವರು ಬರೆದರೆ ಮಧ್ಯದ ಜೀವನ ಅನ್ನೋ ಹಲವಾರು ಪುಟಗಳನ್ನ ತಿದ್ದಿ ತೀಡಿ ಬರೆಯಬೇಕಾದದ್ದು ಗುರುಗಳು. ಇದು ಪ್ರತಿ ಗುರುವಿನ ಮಹತ್ತರವಾದ ಕಾರ್ಯವಾಗಿದೆ. ನಿಮಗೆ ತಿಳಿದಿರಲಿ ಸ್ವಾತಿ ಮಳೆಯ ನಕ್ಷತ್ರದಲ್ಲಿ ಮಾತ್ರ ಕಪ್ಪೆ ಚಿಪ್ಪು ಸಮುದ್ರದ ಮೇಲೆ ಬಂದು ಬಾಯಿ ತೆರೆದು ಆ ಕ್ಷಣದಲ್ಲಿ ಬೀಳುವ ಮಳೆ ಹನಿಯನ್ನು ಬಾಯಿ ತೆಗೆದು ಆ ಮಳೆಹನಿಯನ್ನು ಬಾಯಲ್ಲಿ ತಗೊಂಡು ಸಮುದ್ರದ ಆಳಕ್ಕೆ ಬಹುದೂರ ತೆಗೆದುಕೊಂಡು ಹೋಗಿ ಕೆಲವು ದಿನಗಳ ನಂತರ ಅದನ್ನು ಅತ್ಯಂತ ಬೆಲೆ ಬಾಳುವ ಮುತ್ತು ಆಗಿ ಪರಿವರ್ತಿಸುವುದು. ಹಾಗೆಯೇ ನಮ್ಮ ನಮ್ಮ ಶಾಲೆಗಳಲ್ಲಿ ಪ್ರತಿನಿತ್ಯ ಸ್ವಾತಿ ನಕ್ಷತ್ರದ ಜ್ಞಾನದ ಮಳೆ ಹನಿಗಳನ್ನು ವಿದ್ಯಾರ್ಥಿಗಳ ಮೆದುಳಿಗೆ ನೀಡಿ ಅವರನ್ನು ಕೂಡ ಸಮಾಜದಲ್ಲಿ ಒಬ್ಬ ಉತ್ತಮ ನಾಗರಿಕನಾಗಿ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ. ಮುತ್ತಿನಂತ ಮನುಷ್ಯನನ್ನಾಗಿ ಪರಿವರ್ತಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಆಗ ನಾವು ನಿಜವಾದ ಬಂಗಾರದ ಮನುಷ್ಯರಾಗುತ್ತೇವೆ. ಯಾವುದೋ ಒಂದು ಕಾರ್ಯಕ್ರಮಕ್ಕೆ ಪ್ರಧಾನಿಗಳೋ ಅಥವಾ ಮುಖ್ಯಮಂತ್ರಿಗಳೋ ಬಂದು ಸಾವಿರಾರು ಜನರ ಗುಂಪಲ್ಲಿ ಇದ್ದ ನಮ್ಮನ್ನು




ಗುರುತಿಸಿ ನಮ್ಮ ಹೆಸರು ಕೂಗಿ ಕರೆದಾಗ ನಮಗೆ ಎಷ್ಟು ಖುಷಿ ಆಗುತ್ತೆ ಅಲ್ವಾ. ಹಾಗೆಯೇ ನಮ್ಮ ಶಾಲೆಯ ಪ್ರತಿ ವಿದ್ಯಾರ್ಥಿಯನ್ನು ಹೆಸರಿಟ್ಟೇ ಕರೆಯುವ ರೂಡಿ ನಮ್ಮದಾಗಲಿ. ಕೇವಲ ಸಂಬಳದ ಶಿಕ್ಷಕರಾಗದೆ ನಮ್ಮ ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧ ಗಟ್ಟಿಗೊಳಿಸುವ ಹಾಗೂ ಅವರನ್ನು ಸಾಧಕರನ್ನಾಗಿ ಮಾಡುವ ಶಿಕ್ಷಕರು ನಾವಾಗೋಣ. ತಂದೆ ತಾಯಿಗಳು ನಮ್ಮ ಕೈಯಲ್ಲಿ ವಿದ್ಯಾರ್ಥಿ ಎಂಬ ಒಂದು ಸುಂದರವಾದ ಹೂವನ್ನು ಕೊಟ್ಟಿದ್ದಾರೆ. ಅದನ್ನು ಕಸದ ಬುಟ್ಟಿಗೆ ಎಸೆಯುತ್ತೀರೋ ಅಥವಾ ದೇವರ ಮುಡಿಗೆ ಅರ್ಪಿಸುತ್ತಿರೋ ಯೋಚಿಸಬೇಕಾದ ವಿಷಯ. ಪ್ರತಿ ಮಗು ನಮ್ಮ ಸ್ವಂತ ಮಗು ಎಂಬ ಯೋಚನೆ ಸದಾ ಇರಲಿ. ಎಲ್ಲಾ ವಿದ್ಯಾರ್ಥಿಗಳನ್ನು ಬರಿ ಕಲ್ಲುಗಳು ಅಂತ ದಯವಿಟ್ಟು ತಿಳಿಯಬೇಡಿರಿ, ಅವರನ್ನು ನಾವು ಕೆತ್ತಿ ಕೆತ್ತಿ ಶಿಲೆ ಮಾಡುತ್ತಿದ್ದೇವೆ ಅನ್ನೋ ಭ್ರಮೆಯಿಂದ ಆಚೆ ಬರೋಣ. ನೆನಪಿರಲಿ ಕೆಲವು ವಿದ್ಯಾರ್ಥಿಗಳು ಶಿಲೆಗಳಾಗಿಯೇ ನಮ್ಮ ಶಾಲೆಗೆ ಬಂದಿರುತ್ತವೆ ಅವರಿಗೆ ಪ್ರಾಣ ಪ್ರತಿಷ್ಠಾಪನೆ ಮಾಡಿ ಜ್ಞಾನ ಭಂಡಾರದ ದೇವರನ್ನಾಗಿಸಬೇಕು ಅಷ್ಟೇ. ಗುರು ಎಂಬುದು ಭೌತಿಕ ವಸ್ತುವಲ್ಲ. ಜ್ಞಾನ ಎಂಬುದನ್ನು ಶಿಷ್ಯನಲ್ಲಿಗೆ ಪ್ರವಹಿಸುವಂತೆ ಮಾಡುವ ಶಕ್ತಿ. ಶಿಷ್ಯನನ್ನು ಒಂದು ಹಿಮಗಲ್ಲು ಎಂದು ಭಾವಿಸಿದರೆ ಜ್ಞಾನ ಎಂಬುದು ಕುದಿಯುವ ನೀರಿನಂತೆ. ಗುರು ಈ ಕುದಿಯುವ ನೀರನ್ನು ಶಿಷ್ಯ ಎಂಬ ಹಿಮಗಲ್ಲಿನ ಮೇಲೆ ನಿಧಾನವಾಗಿ ಹನಿ ಸುರಿಯುತ್ತಾ ಬರುತ್ತಾನೆ. ಇಲ್ಲದಿದ್ದರೆ ಹಿಮಗಲ್ಲು ಬಿರುಕು ಬಿಡುತ್ತದೆ. ಗುರು ಶಿಷ್ಯನ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಾನೆ. ವಿಕಸನದ ಪ್ರಯಾಣದಲ್ಲಿ ಗುರು ಅಕ್ಷರಶಃ ಶಿಷ್ಯನನ್ನು ಹೊತ್ತೊಯ್ಯುತ್ತಾನೆ. " ವಿದ್ಯಾರ್ಥಿಗಳ ಬಾಳ ಹೊಂಬೆಳಕು ಶಿಕ್ಷಕರು " ಎಂದರೆ ತಪ್ಪಾಗಲಾರದು. ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆ ಹಿಂದೆ ಶಿಕ್ಷಕರ ಪಾತ್ರ ತುಂಬಾ ಮಹತ್ವದಾಗಿದೆ. " ತಾಯಿ ಜೀವ ನೀಡಿದರೆ ಶಿಕ್ಷಕರು ಜೀವನವನ್ನೇ ನೀಡುತ್ತಾರೆ " ಎಂಬ ಮಾತು ಅಕ್ಷರಶಃ ಸತ್ಯ. ಶಿಕ್ಷಕರು ವಿದ್ಯಾರ್ಥಿಗಳನ್ನು ನದಿ ದಾಟಿಸುವ ನಾಯಕರು ಹೌದು. ವಿದ್ಯಾರ್ಥಿಗಳಿಗೆ ತಮ್ಮ ಭವಿಷ್ಯದ ಬಗ್ಗೆ ಗುರಿ ಕಟ್ಟಿ ಕೊಡುವವರು ಗುರುಗಳು.

ನಾವು ಅಕ್ಷರವಾದರೆ ನಮ್ಮ ವಿದ್ಯಾರ್ಥಿಗಳು ಪದವಾಗಬೇಕು. ನಾವು ಪದವಾದರೆ ಅವರು ವಾಕ್ಯವಾಗಬೇಕು. ನಾವು ವಾಕ್ಯವಾದರೆ ಅವರು ಪ್ಯಾರಾ ಆಗಬೇಕು. ನಾವು ಪ್ಯಾರಾ ಆದರೆ ಅವರು ಪುಟವಾಗಬೇಕು ಹಾಗೆಯೇ ಮುಂದುವರೆಯುತ್ತಾ.. ನಾವು ಪುಟವಾದರೆ ಅವರು ಪುಸ್ತಕ. ನಾವು ಪುಸ್ತಕವಾದರೆ ಅವರು ಗ್ರಂಥ. ನಾವು ಗ್ರಂಥವಾದರೆ ಅವರು ಗ್ರಂಥಾಲಯ ಆಗಬೇಕು ಅಂದಾಗ ಮಾತ್ರ ಶಿಕ್ಷಕ ವೃತ್ತಿಗೆ ಒಂದು ಅತ್ಯುತ್ತಮವಾದ ಬೆಲೆ ಬರುವುದು. ನಾವು ಪ್ರತಿನಿತ್ಯ ಅವರ ಮೆದುಳಿಗೆ ಪಾಠ ಮಾಡುತ್ತೇವೆ. ಅವಾಗವಾಗ ಅವರ ಹೃದಯಕ್ಕೂ ಕೂಡ ಪಾಠ ಮಾಡಿರಿ, ಆಗ ಅವರ ಹೃದಯದಲ್ಲಿ ನೀವು ಸದಾ ಹೃದಯವಂತರು. ನಾವು ಶಿಕ್ಷಕ ವೃತ್ತಿಗೆ ಒಪ್ಪಿ ಬಂದಿಯೋ ಅಥವಾ ತಪ್ಪಿ ಬಂದಿವೋ ಗೊತ್ತಿಲ್ಲ ಆದರೆ ಈ ವೃತ್ತಿಯನ್ನು ಈಗ ಅಪ್ಪಿಕೊಳ್ಳಲೇಬೇಕು. ಅಂದಾಗ ಇಡೀ ಸಮಾಜವೇ ನಮ್ಮನ್ನು ತಬ್ಬಿಕೊಳ್ಳುತ್ತೆ. ಒಂದು ಶಾಲೆಗೆ ನಾವು ಶಿಕ್ಷಕರಾಗಿ ಆಯ್ಕೆಯಾಗಿ ಹೋಗುವಾಗ ನಮಗೆ ಯಾವುದೇ ಕಪ್ಪು ಚುಕ್ಕೆ ಇರುವುದಿಲ್ಲ. ಹಾಗೆಯೇ ಅಲ್ಲಿಂದ ಹೊರ ಬರುವಾಗಲೂ ಕೂಡ ಯಾವುದೇ ಕಪ್ಪು ಚುಕ್ಕೆ ಇರಬಾರದು. ನಿವೃತ್ತಿ ಆಗುವವರೆಗೂ ಒಂದು ಚಿಕ್ಕ ಕಪ್ಪು ಚುಕ್ಕೆ ಇಲ್ಲದಂತ ಪ್ರಾಮಾಣಿಕ ಸೇವೆ ನಮ್ಮದಾಗಲಿ. ನಮ್ಮ ಬೀಳ್ಕೊಡುವ ಸಮಾರಂಭ ನಮ್ಮ ಶಾಲೆ ಇರುವ ಊರಿನಲ್ಲಿ ಒಂದು ಜಾತ್ರೆಯಂತೆ ಇಡೀ ಊರಿನ ಜನ ಹಳೆಯ ವಿದ್ಯಾರ್ಥಿಗಳು ಎಲ್ಲರೂ ಸೇರಿ ಆಚರಿಸುವಂತಾಗಬೇಕು. ಕಲಿಕೆಯಲ್ಲಿ ಹಿಂದುಳಿದವರನ್ನು ಮೆಟ್ಟಿಲು ಎಂದು ಜಾಣರನ್ನು ಮೂರ್ತಿ ಎಂದು ದಯವಿಟ್ಟು ಬೇದಭಾವ ಮಾಡಬೇಡಿ. ನಿಮಗೊಂದು ಸತ್ಯ ನೆನಪಿರಲಿ ಪ್ರತಿ ದೇವಸ್ಥಾನಕ್ಕೆ ಹೋದಾಗ ನಾವು ಯಾರು ಗರ್ಭಗುಡಿಯಲ್ಲಿರುವ ದೇವರ ಮೂರ್ತಿಗೆ ನಮಸ್ಕರಿಸುವುದಿಲ್ಲ. ಮೊದಲಿಗೆ ಮೆಟ್ಟಿಲು ಮುಟ್ಟಿ ನಮಸ್ಕರಿಸುತ್ತೇವೆ.

ಹಾಗಾಗಿ ಯಾರೂ ಮೇಲಲ್ಲ ಯಾರೂ ಕೀಳಲ್ಲ ನೋಡುವ ದೃಷ್ಟಿ ಬದಲಾಗಬೇಕು ಅಷ್ಟೇ. ನಮ್ಮ ಕೈಯಲ್ಲಿ ಕಲಿತ ವಿದ್ಯಾರ್ಥಿಗಳು ಯಾರೋ ಒಬ್ಬರ ಕೆಳಗೆ ನೌಕರಿ ಮಾಡುವವರು ಆಗಬಾರದು. ಸಾವಿರಾರು ಜನರಿಗೆ ನೌಕರಿ ಕೊಡುವವರು ಆಗಬೇಕು. ನಮ್ಮ ಶಾಲೆ ಇರುವ ಊರಿನ ಹಿರಿಯರಿಗೆ ಕಿರಿಯವನಾಗಿ, ಕಿರಿಯರಿಗೆ ಹಿರಿಯವನಾಗಿ ಸಮಾಜಕ್ಕೆ ಆದರ್ಶ ವ್ಯಕ್ತಿಯಾಗಿ ಬದುಕಿದಾಗ ಮಾತ್ರ ನಮ್ಮ ಸೇವೆ ಪರಶಿವನಿಗೂ ಇಷ್ಟವಾಗುತ್ತದೆ. ಒಬ್ಬ ಹಾಡುಗಾರನಿಗೆ ಒನ್ಸ್ ಮೋರ್ ಎಂದರೆ ಮತ್ತೊಮ್ಮೆ ಹಾಡುವನು. ಒಬ್ಬ ನೃತ್ಯಗಾರನಿಗೆ ಒನ್ಸ್ ಮೋರ್ ಎಂದರೆ ಮತ್ತೊಮ್ಮೆ ನೃತ್ಯ ಮಾಡುವನು. ಆದರೆ ಒಬ್ಬ ವಿದ್ಯಾರ್ಥಿಯ ಗೋಲ್ಡನ್ ಲೈಫ್ ಗೆ ಒನ್ಸ್ ಮೋರ್ ಎಂದರೆ ಮತ್ತೆ ಅವನಿಗೆ ಆ ಕಲಿಕಾ ಅವಧಿಯನ್ನು ನಮ್ಮಿಂದ ಕೊಡಲು ಸಾಧ್ಯವಿಲ್ಲ. ಕಲಿಸುವಾಗ ಸರಿಯಾಗಿಯೇ ಕಲಿಸೋಣ. ಅವನ ಸಾಧನೆಯ ದೀಪವನ್ನು ಅವನ ಬದುಕಲ್ಲಿ ಬೆಳಗೋಣ. ಪ್ರತಿ ವಿದ್ಯಾರ್ಥಿಯ ಭವಿಷ್ಯದ ಬದುಕಿನ ಬುತ್ತಿಯಲ್ಲಿ ಸದಾ ಕಾಲ ಎಂದೆಂದಿಗೂ ಮರೆಯದ ಒಂದು ಸಿಹಿ ತುತ್ತು ನಾವು ಆಗೋಣ.

ಶ್ರೀ ಮುತ್ತು ಯ.ವಡ್ಡರ,
ಶಿಕ್ಷಕರು, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ,
ಹಿರೇಮಳಗಾವಿ ಬಾಗಲಕೋಟ - ಜಿಲ್ಲೆ . ,
9845568484

ಕರುನಾಡ ಕಂದ
ಸಂಪುಟ 04 । ಸಂಚಿಕೆ 20
ದಿನಾಂಕ: 01–09–2025 ಪುಟಗಳು:16

# ಶಿಕ್ಷಕ ಸಮುದಾಯಕ್ಕೆ ಸ್ಫೂರ್ತಿಯಾದ ವಿಶ್ವ ಬಂಧು ಸೇವಾ ಗುರು ಬಳಗದ ಕಲಾ ಸೇವೆ. ಹತ್ತು ಹಲವು ಸಮಾಜಮುಖಿ ಕಾರ್ಯ ಮಾಡುತ್ತಿರುವ ವಿಶ್ವಬಂಧು ಸೇವಾ ಗುರುಬಳಗ.




ಕೊಪ್ಪಳ : ಪ್ರಕೃತಿ ನಮಗೆ ಎಲ್ಲವನ್ನೂ ನೀಡಿದೆ ಅದನ್ನು ಸಂರಕ್ಷಿಸಿಕೊಂಡು ಹೋಗುವುದು ಮಾನವ ಧರ್ಮ. ಮಾನವನಾದರೂ ಯಾವುದಾದರೂ ಒಂದು ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಕೊಳ್ಳುವ ಮೂಲಕ ಸಮಾಜದಿಂದ ಪ್ರಕೃತಿಯಿಂದ ಪಡೆದ ಎಲ್ಲಾ ಸೌಲಭ್ಯಗಳನ್ನು ಉಪಯೋಗಿಸಿಕೊಂಡ ನಾವು ಸಮಾಜಕ್ಕೆ ನಮ್ಮೆಲ್ಲಾ ಕೆಲಸಗಳ ಜೊತೆ ಜೊತೆಗೆ ಏನಾದರೂ ಒಂದು ಕೊಡುಗೆ ನೀಡಲು ನಾವು ಸದಾ ಸಿದ್ಧರಾಗಿರಬೇಕು ಎಂಬುದಕ್ಕೆ ಸೃಜನಶೀಲ ಚಟುವಟಿಕೆಗಳ ಮೂಲಕ ಸಮಾಜ ಸೇವೆಯ ಮೂಲಕ ವೃತ್ತಿಯಲ್ಲಿ ಶಿಕ್ಷಕರಾದ ವಿಶ್ವ ಬಂಧು ಸೇವಾ ಗುರು ಬಳಗ ಸಾಕ್ಷಿಯಾಗಿದೆ. ಈ ಸಂಘಟನೆ ಸಮಾನ ಮನಸ್ಕರರು ಗುರುಗಳು ಸೇ–ರಿಕೊಂಡು ನಿಸ್ವಾರ್ಥ ಮನೋಭಾವದಿಂದ ಸೃಜನಶೀಲ ಚಟುವಟಿಕೆಗಳ ಮೂಲಕ ಶಿಕ್ಷಕ ವೃತ್ತಿಯ ಜೊತೆಗೆ ಬಿಡುವಿನ ಸಮಯದಲ್ಲಿ ಮತ್ತು ಸೇವೆಗಾಗಿ ಒಂದಿಷ್ಟು ಸಮಯವನ್ನು ಬಿಡುವು ಮಾಡಿಕೊಂಡು ಸಮಾಜ ಸೇವೆಯನ್ನು ಮಾಡುತ್ತಿರುವ ವಿಶ್ವ ಬಂಧು ಸೇವಾ ಗುರು ಬಳಗದ ಶಿಕ್ಷಕರ ಕಾರ್ಯ ಅಭಿನಂದನಾರ್ಹ.

ಸಮಾಜದ ಸ್ವಸ್ಥತೆ ಹಾಳಾಗುತ್ತಿರುವ ಈ ಸಂದರ್ಭದಲ್ಲಿ, ಯುವಕರು, ವೃತ್ತಿಪರರು ನಾಗ–ರಿಕರು, ಹಲವಾರು ದುಷ್ಟಚಟಗಳಿಗೆ ಬಲಿಯಾಗಿ ತಮ್ಮ ವೈಯಕ್ತಿಕ ಜೀವನ ಮತ್ತು ಸಾಮಾಜಿಕ ಜೀವನವನ್ನು ಹಾಳು ಮಾಡಿಕೊಳ್ಳುವ ಸಂದರ್ಭದಲ್ಲಿ ವೃತ್ತಿಯಲ್ಲಿ ಶಿಕ್ಷಕರಾಗಿದ್ದರು ಕೂಡ ಸಮಾಜವನ್ನು ಕಟ್ಟುವುದು ನಮ್ಮ ಕಾರ್ಯ ಎಂದು ಭಾವಿಸಿ ವೃತ್ತಿಯ ಜೊತೆ ಜೊತೆಗೆ ಸ್ವಸ್ಥ ಸಮಾಜ ಕಟ್ಟಲು ಸಂಘಟಿತರಾದ ಶಿಕ್ಷಕರ ಬಳಗ ಇದು. ಮಕ್ಕಳಿಗೆ ಅಕ್ಷರ ಜ್ಞಾನ ನೀಡುವ ಶಿಕ್ಷಕರು. ಬಿಡುವಿನ ವೇಳೆಯಲ್ಲಿ ಸಮಾಜ ಸೇವ ಕಾರ್ಯವನ್ನು ಮಾಡುತ್ತಿರುವುದು ಇವತ್ತಿನ ಸಮಾಜಕ್ಕೆ ಮಾದರಿಯಾಗಿದೆ.

ಪ್ರಾಥಮಿಕ ಶಾಲಾ ಶಿಕ್ಷಕರು, ಉಪನ್ಯಾಸಕರು ಸೇರಿದಂತೆ 15 ಜನ ಸದಸ್ಯರಿಂದ ಪ್ರಾರಂಭವಾದ ವಿಶ್ವ ಬಂಧು ಸೇವಾ ಗುರು ಬಳಗವು ಇಂದು 110ಕ್ಕಿಂತ ಹೆಚ್ಚು ಸದಸ್ಯರ ಒಳಗೊಂಡಿದೆ. ಇವರ ಉದ್ದೇಶವೇ ಸ್ವಸ್ಥ ಸಮಾಜವನ್ನು ಕಟ್ಟುವುದು ಒಂದು ಬದಲಾವಣೆ ಹೆಜ್ಜೆ ಇಟ್ಟಾಗ ಹಲವು ಹೊಸ ದಾರಿಗಳನ್ನ ಸೃಷ್ಟಿಸಿಕೊಳ್ಳುತ್ತದೆ ಎಂಬುದಕ್ಕೆ ವಿಶ್ವ ಬಂಧು ಸೇವಾ ಗುರು ಬಳಗದ ಇವತ್ತಿನ ಕಾರ್ಯಗಳೇ ಸಾಕ್ಷಿಯಾಗಿದೆ. ಶಿಕ್ಷಣ ಇಲಾಖೆಯ ಜೊತೆಜೊತೆಗೆ ತಾವೇ ಸ್ವತಃ ಸೇವೆಗೆ ಸಮಯ, ಹಣ ಎಲ್ಲವನ್ನೂ ಸೇರಿಸಿಕೊಂಡು ಮಕ್ಕಳ ಶಿಕ್ಷಣದಲ್ಲಿ ಪರಿಣಾಮಕ ಬದಲಾವಣೆ ತರಲು ಹಲವಾರು ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯಗತಗೊಳಿಸಿ ಯಶಸ್ವಿಯಾಗುತ್ತಿದ್ದಾರೆ. ಇವರ ಕಾರ್ಯ ಎಷ್ಟು ಅಚ್ಚುಕಟ್ಟಾಗಿದೆ ಎಂದರೆ. ಇವರು ನೀಡಿರುವ ಸೇವೆಗಳನ್ನ ಪಡೆದ ಆ ಭಾಗದ ಶಾಲಾ ಮಕ್ಕಳು ಕಲಿಕೆಗೆ ಬೇಕಾದ ವಾತಾವರಣವನ್ನು ನಿರ್ಮಿಸುವ ಇವರ ಸೇವೆಯನ್ನು ಬಳಕೆ ಮಾಡಿಕೊಂಡು ಗುಣಮಟ್ಟದ ಕಲಿಕೆಯನ್ನು ಪಡೆದುಕೊಂಡು ಶೈಕ್ಷಣಿಕ ಅವರ ಫಲಿತಾಂಶದಲ್ಲಿ ಪರಿಣಾಮಕ ಬದಲಾವಣೆಯನ್ನು ಕಂಡಿದೆ. ಅದಕ್ಕೆ ಶಿಕ್ಷಣ ಇಲಾಖೆ, ಜನಪ್ರತಿನಿಧಿಗಳು, ನಾಗರಿಕ ಸಮಾಜ ಸಂಪೂರ್ಣವಾಗಿ ಬೆಂಬಲವಾಗಿ ನಿಂತಿದೆ. ಕಾರಣ ಯಾವುದೇ ಸಂಘಟನೆ ಪ್ರಾರಂಭವಾದಾಗ ಜೊತೆಗೂಡುವವರ ಸಂಖ್ಯೆ ಕಡಿಮೆ ಇರಬಹುದು ಆದರೆ ಉದ್ದೇಶ ಮತ್ತು ಪರಿಣಾಮ ಸಮರ್ಪಕವಾಗಿ ಹೊರ ಬಂದಾಗ ಸಂಘಟನೆಯ ಬಲ ಮತ್ತಷ್ಟು ಹೆಚ್ಚು ಕೊಳ್ಳುತ್ತದೆ ಎಂಬುದಕ್ಕೆ ಬೃಹದಾಕಾರವಾಗಿ ಬೆಳೆದಿರುವ ಬೆಳೆಯುತ್ತಿರುವ ಶಿಕ್ಷಕರ ಬಳಗವೇ ಸಾಕ್ಷಿಯಾಗಿದೆ.

ಇವರು ನಿರ್ವಹಿಸಿರುವ ಕಾರ್ಯಗಳು

* ಶಾಲೆಗಳಲ್ಲಿ ಸಂಪೂರ್ಣ ಗೋಡೆ ಬರಹ ಚಿತ್ರಗಳು ಯೋಗದ ಭಂಗಿಗಳು ವಿವಿಧ ಚಿತ್ತಾರಗಳನ್ನು ಬಿಡಿಸುವುದರ ಮೂಲಕ ಗ್ರಾಮೀಣ ಭಾಗದ ಮಕ್ಕಳು ಶಾಲೆಗೆ ಮರಳುವಂತೆ ಮಾಡಿರುವುದು ಇವರು ಮತ್ತೊಂದು ಕಾರ್ಯದಲ್ಲಿ ತೊಡಗಿಕೊಳ್ಳುವಂತೆ ಅಭಿನಂದನೆ ಸಿಕ್ಕಿದೆ.
* ಪ್ರಾಥಮಿಕ ಶಾಲಾ ಮಕ್ಕಳಿಗೆ ಕಲಿಕೆಗೆ ಪೂರಕವಾಗಿರುವ ಚಿತ್ತಾರಗಳನ್ನು ಬಿಡಿಸುವ ಮೂಲಕ ಕಲಿಕೆಯಿಂದ ಹಿಂದುಳಿದ ಮಕ್ಕಳು ಮತ್ತು ವಿಶೇಷ ಮಕ್ಕಳಿಗೆ ಪ್ರೇರಣೆಯನ್ನು ನೀಡುತ್ತಿದೆ
* ಸ್ಫೂರ್ತಿ ತುಂಬುವ ಪ್ರೇರಣೆಯ ಸಾಲುಗಳು ಉತ್ತೇಜನ ಹೆಚ್ಚಿಸುವ ಗಾದೆ ಮಾತುಗಳು ಮಕ್ಕಳ ಕಲಿಕೆಗೆ ಪೂರಕ ಗೋಡೆ ಬರಹಗಳು ಈ ಮುಂತಾದ ಚಟುವಟಿಕೆಗಳ ಮೂಲಕ ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಿರುವ ಶಿಕ್ಷಕರ ಬಳಗ ಇದು.
* ಕನಿಷ್ಠ ವೆಚ್ಚದಲ್ಲಿ ಅಗತ್ಯವಿರುವ ಬಣ್ಣಗಳನ್ನು ತಂದು ವಿದ್ಯಾರ್ಥಿಗಳಿಗೆ ಆಕರ್ಷಕವಾದ ಉಪಯೋಗವಾಗುವ ಗಣಿತದ ಸೂತ್ರಗಳು ರೇಖಾಖಂಡಗಳು ಕನ್ನಡ ವ್ಯಾಕರಣದ ಚಿತ್ತಾರಗಳು ವಿವಿಧ ದಿಕ್ಕುಗಳು, ಮಗ್ಗಿಗಳು ಮಕ್ಕಳ ಮನಸ್ಸನ್ನು ಸೆಳೆಯುವಂತೆ ಚಿತ್ರವನ್ನು ಬಿಡಿಸುತ್ತಿರುವುದು ಇವರ ಪ್ರಸಂಶನೆಯಲ್ಲಿ ಮತ್ತೊಂದಾಗಿದೆ.
* ಮಾರನಾಳ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮ, * ಮಂಗಳೂರು ಹೋಬಳಿಯನ್ನು ಆಯ್ಕೆ ಮಾಡಿ ಕೋವಿಡ್ ವಾ–ರಿಯರ್ಸ್ ಗೆ ಕಷಾಯ ಪೌಡರ್ ಹಾಗೂ ಮಾಸ್ಕ್ ವಿತರಣೆ ಮಾಡಲಾಯಿತು.
* ಚಂಡಿನಾಳ ಸರ್ಕಾರಿ ಶಾಲೆಯಲ್ಲಿ ಸಸಿ ನೆಡುವ ಕಾರ್ಯಕ್ರಮ, ಬೇಸಿಗೆ ರಜಾ ಅವಧಿಯಲ್ಲಿ
* ಮಂಗಳೂರಿನ ಅಂಬೇಡ್ಕರ್ ನಗರ ಶಾಲೆಯಲ್ಲಿ ಉಚಿತ ಬೇಸಿಗೆ ಶಿಬಿರ, ಪ್ರತಿಭಾ ಪುರಸ್ಕಾರ, ಸಾವಯವ ಕೃಷಿ ಕುರಿತು ಉಪನ್ಯಾಸ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ.
* ಹಿರೇವಂಕಲಕುಂಟಾ ಹೋಬಳಿಯನ್ನು ಆಯ್ಕೆ ಮಾಡಿ ಗುಳೆ, ಹಿರೇವಂಕಲಕುಂಟಾ ಹಾಗೂ ಗಾಣದಾಳ ಗ್ರಾಮಗಳಲ್ಲಿ ಸರ್ಕಾರಿ ಶಾಲೆಯಲ್ಲಿ ಸಸಿ ನೆಡುವ ಕಾರ್ಯಕ್ರಮ ಜೊತೆಗೆ ಸ್ವಾತಂತ್ರ ಹೋರಾಟಗಾರ ಜಯಂತಿ ಆಚರಣೆ,
* ಹಿರೇವಂಕಲಕುಂಟಾ ಮಾದರಿ ಹಿರಿಯ ಪ್ರಾಥ–'ಮಿಕ ಶಾಲೆಯ ಆವರಣದಲ್ಲಿ ಹತ್ತು ದಿನಗಳ ಉಚಿತ ಯೋಗ ಶಿಬಿರ, ರಂಗೋಲಿ ಸ್ಪರ್ಧೆ, ಸ್ಲೋ ಬೈಕ್ ರೈಡ್ ಸ್ಪರ್ಧೆ ಹಾಗೂ ವ್ಯಕ್ತಿತ್ವ ವಿಕಸನ ಕುರಿತು ಉಪನ್ಯಾಸ ,
* ವನಜಬಾವಿ ಶಾಲೆಯಲ್ಲಿ ವಿಶ್ವ ವಿಜೇತ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ವಿದ್ಯಾರ್ಥಿಗಳಿಗೆ ಪ್ರಬಂಧ ಹಾಗೂ ಚಿತ್ರಕಲೆ ಸ್ಪರ್ಧೆ,
* ತಿಪ್ಪನಾಳ ಮತ್ತು ಲಿಂಗನಬಂಡಿ ಶಾಲೆಯಲ್ಲಿ ವಿವಿಧ ವಸತಿ ಶಾಲೆಯ ಪ್ರವೇಶ ಪರೀಕ್ಷೆಗೆ ಉಚಿತ ತರಬೇತಿ ಶಿಬಿರ,
* ಹೊಸಳ್ಳಿಯಲ್ಲಿ ಉಚಿತ ಬೇಸಿಗೆ ಶಿಬಿರ ನಡೆಯಿತು. ಕುಕನೂರು ಹೋಬಳಿಯನ್ನು ಆಯ್ಕೆ ಮಾಡಿ ಸಿದ್ನೇಕೊಪ್ಪ ಹಾಗೂ ಗಾವರಾಳ ಶಾಲೆಯಲ್ಲಿ ಸಸಿ ನೆಡುವ ಕಾರ್ಯಕ್ರಮ ಜೊತೆಗೆ ಪರಿಸರ ಕುರಿತು ಚಿತ್ರಕಲೆ ಸ್ಪರ್ಧೆ,
* ವಜ್ರಬಂಡಿ, ಗುತ್ತೂರ ಶಾಲೆಯಲ್ಲಿ ಸಸಿ ನೆಡುವ ಕಾರ್ಯಕ್ರಮ. ಫ್ಲೆಕ್ಸ ಅಳವಡಿಕೆ ಮತ್ತು ಗೋಡೆ ಬರಹ ಸೇವೆ.ಶಾಲೆಯ ಆಕರ್ಷಣೆ ಮತ್ತು ಗುಣಾತ್ಮಕ ಶಿಕ್ಷಣಕ್ಕೆ ಪೂರಕ ಮತ್ತು ಪ್ರೇರಕವಾಗಿರುವ ಫ್ಲೆಕ್ಸ ಅಳವಡಿಕೆ ಸೇವೆ ಮತ್ತು ಗೋಡೆ ಬರಹ ಮೂಲಕ ಪರಿಣಾಮಕಾರಿಯಾದ ಸುಮಾರು 86 ಕೊಠಡಿಗಳಿಗೆ ಫ್ಲೆಕ್ಸ್ ಅಳವಡಿಕೆ ಮಾಡಲಾಗಿದೆ.

ಸಿದ್ದಲಿಂಗಪ್ಪ ಶ್ಯಾಗೋಟಿ ರವರು ಕೋವಿಡ್ ಸಂದರ್ಭದಲ್ಲಿ ಕುವೆಂಪುರವರು ಬರೆದಿರುವ ಸ್ವಾಮಿ ವಿವೇಕಾನಂದರ ಪುಸ್ತಕ ಓದಿದ ಅದರಿಂದ ಪ್ರೇರಣೆಗೊಂಡು ಸಮಾಜಮುಖಿ ಕಾರ್ಯ ಕೈಗೊಳ್ಳಲು ಒಂದು ಸಂಸ್ಥೆ ಸ್ಥಾಪಿಸಬೇಕೆನ್ನುವ ಇಚ್ಛೆಯನ್ನು ಆತ್ಮೀಯ ಸ್ನೇಹಿತರ ಜೊತೆ ಹೋಬಳಿವಾರು ನಾಲ್ಕೈದು ಜನ ಸ್ನೇಹಿತರೊಂದಿಗೆ ಸಭೆ ಮಾಡಿ ಸುಮಾರು 15 ರಿಂದ 20 ಜನ ಸ್ನೇಹಿತರು ದಿನಾಂಕ 01.06.2020 ರಂದು ಕುಕನೂರ ತಾಲೂಕಿನ ತಿಮ್ಮಪ್ಪನ ತೋಪಿನಲ್ಲಿ ಸಭೆ ಮಾಡಿ ಸಮಗ್ರವಾಗಿ ಚರ್ಚಿಸಿ ಶ್ರಮ, ಸೇವೆ, ಸಹಬಾಳ್ವೆಯ ತತ್ವದಡಿ. ಸ್ವಾಮಿ ವಿವೇಕಾನಂದರು ಹಾಗೂ ಕೊಪ್ಪಳದ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳನ್ನು ಆದರ್ಶವಾಗಿ–ರಿಸಿಕೊಂಡು ಪ್ರತಿ ವರ್ಷ ಪ್ರತಿಯೊಬ್ಬರೂ 1000 ರೂ ಹಾಕಿಕೊಂಡು ವಿಶ್ವಬಂಧು ಸೇವಾ ಗುರುಬಳಗ ಎಂಬ ಶಿರೋನಾಮೆಯಲ್ಲಿ ಕಾರ್ಯ ನಿರ್ವಹಿಸಲು ನಿರ್ಣಯ ಕೈಗೊಳ್ಳಲಾಗಿದೆ.ಪರಿಸರ ಸಂರಕ್ಷಣೆ,

ಸರ್ಕಾರಿ ಶಾಲೆಗಳ ಸಬಲೀಕರಣ, ಪ್ರತಿಭಾ ಪುರಸ್ಕಾರ,ಶರಣರು, ಸಂತರು,ದಾರ್ಶನಿಕರು ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಆದರ್ಶಗಳನ್ನು ತಿಳಿಯುವುದು, ಯೋಗ ಶಿಬಿರ, ಮಕ್ಕಳ ಬೇಸಿಗೆ ಶಿಬಿರ ಹಾಗೂ ವಿವಿಧ ತರಬೇತಿ,ಕಾರ್ಯಾಗಾರ ಮತ್ತು ಉಪನ್ಯಾಸಗಳ ಆಯೋಜನೆ ಹೀಗೆ ವಿವಿಧ ಸಮಾಜಮುಖಿ, ರಚನಾತ್ಮಕ ಚಟುವಟಿಕೆಗಳನ್ನು ಮಾಡುವ ಉದ್ದೇಶವಿಟ್ಟು ಕೊಂಡು ಈ ಸಂಘಟನೆ ಸ್ಥಾಪೀಸಲಾಯಿತು ಎನ್ನುತ್ತಾರೆ ವಿಶ್ವ ಬಂದು ಸೇವಾ ಗುರು ಬಳಗದ ಅಧ್ಯಕ್ಷರಾದ, ಶಿಕ್ಷಕರಾದ ಶ್ರೀ ಸಿದ್ದಲಿಂಗಪ್ಪ ಶ್ಯಾಗೋಟಿ ಅವರು. ಅಂದು ಹದಿನೈದು ಇಪ್ಪತ್ತು ಸಮಾನ ಮನಸ್ಕ ಸ್ನೇಹಿತರೊಂದಿಗೆ ಪ್ರಾರಂಭವಾದ ವಿಶ್ವಬಂಧು ಸೇವಾ ಗುರುಬಳಗ ಈಗ ಸುಮಾರು 160 ಜನ ಸದಸ್ಯರನ್ನು ಹೊಂದಿದೆ ಸೇವಾ ಮನೋಭಾವ ಹೊಂದಿರುವವರು ಸದಸ್ಯರಾಗಬಹುದಾಗಿದೆ. ಶಿಕ್ಷಕ ಬಂಧುಗಳು, ಜನಪ್ರತಿನಿಧಿಗಳು ಅಧಿಕಾರಿಗಳು,ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸಮಾಜಮುಖಿ ಚಿಂತಕರು ಸಹಾಯ, ಸಹಕಾರ ನೀಡಿ ಪ್ರೋತ್ಸಾಹಿಸುತ್ತಿದ್ದಾರೆ.

ಗುರುಬಳಗದ ಸೇವಾ ಕಾರ್ಯದಿಂದ ಹಲವಾರು ಬದಲಾವಣೆ ಮತ್ತು ಪರಿಣಾಮ ನೋಡಬಹುದು.

* ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಯಶಸ್ವಿಯನ್ನು ಗಳಿಸುತ್ತಿರುವುದು
* ವಿದ್ಯಾರ್ಥಿಗಳಿಗೆ ಕಲಿಕಾ ವಾತಾವರಣ ನಿರ್ಮಾಣವಾಗಿರುವುದು
* ಮಕ್ಕಳ ಕಲಿಕೆಯನ್ನು ಸುಲಭವಾಗಿಸಿದ ಶಿಕ್ಷಕರ ಬಳಗ
* ಮಕ್ಕಳ ಓದಿನ ಆಸಕ್ತಿಯನ್ನು ಹೆಚ್ಚಿಸಿದೆ
* ಮಕ್ಕಳಿಗೆ ಗುಣಾತ್ಮಕ ಶಿಕ್ಷಣಕ್ಕೆ ಮಾದರಿಯಾಗಿದೆ
* ಗೋಡೆ ಬರಹ ಚಿತ್ರಪಟಗಳ ಬಿಡಿಸುವುದ–ರಿಂದ ಮಕ್ಕಳ ಕಲಿಕೆಗೆ ಸಹಕಾರಿಯಾಗಿದೆ ಮತ್ತು ಪರಿಣಾಮಾತ್ಮಕ ನುಡಿಗಳಿಂದ ಉತ್ತೇಜನ ಸಿಕ್ಕಿದೆ
* ಶಿಕ್ಷಕರ ಸಮುದಾಯಕ್ಕೆ ಸ್ಫೂರ್ತಿದಾಯಕವಾದ ಕಲಾ ಸೇವೆ
* ಶಿಕ್ಷಕ ಬಳಗದ ಸೇವೆಯಿಂದ ಶಾಲಾ ಚಿತ್ರಣವೇ ಬದಲಾಗಿದೆ
* ಹಲವು ವರ್ಷಗಳಿಂದ ಸುಣ್ಣ ಬಣ್ಣ ಕಾಣದೆ ಉಳಿದಿದ್ದ ಶಾಲೆಗಳು. ಈ ಬಳಗದ ಸೇವೆಯಿಂದ ಸರ್ಕಾರಿ ಪ್ರಾಥಮಿಕ ಶಾಲೆಗಳ ಕಟ್ಟಡಗಳು ಈಗ ವರ್ಣಮಯವಾಗಿವೆ ಮತ್ತು ಚಿತ್ತಾಕರ್ಷಕವಾಗಿದೆ
* ರಜಾ ದಿನಗಳಲ್ಲಿ ಮತ್ತು ಸಮಯ ಮಾಡಿಕೊಂಡು ಶಿಕ್ಷಕರ ಬಳಗದ ಸೇವೆ ಎಲ್ಲರಿಗೂ ಮಾದರಿಯಾಗಿದೆ.

ಶಿಕ್ಷಕರೆಂದರೆ ಮಕ್ಕಳಿಗೆ ಬರೀ ಪಾಠ ಮಾಡುವುದಷ್ಟೇ ಅಲ್ಲ. ಸಮಾಜವನ್ನು ತಿದ್ದುವ ಸಮಾಜವನ್ನು ಬದಲಾವಣೆ ಮಾಡುವ ಜವಾಬ್ದಾರಿ ಇರುತ್ತದೆ ಎಂಬುದನ್ನು ಅರಿತು. ಶಾಲಾ ಶಿಕ್ಷಣದಲ್ಲಿ ಬದಲಾವಣೆ ತರಲು. ತಮ್ಮದೇ ಆದ ಸಂಘಟನೆಯ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕು ಮತ್ತು ಕುಕುನೂರು ತಾಲೂಕುಗಳಲ್ಲಿ ಸರ್ಕಾರಿ ಶಾಲೆಗಳ ಬದಲಾವಣೆಗೆ ಕಲಿಕಾ ವಾತಾವರಣ ನಿರ್ಮಾಣ ಮಾಡಲಿಕ್ಕೆ ಶ್ರಮಿಸುತ್ತಿರುವ ವಿಶ್ವ ಬಂದು ಸೇವಾ ಗುರು ಬಳಗ. ಈ ಬಳಗದ ಸೇವೆ ಮಕ್ಕಳ ಕಲಿಕೆಯ ನ್ಯೂನ್ಯತೆಗಳನ್ನು ಹೋಗಲಾಡಿಸಿದೆ. ಮಕ್ಕಳಿಗೆ ಆಕರ್ಷಕ ವಾತಾವರಣವನ್ನ ನಿರ್ಮಾಣ ಮಾಡಿದೆ. ಇಂಥ ಸಂಘಟನೆಗಳು ಹೆಚ್ಚಾದಂತೆ. ಮಕ್ಕಳ ಕಲಿಕೆ ಮಟ್ಟ ಹೆಚ್ಚುತ್ತದೆ. ಸ್ವಸ್ಥ ಸಮಾಜ ನಿರ್ಮಾಣವಾಗಲು **ಇಂಥ**

**ಸಂಘಟನೆಗಳು ಬುನಾದಿಯಾಗುತ್ತವೆ. ಈ ಸಂಘಟನೆಗೆ ನಮ್ಮೆಲ್ಲರ ಬೆಂಬಲ ಅತ್ಯಗತ್ಯವಾಗಿದೆ.**



**ಶಿವನಗೌಡ**
**ಪೊಲೀಸ್ ಪಾಟೀಲ್**
ನವಲಹಳ್ಳಿ. ಉಪನ್ಯಾಸಕರು,
ಲೇಖಕರು.9845646370




## ಕರುನಾಡ ಕಂದ ಪತ್ರಿಕೆಯ ವಾರ್ಷಿಕ ಚಂದಾ ವಿವರ

ವಾರ್ಷಿಕ ಚಂದಾ =500/– ರೂಪಾಯಿಗಳು ಮಾತ್ರ (ಅಂಚೆ ವೆಚ್ಚ ಸೇರಿ)

ಫೋನ್ ಪೇ,ಗೂಗಲ್ ಪೇ ಅಥವಾ ಕ್ಯೂ ಆರ್ ಕೋಡ್ ಮೂಲಕ ಹಣ ಪಾವತಿಸಿ ನಿಮ್ಮ ಸಂಪೂರ್ಣ ವಿಳಾಸವನ್ನು ವಾಟ್ಸ್ ಆಪ್ ಮಾಡಿ.

KARUNADA KANDA

–ಬಸವರಾಜ ಬಳಿಗಾರ,
ಸಂಪಾದಕರು (9742776385)

ಕರುನಾಡ ಕಂದ
ಸಂಪುಟ 04 । ಸಂಚಿಕೆ 20
ದಿನಾಂಕ: 01-09-2025 ಪುಟಗಳು:16

# ನೀರಿನ ಮಟ್ಟ ಹೆಚ್ಚಿಸಲು ಗೆಜೆಟ್ ಹೊರಡಿಸಿ: ರೈತ ಮುಖಂಡ ಅರವಿಂದ ಕುಲಕರ್ಣಿ




**ವಿಜಯಪುರ/ ತಾಳಿಕೋಟೆ:** ನ್ಯಾಯಮೂರ್ತಿ ಬ್ರಿಜೇಶಕುಮಾರ ನೇತೃತ್ವದ 2ನೇ ನ್ಯಾಯಾಧೀಕರಣದ ತೀರ್ಪಿನಂತೆ ಆಲಮಟ್ಟಿ ಜಲಾಶಯದ ನೀರಿನ ಮಟ್ಟವನ್ನು 519.60 ರಿಂದ 524.256 ಮೀ.ಗೆ ನೀರು ನಿಲ್ಲಿಸಲು ಕ್ರಮ ಕೈಗೊಳ್ಳಬೇಕು ಹಾಗೂ ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಆದಷ್ಟು ಬೇಗ ಅಧಿಸೂಚನೆ ಹೊರಡಿಸಬೇಕೆಂದು ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದರು.

ಇತ್ತೀಚೆಗೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಅಖಂಡ ಕರ್ನಾಟಕ ರೈತ ಸಂಘದಿಂದ ಕರೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿರ್ಲಕ್ಷ್ಯ ಧೋರಣೆ ಕುರಿತು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ನ್ಯಾ. ಬ್ರಿಜೇಶಕುಮಾರ ನೇತೃತ್ವದ ಎರಡನೇ ನ್ಯಾಯಾಧೀಕರಣ 2010 ರಲ್ಲಿಯೇ ತೀರ್ಪು ನೀಡಿ, 2013ರ ತನ್ನ ಸ್ಪಷ್ಟೀಕರಣ ತೀರ್ಪಿನಲ್ಲಿ ಜಲಾಶಯದ ನೀರಿನ ಮಟ್ಟವನ್ನು 524.256 ಕ್ಕೆ ನಿಲ್ಲಿಸಲು ಅನುಮತಿ ನೀಡಿದೆ ತೀರ್ಪು ಬಂದು 15 ವರ್ಷಗಳಾದರೂ ಇಲ್ಲಿಯವರೆಗೆ ಜಲಾಶಯದ ನೀರಿನ ಮಟ್ಟ ಹೆಚ್ಚಿಸಲು ಸರ್ಕಾರ ಹೆಚ್ಚಿನ ಆಸಕ್ತಿ ವಹಿಸಿಲ್ಲ ಹಾಗೂ ಕೇಂದ್ರ ಸರ್ಕಾರ ಇನ್ನು ಇದಕ್ಕೆ ಅಧಿಸೂಚನೆ ಕೂಡಾ ಹೊರಡಿಸಿಲ್ಲ ಮಹಾರಾಷ್ಟ್ರದ ತಕರಾರಿನ ನೆಪ ಮುಂದಿಡುತ್ತಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೆರಡೂ ಪರಸ್ಪರ ಕೆಸರೆರಚಾಟದಲ್ಲಿ ತೊಡಗಿಕೊಂಡಿವೆ. ಇದರಿಂದ ಉತ್ತರ ಕರ್ನಾಟಕದ ರೈತರು ಭ್ರಮ ನಿರಸನಗೊಂಡಿದ್ದಾರೆ ಅವಳಿ ಜಿಲ್ಲೆಯ ರೈತರು ಲಕ್ಷಾಂತರ ಎಕರೆ ಜಮೀನು ಮನೆ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ ಕೆಲವರು ರಾಜ್ಯಗಳಿಗೆ ಗುಳೆ ಹೋಗಿದ್ದಾರೆ ಆದರೆ ತ್ಯಾಗ ಮಾಡಿದ ರೈತರಿಗೆ ನೀರು ಕೊಡದೆ ವಂಚಿಸಲಾಗುತ್ತಿದೆ ಯಾವ ರಾಜ್ಯಗಳಲ್ಲಿಯೂ ಸ್ಕೀಮ್ ಹಂತದ ಯೋಜನೆಗಳಿಲ್ಲ ಅದು ಇಲ್ಲಿ ಮಾತ್ರ ಏಕೆ ಎಂದು ಬೇಸರ ವ್ಯಕ್ತಪಡಿಸಿದರು. ಸದ್ಯ ಅಣೆಕಟ್ಟು 519.60 ರಿಂದ 524.256 ಮೀ.ಗೆ ಹೆಚ್ಚಿಸಲು ವಿಜಯಪುರ ಬಾಗಲಕೋಟೆ ಅವಳಿ ಜಿಲ್ಲೆಯ ಅಂದಾಜು 22 ಹಳ್ಳಿಗಳ ಸ್ಥಳಾಂತರ ಮಾಡಿ, ಪುನರ್ವಸತಿ ಕೇಂದ್ರ ನಿರ್ಮಿಸುವುದರ ಜೊತೆಗೆ 1 ಲಕ್ಷಕ್ಕೂ ಹೆಚ್ಚು ಭೂಸ್ವಾಧೀನ ಮಾಡಿಕೊಳ್ಳಬೇಕು ಇದಕ್ಕೆ 1ಕೋಟಿ ರೂ. ಗಳ ಪರಿಹಾರ ನೀಡಬೇಕು ಈ ಯೋಜನೆ ಸಾಕಾರಗೊಳ್ಳಲು ಈಗ ಒಂದು ಲಕ್ಷ ಕೋಟಿಗೂ ಅಧಿಕ ಹಣ ಬೇಕಾಗುತ್ತದೆ ಇಷ್ಟು ಹಣ ಕೊಡಲು ಸರ್ಕಾರಕ್ಕೆ ಅಸಾಧ್ಯ ಎಂದು ಡಿಸಿಎಂ ಡಿಕೆ ಶಿವಕುಮಾರ್ ಅವರು ಸದನಕ್ಕೆ ತಿಳಿಸಿದ್ದಾರೆ ಆದರೆ ಸರ್ಕಾರ ಇಚ್ಛಾಶಕ್ತಿ ತೋರಿದರೆ ಎಲ್ಲವನ್ನೂ ಮಾಡಬಹುದಾಗಿದೆ ಎಂದ ಅವರು ಒಂದು ವೇಳೆ ಇಷ್ಟೊಂದು ಹಣ ರಾಜ್ಯ ಸರ್ಕಾರಕ್ಕೆ ಒದಗಿಸಲು ಸಾಧ್ಯವಿಲ್ಲವೆಂದಾದರೆ ಈ ಯೋಜನೆಯನ್ನು ಪೂರ್ಣಗೊಳಿಸಲು ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಿ ಕೇಂದ್ರ ಸರ್ಕಾರ ತನ್ನ ಸುಪರ್ದಿಗೆ ತೆಗೆದುಕೊಂಡು ಇದನ್ನು ಅನುಷ್ಠಾನಗೊಳಿಸಬೇಕು ಎಂದು ಆಗ್ರಹಿಸಿದ ಅವರು ಪ್ರಸ್ತುತ ಇರುವ ಆಲಮಟ್ಟಿ ಆಣೆಕಟ್ಟು 519.60 ಮೀ ಎತ್ತರದಿಂದ 123.081 ಟಿಎಂಸಿ ನೀರು ರಾಜ್ಯದ ಪಾಲಾಗಿದ್ದು ಇದರಲ್ಲಿ ವಿಜಯಪುರ ಬಾಗಲಕೋಟೆ ಕೊಪ್ಪಳ ಕಲಬುರ್ಗಿ ಯಾದಗಿರಿ ರಾಯಚೂರು ಜಿಲ್ಲೆಗಳು ನೀರು ಉಪಯೋಗಿಸುತ್ತಿವೆ ಇನ್ನು ಆಣೆಕಟ್ಟು 519.60 ರಿಂದ 524.256 ಮೀ.ಗೆ ಹೆಚ್ಚಳವಾದರೆ 130 ಟಿಎಂಸಿ ನೀರು ಹೆಚ್ಚುವರಿಯಾಗಿ ಲಭಿಸಲಿದ್ದು ಇದರಲ್ಲಿ 80 ಟಿಎಂಸಿ ನೀರು ವಿಜಯಪುರ ಬಾಗಲಕೋಟೆ ನೀರಾವರಿ ಯೋಜನೆಗಳಿಗೆ ಸಿಗಲಿದೆ ಆದ್ದರಿಂದ ಸಂತ್ರಸ್ತರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಸರ್ಕಾರಗಳು ಯೋಜನೆಯನ್ನು ಸಂಪೂರ್ಣ ಅನುಷ್ಠಾನಕ್ಕೆ ತರಬೇಕು ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಆದಷ್ಟು ಬೇಗ ಅಧಿಸೂಚನೆ ಹೊರಡಿಸಬೇಕೆಂದು ನಮ್ಮ ಆಗ್ರಹ ಆಗಿದೆ ಇದರಲ್ಲಿ ಇನ್ನಷ್ಟು ವಿಳಂಬವಾದರೆ ರಾಜ್ಯದ ಮಠಾಧೀಶರೊಂದಿಗೆ ಸೇರಿ ದೊಡ್ಡ ಮಟ್ಟದ ಹೋರಾಟವನ್ನು ಮಾಡುವುದು ಅನಿವಾರ್ಯವಾಗುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮುಖಂಡರಾದ ಗುರುರಾಜ ಪಡಶೆಟ್ಟಿ, ಆನಂದ ಪಾಟೀಲ, ಬಸನಗೌಡ ಹಳ್ಳಿಪಾಟೀಲ, ಶ್ರೀನಿವಾಸ ಗೊಟಗುಣಕಿ, ಮಡಿವಾಳಪ್ಪ ಕಲಬುರ್ಗಿ, ಅಶೋಕ ಪಾಟೀಲ, ಬಿ.ಎಸ್. ಸಜ್ಜನ, ಬಸನಗೌಡ ಪಾಟೀಲ ಹಾಗೂ ರಾಮನಗೌಡ ಹಾದಿಮನಿ ಇದ್ದರು.

**ವರದಿ ನಜೀರ ಅಹ್ಮದ್ ಚೋರಗಸ್ತಿ**

# ನೂತನ ಮೆಗಾ ಮಾರ್ಕೆಟ್ ಡಿಪಾಜಿಟ್ ಕುರಿತು ಚರ್ಚೆ



**ವಿಜಯಪುರ/ ಇಂಡಿ:** ಪುರಸಭೆ ಸಾಮಾನ್ಯ ಸಭೆಯು ಪುರಸಭೆ ಆವರಣದಲ್ಲಿ ಅಧ್ಯಕ್ಷ ಲಿಂಬಾಜಿ ರಾಠೋಡ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಪುರಸಭೆ ಮುಖ್ಯಾಧಿಕಾರಿ ಸಿದ್ರಾಮ ಕಟ್ಟಿಮನಿ ಎಲ್ಲರನ್ನೂ ಸ್ವಾಗತಿಸಿದರು.


ಇಂಡಿ ಪುರಸಭೆಯಿಂದ ನೂತನವಾಗಿ ಕಟ್ಟಲ್ಪಟ್ಟ ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಸ್ವಾಮೀಜಿ ಮೆಗಾ ಮಾರ್ಕೆಟಿನ ಕೆಳ ಅಂತಸ್ತಿನ ಒಂದು ನೂರು ಅಂಗಡಿ ಬಾಡಿಗೆ ಕೊಡುವ ಟೆಂಡರ್ ಕರೆದಿತ್ತು. ಬಾಡಿಗೆದಾರರು ಯಾರೂ ಭಾಗವಹಿಸಿರಲಿಲ್ಲ. ಪ್ರತಿ ಅಂಗಡಿಗೆ ಎರಡು ಲಕ್ಷ ಡಿಪಾಜಿಟ್ ಮತ್ತು ಬಾಡಿಗೆ ಹರಾಜು ಮಾಡಬೇಕಾಗಿತ್ತು. ಎರಡು ಲಕ್ಷ ರೂ. ಡಿಪಾಜಿಟ್ ಬಹಳವಾಗುತ್ತದೆ ಎಂದು ಸಾರ್ವಜನಿಕರು ಮನವಿ ಮಾಡಿದ್ದರು. ಈ ಕುರಿತು ಸಾಮಾನ್ಯ ಸಭೆಯಲ್ಲಿ ಡಿಪಾಜಿಟ್ ಕಡಿಮೆ ಮಾಡಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು.

2023-24 ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಪುರಸಭೆ ಇಂಡಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಉನ್ನತೀಕರಿಸಲು ಪೈಪ್ ಲೈನ್ ಕಾಮಗಾರಿ ಕೈಗೊಳ್ಳುವ ಕುರಿತು ಚರ್ಚೆ, ಇಂಡಿ ಪಟ್ಟಣದ ಬ್ಲಾಕ್ ನಂ. 30 ವಸತಿ ಉದ್ದೇಶದ ಕರಡು ವಿನ್ಯಾಸ ನಕ್ಷೆಗಳಿಗೆ ಅನುಮೋದನೆ ನೀಡುವ ಕುರಿತು ಚರ್ಚೆ, ಇಂಡಿ ಪಟ್ಟಣದ ಬ್ಲಾಕ್ ನಂ. 500 ರ ವಾಣಿಜ್ಯ ಉದ್ದೇಶದ ತಾತ್ಕಾಲಿಕ ತಾಂತ್ರಿಕ ಅನುಮೋದನೆ ಪರಿಷ್ಕೃತ ವಿನ್ಯಾಸಕ್ಕೆ ಅನುಮೋದನೆ ನೀಡುವ ಕುರಿತು ಚರ್ಚೆ ನಡೆಯಿತು.

ಚರ್ಚೆಯಲ್ಲಿ ಉಪಾಧ್ಯಕ್ಷ ಜಹಾಂಗೀರ ಸೌದಾಗರ , ಸದಸ್ಯರಾದ ಅನೀಲಗೌಡ ಬಿರಾದಾರ, ದೇವೇಂದ್ರ ಕುಂಬಾರ, ಉಮೇಶ ದೇಗಿನಾಳ, ಅಯೂಬ ಬಾಗವಾನ, ಶಬ್ಬೀರ ಖಾಜಿ ಪಾಲ್ಗೊಂಡಿದ್ದರು. ಪುರಸಭೆ ಸದಸ್ಯರಾದ ಭೀಮನಗೌಡ ಪಾಟೀಲ, ಬನ್ನೆಮ್ಮ ಹದರಿ, ರೇಣುಕಾ ಉಟಗಿ, ಸುಜಾತಾ ಚನಗೊಂಡ, ಕವಿತಾ ಜಯರಾಮ ರಾಠೋಡ , ವ್ಯವಸ್ಥಾಪಕರು ಪ್ರವೀಣ ಸೋನಾರ, ಅಸ್ಲಂ ಖಾದಿಮ್, ಸೋಮು ನಾಯಕ, ಹುಚ್ಚಪ್ಪ ಶಿವಶರಣ ಚಂದು ಕಾಲೆಭಾಗ, ನಿಂಬಾಳಕರ ಭಾಗವಹಿಸಿದ್ದರು.

**ವರದಿ. ಅರವಿಂದ ಕಾಂಬಳೆ**

# ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ಶೀಘ್ರದಲ್ಲೇ ಪರಿಶೀಲಿಸಿ ರದ್ದುಗೊಳಿಸಲು ನಿರ್ಧಾರ




**ಯಾದಗಿರಿ/ಗುರುಮಠಕಲ್:** ಇತ್ತೀಚೆಗೆ ಬಿಪಿಎಲ್ ಪಡಿತರ ಚೀಟಿಗಳ ಕುರಿತು ಆಹಾರ ಸಚಿವರ ಸೂಚನೆಯ ಮೇರೆಗೆ ಪರಿಶೀಲನೆ ಮಾಡಿ ಕ್ರಮ ತೆಗೆದು ಕೊಳ್ಳುತ್ತೇವೆ ಎಂದು ಗುರುಮಠಕಲ್ ತಾಲೂಕ ಆಹಾರ ನಿರೀಕ್ಷಕರಾದ ಸಾಯಿಬಣ್ಣ ತಿಳಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿ ಗುರುಮಠಕಲ್ ತಾಲೂಕಿನಲ್ಲಿರುವ 3288 ಅನರ್ಹ ಬಿಪಿಎಲ್ ಕಾರ್ಡ್ ಬಳಸುತ್ತಿರುವವರ ಪೈಕಿ ಈಗಾಗಲೇ 330 ಬಿಪಿಎಲ್ ಕಾರ್ಡ್‌ಗಳನ್ನು ಪರಿಷ್ಕರಿಸಿ ಶೀಘ್ರದಲ್ಲೇ ರದ್ದುಗೊಳಿಸುವ ಪ್ರಕ್ರಿಯೆ ಆರಂಭವಾಗಲಿದೆ ಎಂದು ತಿಳಿಸಿದ್ದಾರೆ.

ಅಂಕಿ ಅಂಶಗಳ ಪ್ರಕಾರ ತಾಲೂಕಿನಲ್ಲಿ 1998 ಎಪಿಎಲ್ ಪಡಿತರ ಚೀಟಿದಾರರು, 30,631 ಬಿಪಿಎಲ್ ಪಡಿತರ ಚೀಟಿದಾರರು ಮತ್ತು 3948 ಅಂತ್ಯೋದಯ ಪಡಿತರ ಚೀಟಿದಾರರು ಇದ್ದು, ಈ ಕೆಳಕಂಡ ಮಾನದಂಡಗಳ ಪ್ರಕಾರ ಅವುಗಳ ವಿಂಗಡಿಸಿ ಪರಿಶೀಲನೆ ಮಾಡಿ ಅವುಗಳ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ವಾರ್ಷಿಕ ಒಂದು ಲಕ್ಷದ ಇಪ್ಪತ್ತು ಸಾವಿರಕ್ಕೂ ಹೆಚ್ಚಿನ ಆದಾಯ ಉಳ್ಳವರು 554.

* 7.5ಎಕರೆ ಜಮೀನು ಹೊಂದಿರುವವರು 283.
* ವಾರ್ಷಿಕ 25ಲಕ್ಷ ವಹಿವಾಟು ಮಾಡುವವರು 6.
* ಅಂತರರಾಷ್ಟ್ರೀಯ ಕಂಪನಿಯಲ್ಲಿ ಕೆಲಸ ಮಾಡುತ್ತಿರುವವರು 38.
* ಕರ್ನಾಟಕ ಸೇರಿದಂತೆ ಇತರೆ ರಾಜ್ಯದಲ್ಲಿ ಪಡಿತರ ಚೀಟಿ ಹೊಂದಿರುವವರು 1027.
* ರಾಜ್ಯದಲ್ಲಿನ ಒಂದಕ್ಕಿಂತ ಹೆಚ್ಚು ಪಡಿತರ ಚೀಟಿಯಲ್ಲಿ ಹೆಸರಿರುವವರು 2.
* ಒಂದು ವರ್ಷಕ್ಕಿಂತ ಮೇಲ್ಪಟ್ಟು ಪಡಿತರ ಪಡೆಯದಿರುವವರು 12.
* 6 ರಿಂದ 12 ತಿಂಗಳಿನೊಳಗೆ ಪಡಿತರ ಪಡೆಯದಿರುವವರು 302.
* 6 ತಿಂಗಳಿನ ಒಳಗಾಗಿ ಪಡಿತರ ಪಡೆಯದಿರುವವರು 67.
* ಪಡಿತರ ಚೀಟಿಯಲ್ಲಿ ಒಂದೇ ಸದಸ್ಯ ಇರುವವರು 1.

ವಿಶೇಷವಾಗಿ ಸರಕಾರಿ ನೌಕರಿ ಇದ್ದಲ್ಲಿ ಬಿಪಿಎಲ್ ಕಾರ್ಡ್ ಹೊಂದಿದ್ದರೆ ದಯವಿಟ್ಟು ಕಚೇರಿಗೆ ಭೇಟಿ ನೀಡಿ ಬಿಪಿಎಲ್ ಕಾರ್ಡ್ ನ್ನು ಮಾರ್ಪಾಟು ಮಾಡಿಕೊಳ್ಳಲು ಮತ್ತು ಪಡಿತರ ಚೀಟಿಯಲ್ಲಿ ಹೆಸರಿರುವವರು ಇನ್ನೂ ಇ-ಕೆ ವೈ ಸಿ ಮಾಡಿಸದವರಿಗೂ ಕಾರ್ಡ್ ರದ್ದಾಗುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

ಅನರ್ಹ ಬಿಪಿಎಲ್ ಕಾರ್ಡ್‌ಗಳ ಪರಿಶೀಲನೆ ಮತ್ತು ರದ್ದುಗೊಳಿಸುವ ಪ್ರಕ್ರಿಯೆ ಬಡವರ ಹಿತಾಸಕ್ತಿಗೆ ಅನುಕೂಲವಾಗಲಿದೆ.

**ವರದಿ: ಜಗದೀಶ್ ಕುಮಾರ್ ಭೂಮಾ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 20
ದಿನಾಂಕ: 01-09-2025 ಪುಟಗಳು:16

# ಇಲಾಖೆಗಳ ಸಮನ್ವಯ ಕೊರತೆ, ಅಭಿವೃದ್ಧಿಯಿಲ್ಲದೆ ಬಾಡಿದ ಸ್ಥಿತಿಯಲ್ಲಿ ಜಲಪಾತ ಪ್ರದೇಶ : ನಿರಾಶರಾದ ಪ್ರವಾಸಿಗರು

## ಪುಂಡರ ಅಡ್ಡೆಯಾಗಿ ಮಾರ್ಪಟ್ಟ ಪ್ರಕೃತಿಯ ಮಡಿಲ ಕಣ್ ಮನ ಸೆಳೆಯುವ ಧಬ್ ದಬಿ ಜಲಪಾತ

**ಗುರುಮಠಕಲ್/ನಜರಾಪೂರ್:** ಗುರುಮಠಕಲ್ ಪಟ್ಟಣಕ್ಕೆ ಪ್ರಕೃತಿ ನೀಡಿದ ವರ ಕೇವಲ ಕೆಲವೇ ಕಿ.ಮೀ. ದೂರದ ನಜರಪೂರ್ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಧಬ್ ದಬಿ ಜಲಪಾತ ನೋಡಲು ದೂರ ದೂರದಿಂದ ಬರುವ ಪ್ರವಾಸಿಗರು.



ಕಳೆದ ಕೆಲ ವರ್ಷಗಳಿಂದ ಪ್ರವಾಸಿಗರು ಈಜು, ಅಜಾಗರೂಕತೆಯಿಂದ ಸೆಲ್ಫಿ ತೆಗೆಯಲು ಕಾಲು ಜಾರಿ ಬಿದ್ದು ನೀರಿನ ಸೆಳೆತಕ್ಕೆ ಸಿಲುಕಿ ಮೃತಪಟ್ಟಿರುವ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಈಗ ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧ ಹೇರಲಾಗಿದೆ.

ಅರಣ್ಯಇಲಾಖೆ, ಪ್ರವಾಸೋದ್ಯಮ, ಕಂದಾಯ ಇಲಾಖೆಗಳ ಸಮನ್ವಯದ ಕೊರತೆಯಿಂದಾಗಿ ಸುಮಾರು ಒಂದು ಕೋಟಿಗೂ ಅಧಿಕ ಬಳಕೆಯಾಗದ ಅನುದಾನ ಹಣ, ನಮ್ಮ ಭಾಗದ ಒಂದು ಒಳ್ಳೆಯ ಪ್ರೇಕ್ಷಣೀಯ ಸ್ಥಳ ಅನ್ಯೆತಿ–ಕ ಚಟುವಟಿಕೆಗಳ ತಾಣವಾಗಿ ಮಾರ್ಪಾಟು ಆಗುತ್ತಿದೆ, ಎಲ್ಲೆಂದರಲ್ಲಿ ಬಿದ್ದಿರುವ ಬಿಯರ್ ಮದ್ಯದ ಬಾಟಲಿಗಳು, ಪ್ಲಾಸ್ಟಿಕ್ ತ್ಯಾಜ್ಯ ನೋಡಲು ಬರುವ ಪ್ರವಾಸಿಗರಿಗೆ ರಮಣೀಯ ಜಲಪಾತ ಜೊತೆ ಒಡೆದ ಬಾಟಲಿಗಳ ದರ್ಶನ ವಿಚಿತ್ರ ಅನುಭವ ಉಂಟಾಗುತ್ತಿದೆ.

ಸ್ನೇಹಿತರೊಡನೆ, ಕುಟುಂಬ ಸದಸ್ಯರೊಡನೆ ಬರುವ ಸಾರ್ವಜನಿಕರು ಜಲಪಾತಕ್ಕೆ ಬರುವ ಪ್ರವಾಸಿಗರು ಸರಿಯಾದ ವ್ಯವಸ್ಥೆ ಇಲ್ಲದಿರುವ ಕಾರಣ ಹೈರಾಣಾಗಿರುವುದಂತೂ ನಿಜ. ನಜರಾಪೂರ್ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸಣ್ಣ ಪುಟ್ಟ ವ್ಯವಸ್ಥೆ ಮಾಡಿದ್ದರೂ, ಪ್ರವಾಸಿಗರಿಗೆ ಕೂಡಲು ಆಸನ, ಶೌಚಾಲಯ, ಬಟ್ಟೆ ಬದಲಾಯಿಸಲು ಕೋಣೆ, ಮಳೆಗಾಲದಲ್ಲಿ ಹೆಚ್ಚಿನ ಪ್ರವಾಸಿಗರು ಬರುವ ಕಾರಣ ಒಬ್ಬ ಸಿಬ್ಬಂದಿ ಕಲ್ಪಿಸಲು ಸ್ಥಳೀಯರ ಮನವಿ.

**ವರದಿ: ಜಗದೀಶ್ ಕುಮಾರ್ ಭೂಮಾ.**

**“ ಧಬ್ ದಬಿ ಜಲಪಾತದ ವೀಕ್ಷಣೆಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ, ಜಲಪಾತದ ಬಳಿ ಯಾವುದೇ ಸರಿಯಾದ ಸೂಚನಾ ಫಲಕಗಳಿಲ್ಲ ಒಂದೆರಡು ಅಳವಡಿಕೆ ಮಾಡಿದ್ದರೂ ಸಹ ಅಪಾಯದ ಅರಿವಿಲ್ಲದೆ, ಪ್ರವಾಸಿಗರು ಪ್ರಾಣಕ್ಕೆ ಕುತ್ತು ತಂದು ಕೊಳ್ಳುತ್ತಿದ್ದಾರೆ, ಪ್ರವಾಸಕ್ಕೆ ಬರುವ ಅಧಿಕಾರಿಗಳು ಅಭಿವೃದ್ಧಿಗೆ ಮುಂದಾಗಲಿ “.**

**- ಸಂಜೀವ ಕುಮಾರ್ ಅಳೆಗಾರ್,**
**ಸಾಮಾಜಿಕ ಕಾರ್ಯಕರ್ತ.**

**“ ಮಳೆಗಾಲದಲ್ಲಿ ಜಲಪಾತವು ಹೆಚ್ಚು ರಭಸದಿಂದ ಹರಿಯುವ ಕಾರಣ ಪ್ರವಾಸಿಗರನ್ನು ಆಕರ್ಷಿಸುವ ಜಲಪಾತಕ್ಕೆ ಸುಮಾರು ಅಂದಾಜು 1.40 ಕೋಟಿ ಅನುದಾನ ಬಂದಿದ್ದರೂ ಪ್ರವಾಸೋದ್ಯಮ, ಕಂದಾಯ, ಅರಣ್ಯ ಇಲಾಖೆಗಳ ಸಮನ್ವಯ ಕೊರತೆಯಿಂದ ಯಾವುದೇ ಅಭಿವೃದ್ಧಿ ಕಾಣದೆ ಜಲಪಾತ ಹೆಚ್ಚು ಜನರನ್ನು ಆಕರ್ಷಿಸುವಲ್ಲಿ ವಿಫಲವಾಗಿದೆ, ಇಲ್ಲಿ ಬರುವ ಪ್ರವಾಸಿಗರಿಗೆ ಶೌಚಾಲಯ ಸೇರಿದಂತೆ ಮೂಲಭೂತ ಸೌಕರ್ಯ ಮತ್ತು ಅನ್ಯೆತಿಕ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು “.**

**- ಶರಣ ಬಸಪ್ಪ ಎಲ್ಹೇರಿ.**
**ಕರವೇ ತಾಲೂಕ ಅಧ್ಯಕ್ಷರು. ಗುರುಮಠಕಲ್**

---

## ಶಿಥಿಲಾವಸ್ಥೆಯಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಎಲೇಶ್ವರ ದೇವಾಲಯ । ಯಾವ ಹಂಪಿಗೂ ಕಡಿಮೆ ಇಲ್ಲ ಇಲ್ಲಿನ ಶಿಲ್ಪಕಲೆ

# 11 ನೆಯ ಶತಮಾನದ ಮಹಾನ್ ಶಿವಶರಣ ಎಲೇಶ್ವರ ಕೇತಯ್ಯನವರಿಂದ ಪೂಜಿಸಲ್ಪಟ್ಟ ಶಿವಾಲಯ.

**ಯಾದಗಿರಿ /ಗುರುಮಠಕಲ್ :** ತಾಲೂಕಿನ ಎಲ್ಹೇರಿ ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣ ಗೊಂಡಿರುವ ದೇವಾಲಯಗಳು ಶಿಥಿಲಾವಸ್ಥೆಯಲ್ಲಿ ಕಾಣ ಸಿಗುತ್ತವೆ.








ಸುತ್ತಲೂ ಹಬ್ಬಿರುವ ಮುಳ್ಳಿನ ಪೊದೆಗಳು, ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡು ಬಿದ್ದ ಕಲ್ಲಿನ ರಾಶಿ, ಆಕರ್ಷಕವಾದ ಕೆತ್ತನೆಗಳು, ಒಳ ಹೊಕ್ಕರೆ ಇತಿಹಾಸ ಹಾಗೂ ಶಿಲ್ಪಕಾರರ ಕಲಾ ಸಂಪತ್ತನ್ನು ವಿವರಿಸಲು ಕಾತುರದಲ್ಲಿರುವಂತೆ ಭಾಸವಾಗುವ ಕಲಾಕೃತಿಗಳು. ಕಲ್ಯಾಣದ ಚಾಲುಕ್ಯರ ಸಮಯದಲ್ಲಿ ಅಥವಾ ಅದಕ್ಕೂ ಪೂರ್ವದಲ್ಲಿ ನಿರ್ಮಿಸಲ್ಪಟ್ಟ ಎಲ್ಹೇರಿ ಗ್ರಾಮದ ಯಲ್ಲೇಶ್ವರ ದೇವಸ್ಥಾನವು ಶಿಲ್ಪಕಲೆಯ ಮೇರು ಕೃತಿಯಾಗಿದ್ದು ಪ್ರಸ್ತುತ ಅವಸಾನದ ಹಂತಕ್ಕೆ ಬಂದು ತಲುಪಿದೆ.

ಅದ್ಭುತ ವಾಸ್ತುಕಲೆ ಕಲ್ಲಿನ ಗೋಡೆಯಲ್ಲಿ ನಿರ್ಮಾಣದ ಶಿಲೆಗಳು, ಮಾಹಿತಿ ಪ್ರಕಾರ ದೇಗುಲ ನಿರ್ಮಾಣದ ಸರಿ ಸುಮಾರು ಹನ್ನೊಂದು ಹನ್ನೆರಡನೇ ಶತಮಾನವಿರಬಹುದು ಎಂದು ಅಂದಾಜಿಸಲಾಗುತ್ತದೆ. ಇಂದಿಗೂ ಈ ದೇವಸ್ಥಾನದ ಕೆತ್ತನೆಗಳು ಮನಸ್ಸಿಗೆ ಮುದ ನೀಡುತ್ತಿರುವುದು ಕಲಾಕಾರನ ಕೌಶಲಕ್ಕೆ ಹಿಡಿದ ಕನ್ನಡಿಯಾಗಿದೆ.

ಸುಮಾರು ಆರು ಅಡಿಗಳಷ್ಟು ಎತ್ತರದವರೆಗೆ ನುಣುಪಾದ ಬಳಪದ ಕಲ್ಲಿನಿಂದ ಕಟ್ಟಿರುವುದು ಆಕರ್ಷಣೆಯನ್ನು ಹೆಚ್ಚಿಸಿದೆ. ಬಳಪದ ಕಲ್ಲಿನಿಂದ ಮೇಲಿನ ಭಾಗವು ಉತ್ಕೃಷ್ಟ ಮಟ್ಟದ ಕಪ್ಪುಶಿಲೆಯಿಂದ ನಿರ್ಮಿಸಲಾಗಿದ್ದು, ಗೋಡೆಗಳಲ್ಲಿ ಸೂಕ್ಷ್ಮ ಕೆತ್ತನೆಗಳ ಮೂಲಕ ಆಕರ್ಷಿಸುತ್ತವೆ ಈ ದೇವಸ್ಥಾನ ಸ್ವಲ್ಪ ಮಟ್ಟಿಗೆ ಮಹಾ ಮಂಡಲೇಶ್ವರನಿಂದ ಚಿತಾಪುರ ತಾಲೂಕಿನ ಕಾಳಗಿಯ ಸೂರ್ಯನಾರಾಯಣ ದೇವಸ್ಥಾನ ಹೋಲುತ್ತದೆ.

ದೇವಸ್ಥಾನದಲ್ಲಿನ ಕಲ್ಲಿನ ಗೋಡೆಯ ಮೇಲೆ ನಾಟ್ಯ ಭಂಗಿಯ ಶಿಲಾ ಬಾಲಕಿಯರು, ಸಾಲಾಗಿ ಸಾಗುವಂತೆ ಭಾಸವಾಗುವ ಗಜಪಡೆ, ಸೂಕ್ಷ್ಮವಾದ ಕೆತ್ತನೆಯಿಂದ ಹೂವು, ಎಲೆ, ಬಳ್ಳಿಯ ನಿರ್ಮಿಸಿದ್ದು ಶಿಲ್ಪಕಲೆಯನ್ನು ಅಭ್ಯಸಿಸುವವರಿಗೆ ಉತ್ತಮ ಸ್ಥಳವಾಗಿದೆ.

ಕ್ರಿ. ಶ. 1166 ಕಾಲದಲ್ಲಿ ಇದ್ದ ಮಹಾನ್ ಶಿವ ಭಕ್ತ ಕೇತಯ್ಯನವರಿಂದ ಪೂಜಿಸಲ್ಪಟ್ಟ ದೇವಾಲಯದ ಶಿವಲಿಂಗ ಯಲ್ಲೇಶ್ವರನೆಂದು ಹೇಳಲಾಗುತ್ತದೆ. ಢಾಂಬಿಕ ಭಕ್ತಿ, ತೋರಿಕೆಯ ಆಚಾರವನ್ನು ಕಟುಶಬ್ದಗಳಿಂದ ಟೀಕಿಸುತ್ತಿದ್ದ ಕೇತಯ್ಯನವರು 'ಏಲೇಶ್ವರ' ಎಂಬುದನ್ನು ತಮ್ಮ ವಚನಗಳ ಅಂಕಿತವಾಗಿಸಿದ್ದರು. ಮಡದಿ ಸಾಯಿದೇವಮ್ಮ, ಮಕ್ಕಳಾದ ಶಿವಣ್ಣ ಮತ್ತು ಶಿವಕ್ಕರೊಂದಿಗೆ ಬೇಸಾಯವನ್ನೇ ಕಾಯಕ ಮಾಡಿಕೊಂಡು ದೇವರ ಇರುವಿಕೆಯನ್ನು ವ್ಯಕ್ತಿಯ ಅಂತರಂಗದ ಒಳ್ಳೆಯ ಮನಸ್ಸು ಮತ್ತು ಬಹಿರಂಗದ ಕ್ರಿಯೆಗಳಲ್ಲಿ ಕಾಣುತ್ತಿದ್ದರು, ಹೆಚ್ಚಾಗಿ ಸ್ತ್ರೀಯರಿಗೆ ಸಿಗಬೇಕಾದ ಸ್ಥಾನಮಾನಗಳಿಗಾಗಿ ಸೂಕ್ಷವಾಗಿ ವಚನಗಳ ಮೂಲಕ ನೇಮ, ವ್ರತ, ಆಚರಣೆಗಳ ಕುರಿತು, ಸುಮಾರು 200 ಕ್ಕೂ ಹೆಚ್ಚು ವಚನ ಬರೆದಿದ್ದಾರೆ, ಈಗ ಸುಮಾರು 74 ವಚನಗಳು ಮಾತ್ರ ಸಿಕ್ಕಿವೆ, ಅಂತಹ ಮಹಾನ ಶಿವ ಭಕ್ತ ವಚನಕಾರರಿಂದ ಪ್ರತಿನಿತ್ಯ ಪೂಜೆ ಮಾಡುತ್ತಿದ್ದ ದೇವಾಲಯ ಇಂದು ಈ ಸ್ಥಿತಿಗೆ ತಲುಪಿದೆ.

ನಿಧಿಯಾಸೆಗೆ ಬಲಿಯಾದ ಬೆಲೆಕಟ್ಟಲಾಗದ ಶಿಲ್ಪಕಲೆ ಪುರಾತನವಾದ ಈ ದೇಗುಲದಲ್ಲಿ ನಿಧಿ ಸಿಗುತ್ತದೆ ಎಂಬ ದುರಾಸೆಯಿಂದ ಎಲ್ಲೆಂದರಲ್ಲಿ ಅಗೆದಿದ್ದು, ದೇವಾಲಯ ಸಂಪೂರ್ಣ ಶಿಥಿಲಗೊಂಡಿದೆ. ಸಂಬಂಧ ಪಟ್ಟ ಯಾವುದೇ ಇಲಾಖೆ, ಅಧಿಕಾರಿ, ಚುನಾಯಿತ ಜನ ಪ್ರತಿನಿಧಿಗಳು ಮತ್ತು ಸ್ಥಳೀಯ ಸಾರ್ವಜನಿಕರಿಂದಲೂ ನಿರ್ಲಕ್ಷ್ಯಕ್ಕೊಳಗಾಗಿರುವ ಈ ದೇವಾಲಯವು ಸಂಪೂರ್ಣ ಶಿಥಿಲಾವಸ್ಥೆಗೆ ತಲುಪಿದೆ.

ಈಗಲಾದರೂ ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳು ಈ ಅಮೂಲ್ಯವಾದ ಕಲಾಕೃತಿಯನ್ನು ಸಂರಕ್ಷಿಸಬೇಕು ಮತ್ತು ಜಿಲ್ಲಾಡಳಿತ ಇತ್ತ ಗಮನಹರಿಸಿ ಇದನ್ನು ಅಭಿವೃದ್ಧಿಪಡಿಸಬೇಕು. ನಿರ್ಲಕ್ಷ್ಯಕ್ಕೆ ತುತ್ತಾಗಿ ಶಿಥಿಲಗೊಂಡ ಶಿಲ್ಪಕಲೆ ಇದರಿಂದ ಪುರಾತನವಾದ ಈ ಶಿಲ್ಪಕಲಾಕೃತಿಯನ್ನು ಮುಂದಿನ ಪೀಳಿಗೆಗೆ ತಲುಪಿಸಿದಂತಾಗುತ್ತದೆ ಎನ್ನುವುದು ಸ್ಥಳೀಯರ ಅಭಿಪ್ರಾಯ.

**ವರದಿ: ಜಗದೀಶ್ ಕುಮಾರ್ ಭೂಮಾ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 20
ದಿನಾಂಕ: 01–09–2025 ಪುಟಗಳು:16

# ಪ್ರಕೃತಿಯನ್ನು ಹಾಳು ಮಾಡಿದರೆ ದುರಂತ ತಪ್ಪಿದ್ದಲ್ಲ : ಪೂಜ್ಯ ಶಿವಾನಂದ ಗುರೂಜಿ



**ಬೆಳಗಾವಿ/ ಬೈಲಹೊಂಗಲ:** ಜೀವಿಗಳು ಬದುಕಲು ಭೂಮಿ, ಉಸಿರಾಟಕ್ಕೆ ಗಾಳಿ, ಕುಡಿಯಲಿಕ್ಕೆ ಜಲ ಬೆಚ್ಚಗಿರಲು ಅಗ್ನಿ, ಬೆಳಕು ಸೇರಿದಂತೆ ಸರ್ವಸ್ವ ನೀಡಿದ ನಿಸರ್ಗಕ್ಕೆ ಮಾನವರಾದ ನಾವು ಕೃತಜ್ಞತೆ ಸಲ್ಲಿಸಬೇಕು. ಪ್ರಕೃತಿಯನ್ನು ಹಾಳು ಮಾಡಿದರೆ ದುರಂತ ತಪ್ಪಿದ್ದಲ್ಲ ಎಂದು ಜಾಲಿಕೊಪ್ಪ ತಪೋಭೂಮಿಯ ಪೂಜ್ಯ ಶಿವಾನಂದ ಗುರೂಜಿ ಹೇಳಿದರು.

ಜಾಲಿಕೊಪ್ಪ ಗ್ರಾಮದ ಮಲಪ್ರಭಾ ನದಿ ದಡದಲ್ಲಿ ಬಾಗಿನ ಅರ್ಪಿಸಿದ ನಂತರ ತಪೊಭೂಮಿ ಆಶ್ರಮದಲ್ಲಿ ನಡೆದ ಸಭೆಯ ಸಾನಿಧ್ಯವಹಿಸಿ ಮಾತನಾಡಿದ ಅವರು, ಮನುಷ್ಯನ ಜೀವನಕ್ಕೆ ಬೇಕಾದ ಅನ್ನ, ನೀರು, ಗಾಳಿ, ವಸತಿ ಎಲ್ಲವನ್ನೂ ನಿಸರ್ಗದಿಂದ ಅನುಭವಿಸಿ ಮಾನವ ತನ್ನ ದುರಾಸೆಗೆ ಅನ್ನ ನೀಡುವ ಭೂಮಿಗೆ ವಿಷ ಹಾಕಿ ತನ್ನ ಆರೋಗ್ಯವನ್ನು ತಾನೆ ಹಾಳು ಮಾಡಿಕೊಳ್ಳುತ್ತಿದ್ದಾನೆ. ಕುಡಿಯವ ನೀರು, ಕೃಷಿ ಭೂಮಿಯ ನೀರಾವರಿಗಾಗಿ ತಾಯಿ ಮಲಪ್ರಭೆಯನ್ನು ಕೋಟ್ಯಾಂತರ ಜನ ಅವಲಂಬಿಸಿದ್ದಾರೆ, ಅವರೆಲ್ಲರೂ ಮಲಪ್ರಭಾ ನದಿ ಮೈದುಂಬಿಕೊಂಡಾಗಲೂ ಜನ ಮೈಮೆರೆಯುವುದು ದುರದೃಷ್ಟಕರ. ಪ್ರಕೃತಿಗೆ ಸದಾ ಕೃತಜ್ಞತಾ ಭಾವದಿಂದ ಇರಬೇಕೆಂದರು.

ಮಾಜಿ ಶಾಸಕ ಡಾ. ವಿ. ಆಯ್. ಪಾಟೀಲ ಮಾತನಾಡಿ, ರೈತರ ಕಷ್ಟಗಳನ್ನು ಅರಿತುಕೊಳ್ಳುವ ಜನಪ್ರತಿನಿಧಿಗಳಿಗೆ ಮಾತ್ರ ರೈತರ ಸಂಕಷ್ಟ ಅರ್ಥವಾಗುತ್ತದೆ, ನನ್ನ ಅಧಿಕಾರವಧಿಯ ಮುಂಚೆ ಮಲಪ್ರಭಾ ನದಿ ದಡದ ಪಂಪ್ ಸೆಟ್ ಬಳಕೆದಾರರ ಕರೆಂಟ್ ಕಟ್ ಮಾಡುತ್ತಿದ್ದ ಅಧಿಕಾರಿಗಳ ಕ್ರಮಕ್ಕೆ ಬ್ರೇಕ್ ಹಾಕಲಾಯಿತು, ಮುರಗೋಡ ಚಚಡಿ ಏತ ನೀರಾವರಿಗೆ ಹಣ ಬಿಡುಗಡೆ ಮಾಡಲಾಗಿತ್ತು ಆದರೂ ಇಂದು ರೈತರಿಗೆ ಹನಿ ನೀರು ಬರದೆ ಇರುವುದು ದುರ್ದೈವ. ವಿಪರ್ಯಾಸವೆಂದರೆ ರಾಜ್ಯದಲ್ಲಿ ಆಡಳಿತ ಪಕ್ಷದ ಶಾಸಕರಿದ್ದರೂ ನೀರಾವರಿ ಯೊಜನೆಗೆ ಬಿಡಿಗಾಸು ಬಂದಿಲ್ಲ ಮೊದಲು ನೀರಾವರಿ ಯೋಜನೆಗೆ ಆದ್ಯತೆ ನೀಡಬೇಕೆಂದರು.

ಬರುವ ದಿನಗಳಲ್ಲಿ ಸರ್ಕಾರ ಎಚ್ಚೆತ್ತುಕೊಂಡು ಮಲಪ್ರಭಾ ನದಿ ದಡದಲ್ಲಿರುವ ಹಳ್ಳಿಗಳ ಜಮೀನುಗಳಿಗೆ ನೀರಾವರಿ ಯೋಜನೆ ಅನುಷ್ಠಾನಗೊಳಿಸಬೇಕು. ಅಚ್ಚುಕಟ್ಟು ಪ್ರದೇಶದಲ್ಲಿರುವ ಏತ ನೀರಾವರಿ ಪಂಪಸೆಟ್ ಗಳು ಸಂಪೂರ್ಣ ಹಾಳಾಗಿದ್ದು ಅವುಗಳ ದುರಸ್ತಿ ಕಾರ್ಯಕ್ಕೆ ಅನಮೋದನೆ ನಮ್ಮ ಅಧಿಕಾರದಲ್ಲಿ ಪಡೆದಿದ್ದರೂ ಇಂದಿಗೂ ದುರಸ್ತಿ ನಡೆಸದೆ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯಕ್ಕೆ ಕಲ್ಲು ಹಾಕಿದ್ದಾರೆ ಎಂದರು. ಸವದತ್ತಿ ಎಪಿಎಂಸಿ ಮಾಜಿ ಅಧ್ಯಕ್ಷ ಎಫ್.ಎಸ್. ಸಿದ್ದನಗೌಡರ ಮಾತನಾಡಿ, 1974ರಲ್ಲಿ ನಿರ್ಮಾಣವಾದ ರೇಣುಕಾ ಸಾಗರ ಜಲಾಶಯ 11ನೇ ಬಾರಿ ತುಂಬಿದೆ. ಈ ವರ್ಷ ಜಲಾಶಯ ತುಂಬಿರುವುದರಿಂದ ನದಿ ಪಾತ್ರದ ಹಾಗೂ ಹುಬ್ಬಳ್ಳಿ–ಧಾರವಾಡ, ಗದಗ ಹಾಗೂ ಬಾಗಲಕೋಟೆ ಜಿಲ್ಲೆಯ ಜನತೆಗೆ ಕುಡಿಯುವ ನೀರಿಗೆ ಚಿಂತೆ ಇಲ್ಲದಂತಾಗಿದೆ.

**ಶರಣರ ವೇಷಧಾರಿ ಮಕ್ಕಳ ಮೆರವಣಿಗೆ**

**ಅಕ್ಕಮಹಾದೇವಿ, ಬಸವಣ್ಣನವರ, ಚನ್ನಬಸವಣ್ಣನವರು, ಮಡಿವಾಳ ಮಾಚಿದೇವ, ಅಜಗಣ್ಣ, ನಾಗಲಾಂಬಿಕೆ, ಗಂಗಾಂಭಿಕೆ ವೇಷ ತೊಟ್ಟ ಮಕ್ಕಳ ಜೊತೆಗೆ ಟ್ಯಾಕ್ಟರ್ ನಲ್ಲಿ ಜಾಲಿಕೊಪ್ಪ ಗ್ರಾಮದ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.**

ನೂರಾರು ರೈತರು ಕುಟುಂಬ ಸಮೇತ ಆಗಮಿಸಿ ಮಲಪ್ರಭೆಗೆ ಬಾಗಿನ ಅರ್ಪಿಸಿದ್ದು ರೈತರ ಕರ್ತವ್ಯವನ್ನು ಎಚ್ಚ–ರಿಸಿದೆ. ಪೂಜ್ಯರ ನೇತೃತ್ವದಲ್ಲಿ ಮಲಪ್ರಭಾ ಸ್ವಚ್ಚತಾ ಕಾರ್ಯಕ್ರಮ, ಮಲಪ್ರಭಾ ಆರತಿ ಕಾರ್ಯಕ್ರಮ ಬಾಗಿನ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ ಎಂದರು.

ನಿವೃತ್ತ ಪ್ರಾಂಶುಪಾಲ ಡಾ. ಗಿರೀಶ್ ಗಣಾಚಾರಿ ಮಾತನಾಡಿ, ಶರಣರು ಮೆಟ್ಟಿದ ಭೂಮಿಯಲ್ಲಿ ಶರಣ–ರ ವಚನಗಳನ್ನು ಕೇಳಿ ಅವುಗಳ ತತ್ವದಡಿ ನಡೆದರೆ ಜೀವನ ಪಾವನವಾಗುವುದು ಎಂದರು. ವೇದಿಕೆಯ ಮೇಲೆ ಮಲ್ಲಪ್ಪ ಮುರಗೋಡ, ಡಾ.ಸಿ.ಬಿ.ಗಣಾಚಾರಿ, ಯಲ್ಲಪ್ಪ ಹುಲಗಣ್ಣವರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜಾಲಿಕೊಪ್ಪ ತಪೋಭೂಮಿ ಆಶ್ರಮದಿಂದ ಭಜನೆ, ಆರತಿ ಎತ್ತಿದ ರೈತ ಮಹಿಳೆಯರು ರೈತ ಸಂಘಟನೆಯ ನೂರಾರು ನಾಯಕರು ವಿಜೃಂಭಣೆಯಿಂದ ನಡೆದುಕೊಂಡು ಸಾಗಿ ನದಿ ದಡದಲ್ಲಿ ಬಾಗಿನ ಅರ್ಪಣೆಯ ಕಂಕೈರ್ಯಗಳನ್ನು ನೆರವೇರಿಸಿದರು. ರೈತ ಸಂಘಟನೆಕಾರರ ಮಹಾ ಒಕ್ಕೂಟದ ಅಧ್ಯಕ್ಷ ಬೀರಪ್ಪ ದೇಶನೂರ, ಬಸನಗೌಡ ಪಾಟೀಲ, ಬಸವರಾಜ ಮೊಕಾಶಿ, ಘೂಳಪ್ಪ ಹೊಳಿ, ಬಸಲಿಂಗವ್ವ ಕರಡಿಗುದ್ದಿ, ಮಲ್ಲಸರ್ಜಗೌಡ ಪಾಟೀಲ, ಪರಪ್ಪ ಬೊಳಶೆಟ್ಟಿ, ಮಲ್ಲಿಕಾರ್ಜುನ ಅಂಗಡಿ, ಸಂಜು ಬೋಳೆಶೆಟ್ಟಿ, ಮಂಜುನಾಥ ಬೋಳಶೆಟ್ಟಿ, ರಾಜು ಬೋಳಶೆಟ್ಟಿ, ಸಿದ್ಧಲಿಂಗ ಬೋಳಶೆಟ್ಟಿ, ಅರ್ಜುನ ಕೊಡ್ಲಿ, ಬಾಬೂರಾವ ಬೋಳಶೆಟ್ಟಿ, ಎಮ್.ಐ ಕಾದ್ರೊಳ್ಳಿ, ಪರಪ್ಪ ಬೊಳಶೆಟ್ಟಿ, ಅಶೋಕ ಪೆಟೆಂದ, ಮಹೇಶ ಅಬ್ಬಾಯಿ, ಮಡ್ಡೆಪ್ಪ ಮುಲಿಮನಿ, ರವಿ ಮುರಗೋಡ, ಬಾಬು ಅಂಗಡಿ, ರಾಜು ಬೋಳಶೆಟ್ಟಿ, ಮಲ್ಲಪ್ಪ ಹುಬ್ಬಳ್ಳಿ, ಬಸವಾಣೆಪ್ಪ ಹೊಳಿ, ಮಂಜುನಾಥ ಬೊಳಶೆಟ್ಟಿ, ಈರಣ್ಣ ಬೋಳಶೆಟ್ಟಿ ಸೇರಿದಂತೆ ನೂರಾರು ಜನರು ಪಾಲ್ಗೊಂಡಿದ್ದರು.

**ವರದಿ ಮಂಜು .ಎಮ್. ಚಿಕ್ಕಣ್ಣವರ**

# ಲಕ್ಕಮ್ಮದೇವಿ ದೇವಸ್ಥಾನದಲ್ಲಿ ಗಣೇಶ ಪ್ರತಿಷ್ಠಾಪನೆ



**ವಿಜಯಪುರ/ ಇಂಡಿ:** ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ಇಂಡಿ ತಾಲೂಕಿನ ದೇಗಿನಾಳ ಗ್ರಾಮದ ಜೈ ಭೀಮ್ ನಗರದಲ್ಲಿ ಗಜಾನನ ಯುವಕ ಮಂಡಳಿ ವತಿಯಿಂದ ಲಕ್ಕಮ್ಮದೇವಿ ದೇವಸ್ಥಾನದಲ್ಲಿ ಗಣೇಶ ಪ್ರತಿಷ್ಠಾಪನೆ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಮಂಡಳಿ ಅಧ್ಯಕ್ಷರಾದ ಆಕಾಶ ಸಿಲಾದಾರ ಶಿವಶರಣ ಇವರು ಗಣೇಶ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ಹತ್ತು ವರ್ಷಗಳಿಂದ ಅನ್ನಪ್ರಸಾದ ಮಾಡುತ್ತಾ ಬಂದಿದ್ದಾರೆ. ಈ ವರ್ಷವೂ ಇವರು ಪ್ರಸಾದ ವ್ಯವಸ್ಥೆ ಮಾಡಿದರು. ಪೂಜ್ಯರಾದ ಸಂಗಯ್ಯ ಹಿರೇಮಠ ಅವರು ಪೂಜಾ ಕಾರ್ಯಕ್ರಮ ನೆರವೇರಿಸಿದರು. ಗಣೇಶ ವಿಸರ್ಜನೆ ವೇಳೆ ಎಲ್ಲರೂ ಶಾಂತಿಯಿಂದ ಕಾನೂನು ಪಾಲನೆ ಮಾಡೋಣ, ಕಾನೂನಿಗೆ ನಾವು ಗೌರವಿಸಿದರೆ ಕಾನೂನು ನಮ್ಮನ್ನು ಗೌರವಿಸುತ್ತದೆ ಎಂದು ಚಡಚಣ ಕೋಳಿ ಸಮಾಜದ ಅಧ್ಯಕ್ಷರಾದ ಮಲ್ಲು ವಾಲಿಕಾರ ಅವರು ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಮಾಜಿ ಗ್ರಾಮ ಪಂಚಾಯತ್ ಸದಸ್ಯರು ಕೊಳುರ್ಗಿ ಸಿಲದಾರ ಶಿವಶರಣ, ಸಿದ್ದು ಕಾಳೆ, ಕಾರ್ತಿಕ್ ನೀಲಂಗಿ , ಆಕಾಶ್ ಗಾಯಕವಾಡ ಅಕ್ಷಯ್ ಶಿವಶರಣ ನಿವೃತ್ತ ಎ ಎಸ್ ಐ ಮುರಳಿ ಶಿವಶರಣ ಸೇರಿದಂತೆ ಇತರರು ಇದ್ದರು.

**ವರದಿ ಆನಂದ ಹರಿಜನ**




KARUNADA KANDA Fourthnightly, Printed by, Published by, owned by KARIBASAPPA BALIGAR and Printed at Nikhil offset Printers Ward No 23, Buddha Circle, Hosalli main Road, Gangavati 583227.Tq-Gangavati, Dist:Koppal, and Published at : # 94,at-Post-Gunnal, Tq-Yalaburga,Dst-Koppal,pin-583237,PH:9986366909, 9742776385 Editor-KARIBASAPPA BALIGAR